
ಅಕ್ಟೋಬರ್ 19, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2007
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ನರಹಂತಕನ 'ಸಂಹಾರ'ವಾಗಿ ಇಲ್ಲಿಗೆ 21 ವರ್ಷ!

# ವೀರಪ್ಪನ್ ಪ್ರೈಜ್ ಕ್ಯಾಷ್ ಏನಾಯ್ತು?!



ಲೆಕ್ಕಾಚಾರ ನಡೆದಿದೆ ಈಗ!!



## ಸೆಂಟ್ರಲ್ ಜೈಲ್‌ನಲ್ಲಿ ರೌಡಿಶೀಟರ್ ಗುಬ್ಬಚ್ಚಿ ಸೀನನ ಭರ್ಜರಿ ಬರ್ತ್‌ಡೇ!

## ಅರಮನೆ ಬಳಿಯೇ ಅಮಾಯಕ ಬಾಲಕಿಯ ರೇಪ್ & ಮರ್ಡರ್!



## ದೇಶ ದ್ರೋಹಿ 'ಮೌಲ್ವಿ' ಅರೆಸ್ಟ್!



## ಹೀರೋಯಿನ್‌ಗೆ ಕಾಮ ಕಾಟ!

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)



## ಲಯನ್ ಎಂ. ಮಲ್ಲಿಕಾರ್ಜುನಯ್ಯ

ಸಂಸ್ಥಾಪಕ ಸಂಪಾದಕರು

ಜನನ : 29-03-1954 ಮರಣ : 22-11-2005

### ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರ್ತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯುರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)


**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ಗೌಡ್ರು ನಮ್ಮ ಕಚೇರಿಗೆ ಬಂದಿದ್ದು... ಸಂಪಾದಕರ ಕ್ಷೇಮ ವಿಚಾರಿಸಿದ್ದು...



ಎಂ. ಮಲ್ಲಿಕಾರ್ಜುನಯ್ಯನವರೊಂದಿಗೆ ಉಭಯಕುಶಲೋಪರಿ

ಸರ್ದಾರ್ ವಲ್ಲಭ ಬಾಯಿ ಪಟೇಲ್ ಉಕ್ಕಿನ ಮನುಷ್ಯ ಹೌದೋ ಅಲ್ಲವೋ ಗೊತ್ತಿಲ್ಲ, ನಮ್ಮ ದೇವೇಗೌಡರು ಮಾತ್ರ ಉಕ್ಕಿನ ಮನುಷ್ಯರೇ ಕಣ್ರೀ. ಅವರಿಗೆ ಈಗ 92 ತುಂಬಿದೆ. ಈ ವಯಸ್ಸಿನಲ್ಲೂ ರಾಜಕೀಯ ಸೇವೆ ಮಾಡುತ್ತಾರೆ. ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ಬೆಂಗಳೂರಿಂದ ದೆಹಲಿಗೆ, ದೆಹಲಿಯಿಂದ ಬೆಂಗಳೂರಿಗೆ ಆಗಾಗ ಪಯಣಿಸುತ್ತಲೇ ಇರುತ್ತಾರೆ. ಆದರೇನು ಮಾಡೋದು... ಅವರಿಗೆ ವಯೋಸಹಜ ಅನಾರೋಗ್ಯ. ಇದು ಆಗಾಗ ಕಾಡುತ್ತಲೇ ಇರುತ್ತದೆ.

ನಿಮಗೆಲ್ಲ ಗೊತ್ತಿರುವಂತೆ ಅನಾರೋಗ್ಯದ ಹಿನ್ನಲೆಯಲ್ಲಿ ಕಳೆದ ವಾರ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು.ವಾರ ಕಾಲ ಚಿಕಿತ್ಸೆ ನಡೆದು ಸದ್ಯ ಅವರ ಆರೋಗ್ಯ ಸ್ಥಿರವಾಗಿದ್ದು ನಿನ್ನೆ ಸೋಮವಾರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಜ್ವರ ಹಾಗೂ ಯೂರಿನ್ ಇನ್‌ಫೆಕ್ಷನ್‌ನಿಂದಾಗಿ ದೇವೇಗೌಡ ಅವರು, ಅಕ್ಟೋಬರ್ 6ರಂದು ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದರು.

☞ 3



ನಮ್ಮ ಸಂಪಾದಕರ ಕುಟುಂಬದೊಂದಿಗೆ ದೇವೇಗೌಡರು, ಈ ಸಂಜೆ ಟಿ. ವೆಂಕಟೇಶ್ ಸರ್



ಸಂಪಾದಕ
**ಎಂ. ರಾಹುಲ್**

**ನನ್ನ ಟೀಂ**

ಹೆಚ್.ಕೆ. ಮಹದೇವ್
ಸಿದ್ದು ಮನ್ನಾಪೂರ
ಮೋಹನ್ ಬೋಳಂಗಡಿ
ಕೋ.ನಾ. ಪ್ರಭಾಕರ್
ವೀರಶೆಟ್ಟಿ ಕುಂಬಾರ
ಬಿ.ಎಂ. ಲವಕುಮಾರ್
ಶಾಂತರಾಜು ಬಿ. ಕಲ್ಲಹಳ್ಳಿ
ಬಿ.ವಿ. ಕುಲಕರ್ಣಿ
ಡಿ. ಸಿದ್ದರಾಜು
ರಾಜೀವ್ ಕೆ. ಬೈರಿ
ಸಂತೋಷ್‌ಕುಮಾರ್ (ಜ್ಯೋತಿಷಿ)
ವೀರನಗೌಡ
ಮಂಜುನಾಥ ಕರೋಳಿ

ಅಕ್ಷರ ಜೋಡಣೆ :
ಈ. ರಾಜೇಶ್
ಪ್ರಸರಣಾಧಿಕಾರಿ :
**ಜಿ. ವೀರನಗೌಡ**

# ನಮ್ಮ ಸ್ವಾರ್ಥಕ್ಕಾಗಿ ಪರಿಸರ ನಾಶ ಮಾಡುವುದು ಸರಿಯೇ?

**ಬೆಂ**ಗಳೂರಿನಲ್ಲಿ 'ನಮ್ಮ ಮೆಟ್ರೋ'ದ 3ನೇ ಹಂತದ ಯೋಜನೆಯಡಿ ಜೆ.ಪಿ.ನಗರ 4ನೇ ಹಂತದಿಂದ ಹೆಬ್ಬಾಳದ ಕೆಂಪಾಪುರದವರೆಗೆ ನಿರ್ಮಿಸುತ್ತಿರುವ 'ವಿವಿಧ' ಮೆಟ್ರೊ ರೈಲು ಮಾರ್ಗ ನಿರ್ಮಾಣಕ್ಕೆ ಸಾವಿರಾರು ಮರಗಳು ಧರೆಗುರುಳಲಿವೆ ಎಂದು ಗೊತ್ತಾಗಿದೆ.

ನಮ್ಮ ಮೆಟ್ರೋ ಮೂರನೇ ಹಂತದ ಯೋಜನೆಗಾಗಿ ಬರೋಬ್ಬರಿ 11,137 ಮರಗಳನ್ನು ಕಡಿಯಲು ಮತ್ತು ಸ್ಥಳಾಂತರಿಸಲು ತಿರ್ಮಾನ ಮಾಡಲಾಗಿದೆ. 1ನೇ ಕಾರಿಡಾರ್ ಜೆಪಿ ನಗರ 4ನೇ ಹಂತದಿಂದ ಕೆಂಪಾಪುರವರೆಗೆ 32.15 ಕಿಲೋ ಮೀಟರ್ ಮಾರ್ಗದಲ್ಲಿ 21 ನಿಲ್ದಾಣಗಳಿರಲಿವೆ. 2ನೇ ಕಾರಿಡಾರ್ ಹೊಸಹಳ್ಳಿಯಿಂದ ಕಡಬಗೆರೆಯವರೆಗೆ 12.50 ಕಿಲೋ ಮೀಟರ್ ಇದ್ದು, 9 ನಿಲ್ದಾಣಗಳು ಇರಲಿವೆ. ಒಟ್ಟು 44.65 ಕಿ.ಮೀ ಉದ್ದವಿರುವ ಎರಡು ಮೆಟ್ರೋ ಮಾರ್ಗ ಇರಲಿವೆ. 15,611 ಕೋಟಿ ರೂ. ವೆಚ್ಚದಲ್ಲಿ ಎರಡು ಮಾರ್ಗದ ಕಾಮಗಾರಿ ನಡೆಯಲಿದೆ. ಆದರೆ ಬಿಎಂಆರ್ ಸಿಎಲ್ ಹೇಳೋದೇ ಬೇರೆ.ನಾವು ಅಷ್ಟೊಂದು ಮರಗಳನ್ನು ಕಡಿಯುವುದಿಲ್ಲ, 11,137



ಮರಗಳು ಮೂರನೇ ಹಂತದ ಕಾಮಗಾರಿ ಜಾಗದಲ್ಲಿ ಬರುತ್ತವೆ ಎಂಬುದಷ್ಟೇ ಮಾಹಿತಿ. ಅದರ ಅರ್ಥ ಅವುಗಳನ್ನೆಲ್ಲ ಕಡಿಯುತ್ತೇವೆ ಎಂದಲ್ಲ, ಲೆಕ್ಕ ಹಾಕಲಾಗಿರುವುದರಲ್ಲಿ ಸಣ್ಣದಾದ ಗಿಡದಿಂದ ಹಿಡಿದು ದೊಡ್ಡ ಮರದವರೆಗೆ ಲೆಕ್ಕ ಹಾಕಲಾಗಿರುತ್ತದೆ ಎಂದು ಬಿಎಂಆರ್‌ಸಿಎಲ್ ಹಿರಿಯ ಸಂಪರ್ಕಾಧಿಕಾರಿ ಯಶ್ವಂತ್ ಚೌವ್ಹಾಣ್ ಸ್ಪಷ್ಟನೆ ನೀಡಿದ್ದಾರೆ.

ಮತ್ತೊಂದೆಡೆ, ಈ ಎರಡು ಮಾರ್ಗಗಳಲ್ಲೂ ಮರಗಳನ್ನು ಕಡಿಯಲು ಈಗಾಗಲೇ ಬಿಎಂಆರ್‌ಸಿಎಲ್ ಸಿದ್ಧತೆ ಮಾಡಿಕೊಂಡಿದೆ ಎಂದು ಪರಿಸರವಾದಿಗಳು ಆರೋಪಿಸಿದ್ದಾರೆ. ಮರಗಳನ್ನು ಕಡಿಯುವ ಮುನ್ನ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಬೇಕು. ಏಕಾಏಕಿ ಮರಗಳನ್ನು ಕಡಿಯಲು ಮುಂದಾಗಬಾರದು. ಮರಗಳನ್ನು ಸ್ಥಳಾಂತರಿಸಲು ಮುಂದಾಗಬೇಕು. ಮೆಟ್ರೋಕ್ಕಾಗಿ ಕಡಿಯುವ ಮರಗಳ ಬದಲಿಗೆ ಬೇರೆಡೆ ಗಿಡಗಳನ್ನು ನೆಡಲು ಬೆಂಗಳೂರಿನಲ್ಲಿ ಜಾಗವಿಲ್ಲ ಎಂದು ಪರಿಸರ ಹೋರಾಟಗಾರ ವಿಜಯ್ ನಿಶಾಂತ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಒಟ್ಟಿನಲ್ಲಿ ಮೂರನೇ ಹಂತದ ನಮ್ಮ ಮೆಟ್ರೋ ಕಾಮಗಾರಿಗಾಗಿ ಬರೋಬ್ಬರಿ 11 ಸಾವಿರ ಮರಗಳನ್ನು ಕಡಿಯಲು ಮೆಟ್ರೋ ಮುಂದಾಗಿದೆ ಎಂಬುದು ಪರಿಸರ ಹೋರಾಟಗಾರರ ಆರೋಪ, ಆಕ್ರೋಶ. ಆದರೆ ನಮ್ಮ ಮೆಟ್ರೋ ಮಾತ್ರ,ಅಷ್ಟು ಮರಗಳನ್ನು ಕಡಿಯುವುದಿಲ್ಲ ಎನ್ನುತ್ತಿದೆ.

44. 65 ಕಿ.ಮೀ ಉದ್ದದ ಈ ಮಾರ್ಗದಲ್ಲಿ 37 ಕಿ.ಮೀ ಡಬಲ್ ಡೆಕ್ಕರ್ ಮೇಲ್ಸೇತುವೆ ಬರಲಿದೆಯಂತೆ. ಅಲ್ಲಿ ಸಾವಿರಾರು ಹಸಿರು ಮರಗಳಿದ್ದು ಸದ್ಯ 1,092 ಮರಗಳನ್ನು ಕಡಿಯಲು ಬಿಎಂಆರ್‌ಸಿಎಲ್‌ಗೆ ಸರ್ಕಾರ ಅನುಮತಿಸಿದೆಯಂತೆ. ಮೆಟ್ರೋ ಮಾರ್ಗ ಹಾಗೂ ಆಯಾ ನಿಲ್ದಾಣಕ್ಕೆ ಅಡ್ಡಿಯಾಗಲಿರುವ ಮರಗಳನ್ನಷ್ಟೆ ತೆರವುಗೊಳಿಸಿ, ಉಳಿದವುಗಳನ್ನು ಸ್ಥಳಾಂತರಿಸಲು ನಿರ್ಧರಿಸಲಾಗಿದೆ ಎಂತಲೂ ತೇಪೆ ಸಾರಿಸಲಾಗಿದೆ. ಇದೇನೇ ಇರಲಿ, ನಮ್ಮ ಸ್ವಾರ್ಥಕ್ಕಾಗಿ, ಯಾರನ್ನೋ ಉದ್ದಾರ ಮಾಡಲಿಕ್ಕಾಗಿ ಉಸಿರು ನೀಡೋ ಹಸಿರುಮರಗಳನ್ನು ಹನನ ಮಾಡೋದು ಸರಿಯೇ?

ಈಗಾಗಲೇ ಮೆಟ್ರೋ ಯೋಜನೆಗಾಗಿ ಸಾವಿರಾರು ಮರಗಳು ಬಲಿಯಾಗಿವೆ. ಮೇಲ್ಸೆತುವೆ ನಿರ್ಮಾಣ, ಉಪನಗರ ರೈಲು ಯೋಜನೆ, ರಸ್ತೆ ವಿಸ್ತರಣೆಗೆ ಸಾವಿರಾರು ಮರಗಳನ್ನು ಕಡಿಯಲಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಮಹಾನಗರದಲ್ಲಿ ಹಸಿರಿನ ಪ್ರಮಾಣ ವರ್ಷದಿಂದ ವರ್ಷಕ್ಕೆ ಕ್ಷಿಣಿಸುತ್ತಲೇ ಇದೆ.

ಜನ ದಟ್ಟಣೆ ತಗ್ಗಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಮೆಟ್ರೊ ಮಾರ್ಗ ನಿರ್ಮಿಸಲಾಗುತ್ತಿದೆ ನಿಜ.ಹಾಗಂತ ಇದಕ್ಕೆ ಪರ್ಯಾಯ ವ್ಯವಸ್ಥೆಯೇ ಇಲ್ಲವೇ.... ಮರಗಳ ಅಹುತಿ ಬಿಟ್ಟು ಬೇರೇನೂ ಮಾಡಲಾಗದೆ?

ನಿಮಗೆ ಗೊತ್ತಿದೆಯಾ... ಮೆಟ್ರೋ ಮಾರ್ಗ, ನಿಲ್ದಾಣ ನಿರ್ಮಾಣ, ರಸ್ತೆ ವಿಸ್ತರಣೆ ಸೇರಿದಂತೆ ಇನ್ನಿತರೆ ಕಾಮಗಾರಿಗೆ ಅಡ್ಡಿಯಾಗಿರುವ ಮರಗಳನ್ನು ತೆರವುಗೊಳಿಸಲು ಅನುಮತಿ ಕೋರಿ ಬಿಎಂಆರ್‌ಸಿಎಲ್, ಜಿಬಿಎ ಅರಣ್ಯ ವಿಭಾಗಕ್ಕೆ ಪ್ರಸ್ತಾವನೆ ಸಲ್ಲಿಸಿತ್ತು. ಕಾಮಗಾರಿಗೆ ಅಡ್ಡಿಯಾಗಲಿರುವ ಒಟ್ಟು 2,184 ಮರಗಳನ್ನು ತೆರವುಗೊಳಿಸಲು ಗುರುತಿಸಲಾಗಿತ್ತು. ಅರಣ್ಯ ವಿಭಾಗದ ಮರ ತಜ್ಞರ ಸಮಿತಿಯು ಪರಿಶೀಲನೆ ನಡೆಸಿ, ಮೆಟ್ರೋ ಮಾರ್ಗದ ವಿನ್ಯಾಸದಲ್ಲಿಕೊಂಚ ಬದಲಾವಣೆ ಮಾಡಲು ಸೂಚಿಸಿ 686 ಮರಗಳನ್ನು ಅಲ್ಲಿಯೇ ಉಳಿಸಲು ಶಿಫಾರಸು ಮಾಡಿ ಉಳಿದ ಮರಗಳನ್ನು ತೆರವಿಗೆ ನಿರ್ಧಾರಿಸಲಾಗಿದ್ದು, ಇದೀಗ 1,092 ಮರಗಳನ್ನ ತೆರವುಗೊಳಿಸಲು ಅನುಮೋದನೆ ನೀಡಲಾಗಿದೆ. ಉಳಿದ 406 ಮರಗಳನ್ನು ಬೇರೆಡೆಗೆ ಸ್ಥಳಾಂತರಿಸಲು ನಿರ್ಧರಿಸಲಾಗುವುದಂತೆ.

ಇದಲ್ಲದೆ, ಮೈಸೂರು ರಸ್ತೆಯಿಂದ ಕಂಠೀರವ ಸ್ಟುಡಿಯೊವರೆಗೆ ಮೆಟ್ರೋ ಮಾರ್ಗ, ಮೆಟ್ರೋ ನಿಲ್ದಾಣಗಳು, ರಸ್ತೆ ಅಗಲೀಕರಣ ಹಾಗೂ ಇತರೆ ಕಾಮಗಾರಿಗಳಿಗೆ ಅಡ್ಡಿಯಾಗುತ್ತಿರುವ 2,175 ಮರಗಳ ತೆರವಿಗೆ ಅನುಮತಿ ಕೋರಲಾಗಿದೆ!

ಈಗ ಧರೆಗುರುಳುತ್ತಿರೋ ಮರಗಳು ಯಾವ್ಯಾವ ಜಾತಿ ಮರಗಳು ಗೊತ್ತೇ... ಹೊಂಗೆ, ಟಬೂಬಿಯಾ, ನೀಲಗಿರಿ, ಗುಲ್ಮೊಹರ್, ಚೆರ್ರಿ, ಕಾಡು ಬಾದಾಮಿ, ಮಹಾಗನಿ, ತೆಂಗು, ಅಶೋಕ, ಕದಂಬ ಮರ, ಊರ್ವಶಿ, ಬೇವು, ಅರಳಿ, ಹಲಸು, ಆಕಾಶ ಮಲ್ಲಿಗೆ, ನೇರಳೆ, ಬೂರಗ, ಹತ್ತಿ, ಸಂಪಿಗೆ, ತೇಗ, ಕಣಗಲೆ, ಬಿಲ್ವಪತ್ರೆ, ಸಿಲ್ವರ್ ಓಕ್ ಮರಗಳು... ಇಷ್ಟಕ್ಕೂ ಈಗ ಸ್ಥಳಾಂತರಗೊಂಡ ಬಳಿಕ ಆ ಮರಗಳನ್ನು ಮಾರತ್‌ಹಳ್ಳಿಯ ಕೆಎಸ್‌ಆರ್‌ಪಿ ವಸತಿ ಸಮುಚ್ಚಯದ ಆವರಣ, ಕೋರಮಂಗಲ 1ನೇ ಬ್ಲಾಕ್, ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಖಾಲಿ ಇರುವ ಜಾಗದಲ್ಲಿ ನೆಡಲು ತೀರ್ಮಾನಿಸಲಾಗಿದೆಯಂತೆ. ಜಿಬಿಎ ಅರಣ್ಯ ವಿಭಾಗವೇ ಮರಗಳನ್ನು ಸ್ಥಳಾಂತರಿಸಲಿದ್ದು, ಅದಕ್ಕೆ ತಗಲುವ ವೆಚ್ಚವನ್ನು ಬಿಎಂಆರ್‌ಸಿಎಲ್ ಭರಿಸಲಿದೆಯಂತೆ.


ಅಂದಹಾಗೆ, ಈ ಮರಗಳ ತೆರವು, ಗಿಡ ನೆಡುವುದೂ ಸೇರಿದಂತೆ ಎಲ್ಲವನ್ನೂ ಹೈಕೋರ್ಟ್ ಮೇಲ್ವಿಚಾರಣೆ ನಡೆಸುತ್ತಿದೆ. ಮರಗಳ ತೆರವಿಗೆ ಸಂಬಂಧಿಸಿದಂತೆ ಬಿಎಂಆರ್‌ಸಿಎಲ್ ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಲಿದೆ. ನ್ಯಾಯಾಲಯ ಅನುಮತಿ ನೀಡಿದರಷ್ಟೆ ಮರ ಕಡಿಯಲಾಗುತ್ತದೆ ಎಂದಿದ್ದಾರೆ, ಅರಣ್ಯ ಸಂರಕ್ಷಣಧಿಕಾರಿ ಜಿ.ಕೆ. ಸುದರ್ಶನ್.... ಪರಿಸರ ಪ್ರೇಮಿಗಳಂತು ಮರಗಳ ಹನನಕ್ಕೆ ವಿರೋಧ ವ್ಯಕ್ತಪಡಿಸಿ ಹೋರಾಟ ಆರಂಭಿಸಿದ್ದಾರೆ....

**-ಸಂ.**

2 ☞ ಇದೀಗ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ.

ವೈದ್ಯರ ಸಲಹೆಯಂತೆ ಮುಂದಿನ ಕೆಲವು ದಿನಗಳು ಅವರು ಮನೆಯಲ್ಲಿ ವಿಶ್ರಾಂತಿ ಪಡೆಯಲಿದ್ದಾರೆ. ಸುಮಾರು 15 ದಿವಸ ವಿಶ್ರಾಂತಿ ಬೇಕೇ ಬೇಕು. ಹಾಗಾಗಿ, ದಯವಿಟ್ಟು ಯಾರೂ ಅವರ ಮನೆಗೆ ತೆರಳಿ ನೋಡಲು, ಮಾತಾಡಲು ಹಾತೊರೆಯಬೇಡಿ. 15 ದಿನಗಳ ಬಳಿಕ ದೇವೇಗೌಡರೇ ಜೆಪಿ ಭವನಕ್ಕೆ ಆಗಮಿಸಿ ಅಭಿಮಾನಿಗಳನ್ನು ಭೇಟಿಯಾಗಲಿದ್ದಾರೆ.

ಅಂದಹಾಗೆ, ಈ ಸಮಯದಲ್ಲಿ ನಾವೊಂದು ಸಂಗತಿಯನ್ನು ನಿಮ್ಮೊಡನೆ ಹಂಚಿಕೊಳ್ಳಬೇಕು. ಈಗ್ಗೆ 20 ವರ್ಷಗಳ ಹಿಂದೆ ದೊಡ್ಡ ಯಜಮಾನರಿಗೆ (ಸಂಪಾದಕರು) ಕಿಡ್ನಿ ಫೇಲ್ಯೂರ್ ಆಗಿ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಮಯದಲ್ಲಿ, ಈ ಸಂಜೆ ಮಾಲೀಕರಾದ ಟಿ.ವೆಂಕಟೇಶ್ ಅಣ್ಣನಿಂದ ಈ ವಿಷಯ ತಿಳಿದ ಪ್ರಧಾನಿ ಹೆಚ್.ಡಿ ದೇವೇಗೌಡರು,



ಮಣಿಪಾಲ್ ಆಸ್ಪತ್ರೆಯಲ್ಲಿ ಓದಿನಲ್ಲಿ ನಿರತರಾಗಿರುವ ಗೌಡರು

ಅವರನ್ನು ಕರೆದುಕೊಂಡು ಸೀದಾ ನಮ್ಮ ಕಚೇರಿಗೆ ಆಗಮಿಸಿದ್ದರು. ಕಚೇರಿ ಪಕ್ಕದಲ್ಲೇ ಸಂಪಾದಕರ ಮನೆ. ಪ್ರಧಾನಿಗಳೇ ಮನೆಗೆ ಬಂದಾಗ ನಮ್ಮ ಸಂಪಾದಕರಿಗೆ ಮತ್ತು ಪೊಲೀಸ್ ನ್ಯೂಸ್ ಪತ್ರಿಕಾ ಬಳಗಕ್ಕೆ ಆದ ಖುಷಿ ಅಷ್ಟಿಷ್ಟಲ್ಲ... ನಮ್ಮ ಸಂಪಾದಕರು ಸ್ವತಃ ಡಯಾಲಿಸಿಸ್ ಮಾಡಿಕೊಳ್ಳುವುದನ್ನು ನೋಡಿ, ಇಂಥ ಪರಿಸ್ಥಿತಿಯಲ್ಲೂ ನಿಮ್ಮ ಉತ್ಸಾಹ ಮೆಚ್ಚುವಂಥದ್ದು... ಅದೆಷ್ಟು ಪತ್ರಿಕೆಗಳನ್ನು ಸ್ಥಾಪಿಸಿದ್ದೀರಿ... ಹೊರ ದೇಶದಲ್ಲೂ ಕನ್ನಡದ ಕಂಪು ಪಸರಿಸಿದ್ದೀರಿ.... ಎಂದೆಲ್ಲ ಹೊಗಳಿದ್ದರು. ಇದೆಲ್ಲಾ ನೆನಪಾಗಿ ಇಂದಿಗೂ ಮೈಮನಸ್ಸು ಪುಳಕಗೊಳ್ಳುತ್ತದೆ.

ಮಾನ್ಯ ದೇವೇಗೌಡರು ಡೌನ್ ಟು ಅರ್ಥ್ ಎಂಬಂತೆ ಬದುಕಿದವರು. ಇಂದಿಗೂ ಹಾಗೆಯೇ ಜೀವಿಸುತ್ತಿದ್ದಾರೆ. ಅವರು ಆರೋಗ್ಯವಂತರಾಗಿ ಆಯುಷ್ಮಾನ್ಯರಾಗಿ ಇನ್ನಷ್ಟು ಕಾಲ ನಮ್ಮ ನಡುವೆ ಇರಬೇಕು. ಎಲ್ಲರಿಗೂ ಸ್ಫೂರ್ತಿಯಾಗಬೇಕು ಎಂಬುದೇ ನಮ್ಮಾಸೆ...

☯



ಡಿಸ್ಚಾರ್ಜ್ ಆಗಿ ಮನೆಗೆ ಹೊರಟಾಗ

# ಸೆಂಟ್ರಲ್ ಜೈಲ್‌ನಲ್ಲಿ ರೌಡಿ ಗುಬ್ಬಚ್ಚಿ ಸೀನ ಭರ್ಜರಿ ಬರ್ತ್‌ಡೇ!

**ಸಖಿ ಪವಿತ್ರ ಗೌಡ್ತಿ ಮೊಬೈಲ್‌ಗೆ ಕಾಮ ಸಂದೇಶ ಕಳಿಸಿ ಕಾಡ್ತಿದ್ದ ಚಿತ್ರದುರ್ಗದ ಕಡು ಪಾಪಿ ರೇಣುಕಾಸ್ವಾಮಿಯನ್ನ ಬೆಂಗಳೂರಿಗೆ ಎತ್ತಾಕಿಕೊಂಡು ಬಂದು, ಗೌಡ್ತಿ ಖುಷಿಗಾಗಿ ನರಪೇತಲನಿಗೆ ಚಿತ್ರಹಿಂಸೆ ಕೊಟ್ಟು ಕೊಂದ ಆರೋಪದ ಮೇಲೆ ಪರಮ ದುರಹಂಕಾರಿ ನಟ ದರ್ಶನ್ ಸೆಂಟ್ರಲ್ ಜೈಲಿನಲ್ಲಿ ಕೊಳೆಯುತ್ತಿದ್ದಾನೆ! ಇಂದು ಅವನಿಗೆ ಈ ಜೈಲಿನೊಳಗೆ ಯಕಶ್ಚಿತ್ ಒಂದು ಬೆಡ್‌ಶೀಟ್ ಹಾಗೂ ತಲೆ ದಿಂಬು ಸಿಗದೆ(?) ಪರದಾಡೊ ಪರಿಸ್ಥಿತಿ ಉದ್ಭವವಾಗಿದೆ!! ಇಂಥ ಜೈಲಿನೊಳಗೆ ನಟೋರಿಯಸ್ ರೌಡಿ ಗುಬ್ಬಚ್ಚಿ ಸೀನ ಆಳೆತ್ತರದ ಕೇಕ್ ತರಿಸಿ, 200 ಕೆಜಿ ಮಾಂಸ ತರಿಸಿ ಭರ್ಜರಿಯಾಗಿ ಬರ್ತ್‌ಡೇ ಆಚರಿಸಿಕೊಳ್ಳುತ್ತಾನೆ ಎಂದರೆ, ಅಲ್ಲಿನ ಲಂಚವತಾರ ಹೇಗಿರಬೇಕು ಊಹಿಸಿಕೊಳ್ಳಿ!!!**

**ಬೆಂಗಳೂರು**
✍ ಹೆಚ್.ಕೆ. ಮಹದೇವ್

ಕಾರಾಗೃಹ ಇಲಾಖೆಗೆ ಬಿ. ದಯಾನಂದ ಎಂಬ ದಕ್ಷ ಪೊಲೀಸ್ ಅಧಿಕಾರಿ ಮಹಾ ಅಧೀಕ್ಷಕರಾಗಿ ಆಗಮಿಸಿದರೂ ಬೆಂಗಳೂರು ಸೆಂಟ್ರಲ್ ಜೈಲ್ ಒಳಗೆ ಯಕಶ್ಚಿತ್ ಒಂದು ಬೆಡ್‌ಶೀಟ್ ಹಾಗೂ ತಲೆ ದಿಂಬು ಸಿಗದೆ(?) ಪರದಾಡೊ ಪರಿಸ್ಥಿತಿ ಉದ್ಭವವಾಗಿದೆ! ಆದರೆ ಇದೇ ಜೈಲಿನೊಳಗೆ ನಟೋರಿಯಸ್ ರೌಡಿ ಗುಬ್ಬಚ್ಚಿ ಸೀನ







ಆಳೆತ್ತರದ ಕೇಕ್ ತರಿಸಿ, 200 ಕೆಜಿ ಮಾಂಸ ತರಿಸಿ ಭರ್ಜರಿಯಾಗಿ ಬರ್ತ್‌ಡೇ ಆಚರಿಸಿ ಕೊಳ್ಳುತ್ತಾನೆ ಎಂದರೆ, ಅಲ್ಲಿನ ಲಂಚವತಾರ ಹೇಗಿರಬೇಕು ಊಹಿಸಿಕೊಳ್ಳಿ!

ಭ್ರಷ್ಟಾಚಾರ ನಿಂತಿಲ್ಲ! ನಿಮಗೆಲ್ಲ ಗೊತ್ತಿರಬೇಕು. ಕೊಲೆ ಕೇಸ್ ಒಂದರಲ್ಲಿ ಸೆಂಟ್ರಲ್ ಜೈಲ್ ಸೇರಿರೋ ಶ್ರೀನಿವಾಸ ಅಲಿಯಾಸ್ ಗುಬ್ಬಚ್ಚಿ ಸೀನ ಎಂಬ ರೌಡಿಶೀಟರ್ ಇತ್ತೀಚೆಗೆ ಭರ್ಜರಿಯಾಗಿ ಬರ್ತ್ಡೇ ಆಚರಿಸಿಕೊಂಡು, ಆ ವಿಡಿಯೋ ವೈರಲ್ ಆಗಿ ಇಲಾಖೆಯ ಮಾನಮರ್ಯಾದೆ ಮತ್ತೊಮ್ಮೆ ಹರಾಜು ಆಗಿತ್ತು. ಈ ಹಿನ್ನಲೆಯಲ್ಲಿ ದಯಾನಂದ ಸಾಹೇಬರು ತನಿಖೆಗೆ ಆದೇಶಿಸಿದ್ದು, ಡಿಜಿಪಿ ದಿವ್ಯಶ್ರೀ ನೇತೃತ್ವದಲ್ಲಿ ತನಿಖೆ ನಡೆದು, ಇಬ್ಬರು ಜೈಲು ಸಿಬ್ಬಂದಿ ಸಸ್ಪೆಂಡ್ ಮಾಡಲಾಗಿದೆ.

ನೀವೇ ಯೋಚಿಸಿನೋಡಿ, ಜೈಲ್ ಚೀಫ್ ಇಶಾರೆ ಇಲ್ಲದೆ ಬ್ಯಾರಕ್ ಬಳಿ ಕಾವಲು ಕಾಯೋ ಮಂದಿ ರೌಡಿಗಳಿಗೆ ಬಾಡು ಬಳ್ಳೆ ಸೊಪ್ಪು ಗಿಪ್ಪು ಇತ್ಯಾದಿಗಳನ್ನು ತಂದು ಕೊಡಲು


ದರ್ಶನ್ ವಕೀಲ ಸುನೀಲ್



ಸಾಧ್ಯವೇ?! ಡಿಜಿಪಿ ದಿವ್ಯಶ್ರೀ ಬುದ್ದಿವಂತರು. ಎಷ್ಟಾದರೂ ಮಾಲಿನಿ ಮೇಡಂ ಅವರ ಬಳಿ 'ವಿದ್ಯೆ' ಕಲಿತವರು! ಏನೋ ಒಂದು ನೆಪ ಹೇಳಿ ಸೆಂಟ್ರಲ್ ಜೈಲ್ ಲೂಟಿ ಕೋರರನ್ನು ರಕ್ಷಿಸಿ, ಬಡಪಾಯಿ ಗಳನ್ನು ಮನೆಗೆ ಕಳುಹಿಸಿದ್ದಾರೆ!

**ದರ್ಶನ್ ಏನು ಪಾಪ ಮಾಡಿದ್ದ?!**

ಸಖಿ ಪವಿತ್ರಗೌಡ್ತಿ ಮೊಬೈಲ್‌ಗೆ ಕಾಮ ಸಂದೇಶ ಕಳಿಸಿ ಕಾಡ್ತಿದ್ದ ಚಿತ್ರದುರ್ಗದ ಕಡು ಪಾಪಿ ರೇಣುಕಾಸ್ವಾಮಿಯನ್ನ ಬೆಂಗಳೂರಿಗೆ ಎತ್ತಾಕಿಕೊಂಡು ಬಂದು,ಗೌಡ್ತಿ ಖುಷಿಗಾಗಿ ನರಪೇತಲನಿಗೆ ಚಿತ್ರಹಿಂಸೆ ಕೊಟ್ಟು ಕೊಂದ ಆರೋಪದ ಮೇಲೆ ಇದೇ ಸೆಂಟ್ರಲ್ ಜೈಲಿನಲ್ಲಿ ಕೊಳೆಯುತ್ತಿರೋ ದರ್ಶನ್‌ಗೆ ಇದೇ ಜೈಲಿನೊಳಗೆ

**ಜಡ್ಜ್ ಸಾಹೇಬರೇ ಬಂದು ನೋಡಿ!**

ಸರ್ಜಾಪುರದ ಕಡೆ ವೆಂಕಟೇಶ ಅಲಿಯಾಸ್ ಮುಸುರಿ ವೆಂಕಿ ಎಂಬಾತನನ್ನು ಹಾಡು ಹಗಲೂತ್ತೆ ಪಬ್ಲಿಕ್ ಎದುರು ಕತ್ತರಿಸಿ ಕೊಂದವನು ರೌಡಿ ಗುಬ್ಬಚ್ಚಿ ಸೀನ. ಬೆಂಗಳೂರು ಮತ್ತು ಸುತ್ತ ಮುತ್ತ ಇತ್ತೀಚೆಗೆ ನಡೆದ ಭೀಕರ ಕೊಲೆ ಕೇಸ್ ಅದೇ. ಈಗ ಅಂಡರ್ ವರ್ಲ್ಡ್ ವರಸೆ ಕೂಡ ಬದಲಾಗಿದೆ. ಸಿಸಿ ಕ್ಯಾಮೊ ಎಲ್ಲಿದೆಯೋ ಅಲ್ಲೇ ದುಷ್ಮನ್‌ಗಳನ್ನು ಕತ್ತರಿಸಿ ಕೊಲ್ಲುತ್ತಿದ್ದಾರೆ ರೌಡಿಗಳು!

ಕೊಲೆ ನಡೆದ ಕೆಲವೇ ಕ್ಷಣಗಳಲ್ಲಿ ಅದನ್ನು ಅವರೇ ವೈರಲ್ ಮಾಡ್ತಾರೆ! ಇದರಿಂದ ಅವರ ಮುಂದಿನ ವ್ಯಾಪಾರ ವ್ಯವಹಾರ ಸಲೀಸು! ಇಂಥ ನಟೋರಿಯಸ್ ರೌಡಿಗಳು ಜೈಲಿಗೆ ಹೋದಾಗ ಒಳಗಡೆ ರಾಜ ಮರ್ಯಾದೆ! ರೇಪ್ ಕೇಸ್‌ನಲ್ಲಿ ಒಳಗಿದ್ದಾನಲ್ಲ ಸಂಸದ ಪ್ರಜ್ವಲ್ ರೇವಣ್ಣ, ಅವನಿಗೆ ಅಲ್ಲೇನು ಕೊರತೆ ಇಲ್ಲ, ಕಲರ್ ಟಿವಿ, ಒಳ್ಳೆ ಮಂಚ ಎಲ್ಲಾ ಸವಲತ್ತಿದೆ. ಅದೇ ರೀತಿ ಇತರೆ ಕೆಲ ಪ್ರಭಾವಿ ಖೈದಿಗಳಿಗೆ, ಉಗ್ರರಿಗೆ ಕಳ್ಳ ಮಾರ್ಗದಲ್ಲಿ ಒಳ್ಳೆ ಸವಲತ್ತು ಕಲ್ಪಿಸಲಾಗಿದೆ!

ದೊಡ್ಡ ದೊಡ್ಡವರ ಮೂಲಕವೇ ಸಣ್ಣ ಗಾರ್ಡ್‌ಗಳು


ರಾಷ್ಟ್ರೀಯ ಮಹಿಳಾ ಆಯೋಗ

ಗಾಂಜಾ... ಮಾತ್ರೆ... ಎಲ್ಲಾ ಸಪ್ಲೈ ಮಾಡುತ್ತಾರೆ. ಅಕಸ್ಮಾತ್ ಸಿಕ್ಕಿಬಿದ್ರೆ ಬಕ್ರಾಗಳು, ಅವರೇ ಬಲಿಯಾಗುತ್ತಾರೆ! ಜೈಲಿನೊಳಗೆ ನಡೆವ ಅನ್ಯಾಯ ಅಕ್ರಮ, ಪಕ್ಕದ ಸೆಲ್‌ನಲ್ಲಿ ಇರೋ ಸವಲತ್ತು, ಅಲ್ಲೇ ಇರುವ ದರ್ಶನ್‌ಗೆ ತಿಳಿಯುವುದಿಲ್ಲವೇ?

ಒಂದೇ ಒಂದು ದಿಂಬು ಬೆಡ್‌ಶೀಟ್ ಕೊಡದೆ ಚಳಿಯಲ್ಲಿ ನಡುಗಿಸುತ್ತಿದ್ದಾರಲ್ಲ... ಎಂಬ ನೋವು ಅತನನ್ನು ಕಾಡುವುದಿಲ್ಲವೇ? ಹಾಗಾಗಿಯೇ ಪಾಪಿ ದರ್ಶನ್ ಜಡ್ಜ್ ಅವರಿಗೆ ಪತ್ರ ಬರೆದು ಖುದ್ದಾಗಿ ಬಂದು ನೋಡಿ ಸ್ವಾಮಿ.... ಎಂದು ಗೋಗರೆದಿದ್ದಾನೆ!

**ಜೈಲಿಗೆ ರಾಷ್ಟ್ರೀಯ ಆಯೋಗ ಭೇಟಿ...**

ಬೆಂಗಳೂರು ಸೆಂಟ್ರಲ್ ಜೈಲಿನೊಳಗೆ ಭಾರಿ ಅಕ್ರಮಗಳ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗದ ಸದಸ್ಯರು ಸೋಮವಾರ ಪರಪ್ಪನ ಅಗ್ರಹಾರ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಆಯೋಗದ ಅಧ್ಯಕ್ಷೆ ವಿಜಯ ರಹತ್ಕರ್ ಮತ್ತು ಸದಸ್ಯ ಕಾರ್ಯದರ್ಶಿ ಸುದೀಪ್ ಜೈನ್, ಸದಸ್ಯರಾದ ಡೆಲಿನಾ ಖೋಂಗ್ಡುಪ್, ಮಮತಾ ಕುಮಾರ, ಡಾ. ಅರ್ಚನಾ ಮಜುಂದಾರ್ ಮತ್ತು ಇತರೆ ಅಧಿಕಾರಿಗಳು ಬೆಳಿಗ್ಗೆ 8 ಗಂಟೆಗೆ ಜೈಲಿಗೆ ಭೇಟಿ ನೀಡಿ, ಹಾಜರಾತಿ ಪುಸ್ತಕ ಹಾಗೂ ಕೆಲವೊಂದು ದಾಖಲೆಗಳನ್ನು ಪರಿಶೀಲನೆ ನಡೆಸಿದ್ದಾರೆ.

ಪುರುಷ ಖೈದಿಗಳ ಬ್ಯಾರಕ್ ನಂತರ ಮಹಿಳಾ ಬ್ಯಾರಕ್‌ಗಳತ್ತ ತೆರಳಿ ಸಜಾ ಬಂಧಿಗಳು ಹಾಗೂ ವಿಚಾರಣಾಧೀನ ಕೈದಿಗಳ ಜತೆ ಸುಮಾರು ಎರಡು ತಾಸು ಚರ್ಚಿಸಿದ್ದಾರೆ. ಈ ವೇಳೆ ಕೆಲ ಖೈದಿಗಳು, ಜೈಲಿನಲ್ಲಿರುವ ಕೆಲವೊಂದು ಅವ್ಯವಸ್ಥೆಗಳ ಬಗ್ಗೆ, ಲಂಚದ ಬಗ್ಗೆ ದೂರು ನೀಡಿದ್ದು, ಅವರಿಗೆ ಕಾನೂನು ನೆರವು ಒದಗಿಸುವ ಭರವಸೆ ನೀಡಲಾಗಿದೆ. ಅಲ್ಲದೆ, ಅಲ್ಲಿ ಏನೇ ನಡೆದರೂ ಆಯೋಗಕ್ಕೆ ಪತ್ರ ಬರೆದು ತಿಳಿಸುವಂತೆ ಕೋರಲಾಗಿದೆ.


ಜೈಲ್ ಸಿವಿಎಸ್ ಕೆ. ಸುರೇಶ್

ಆ ಬಳಿಕ ಜೈಲಿನ ಮುಖ್ಯಸ್ಥರೊಂದಿಗೆ ಸಭೆ ನಡೆಸಿದ ವಿಜಯ ರಹತ್ಕರ್ ಮತ್ತು ತಂಡ, ಮಹಿಳಾ ಕೈದಿಗಳಿಗೆ ಜೈಲಿನಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಬಳಿಕ ಆಯೋಗದ ಮುಖ್ಯಸ್ಥರು, ಮಹಿಳಾ ಖೈದಿಗಳಿಗೆ ಯಾವುದೇ ರೀತಿಯ ತೊಂದರೆ ಉಂಟಾಗಬಾರದು, ಅವರ ಮೇಲೆ ದೌರ್ಜನ್ಯ ನಡೆಸಬಾರದು ಎಂದು ಎಚ್ಚರಿಕೆ ನೀಡಿದ್ದಾರೆ ಎನ್ನಲಾಗಿದೆ.


ಮುಸುರಿ ವೆಂಕಟೇಶ

ಬಳಿಕ ರಾಜ್ಯ ಪೊಲೀಸ್ ಪ್ರಧಾನ ಕಚೇರಿಯಲ್ಲಿ ಪೊಲೀಸ್ ಮಹಾನಿರ್ದೇಶಕ ಎಂ.ಎ. ಸಲೀಂ ಹಾಗೂ ಹಿರಿಯ ಅಧಿಕಾರಿಗಳ ಜತೆ ಸಭೆ ನಡೆಸಿದರು. ಈ ವೇಳೆ ಪೊಲೀಸ್ ಇಲಾಖೆಯಿಂದ ಆಯೋಜಿಸಿರುವ ಒನ್ ಸ್ಟಾಪ್ ಒನ್ ಸಖಿ, ಸೇಫ್ಟಿ ಐ ಲ್ಯಾಂಡ್, ಕಮಾಂಡ್ ಸೆಂಟರ್, ಮನೆ ಮನೆಗೆ ಪೊಲೀಸ್ ಹಾಗೂ ಮಹಿಳಾ ಮತ್ತು ಮಕ್ಕಳ ಸುರಕ್ಷತೆಗಳ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಹಿಳಾ ಆಯೋಗ ಮೆಚ್ಚುಗೆ ವ್ಯಕ್ತಪಡಿಸಿದೆ!


ರೌಡಿ ಗುಬ್ಬಚ್ಚಿ ಸೀನ

ಇದೇ ವೇಳೆ ಮಹಿಳೆಯರ ಮತ್ತು ಮಕ್ಕಳ ಮೇಲಿನ ದೂರುಗಳನ್ನು ತ್ವರಿತವಾಗಿ ಪರಿಶೀಲಿಸಿ, ಸಂವೇದನಾ ಶೀಲ ರೀತಿಯಲ್ಲಿ ಪರಿಹಾರ ಒದಗಿಸುವ ಬಗ್ಗೆ ಮಹಿಳಾ ಆಯೋಗದ ಅಧ್ಯಕ್ಷರು ಸಲಹೆ ನೀಡಿದ್ದಾರೆ.ಈ ಸಭೆಯಲ್ಲಿ ರಾಜ್ಯ ಕಾನೂನು ಮತ್ತು ಸುವ್ಯವಸ್ಥೆ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಹಿತೇಂದ್ರ, ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್, ಡಿಸಿಪಿ ಅನಿತಾ ಹದ್ದಣ್ಣನವರ್, ಎಚ್. ಶೇಖರ್ ಹಾಗೂ ಇತರೆ ಹಿರಿಯ ಅಧಿಕಾರಿಗಳು ಹಾಜರಿದ್ದರು. ಅಂದಹಾಗೆ, ದರ್ಶನ್ ಕೋರಿಕೆಗೆ ಮಾನ್ಯ ನ್ಯಾಯಾಧೀಶರು ಇನ್ನೂ 'ಅಸ್ತು' ಎಂದಿಲ್ಲ! ಅವರು ಯಾವಾಗ ಜೈಲಿಗೆ ನಿಯೋಗ ಕಳಿಸುತ್ತಾರೋ ಗೊತ್ತಿಲ್ಲ... ☯

## ಗುಬ್ಬಚ್ಚಿ ಬೆಳಗಾವಿ ಹಿಂಡಲಗ ಜೈಲಿಗೆ, ಉಳಿದವರು ಬೇರೆ ಜೈಲಿಗೆ ಟ್ರಾನ್ಸ್‌ಫರ್!

ಜೈಲ್ ಒಳಗೆ ರೌಡಿ ಬರ್ತ್‌ಡೇ ವಿಡಿಯೋ ಭಾರಿ ಸದ್ದು ಮಾಡಿದ್ದರಿಂದ ಮುಜುಗರಕ್ಕೀಡಾಗಿದ್ದ ಬಂದೀಖಾನೆಯ ಎಡಿಜಿಪಿ ದಯಾನಂದ್ ಸಾಹೇಬ್ರು, ಗುಬ್ಬಚ್ಚಿ ಸೀನ ಮತ್ತವನ ಮಿತ್ರರನ್ನು ಬೇರೆ ಬೇರೆ ಜೈಲುಗಳಿಗೆ ಕಮಾನ್ ಎತ್ತಲು ಹಾಗೂ ಈ ಅಕ್ರಮದಲ್ಲಿ ಭಾಗಿಯಾಗಿದ್ದ ಜೈಲು ಸಿಬ್ಬಂದಿಯನ್ನು ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದ್ದಾರೆ.

ಸದರಿ ಆದೇಶದ ಮೇರೆಗೆ ಇತರೆ ಜೈಲು ಅಧಿಕಾರಿಗಳ ಮೇಲೂ ಶಿಸ್ತು ಕ್ರಮ ಕೈಗೊಳ್ಳಲಾಗಿದೆ. ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ ಈ ರೌಡಿ ಪಟಾಲಂ ಅನ್ನು ಮಾತ್ರ ರಾಜ್ಯದ ವಿವಿಧ ಕಾರಾಗೃಹಗಳಿಗೆ ಶಿಫ್ಟ್ ಮಾಡಿರುವ ಕಾರಾಗೃಹ ಇಲಾಖೆ, ಕಾನೂನು ಬಾಹಿರವಾಗಿ ಕೇಕ್ ಸಪ್ಲೈ ಮಾಡಿ ಜೈಲಿನೊಳಗೆ 200 ಕೆಜಿ ಮಾಂಸ ತಂದುಕೊಟ್ಟು ಬಿರಿಯಾನಿ ಮಾಡಲು ಬಿಟ್ಟು, ಲಕ್ಷ ಲಕ್ಷ ಲಂಚ ಪಡೆದುಕೊಂಡು ಗುಮ್ಮನಂತಿರೋ ಮುಖ್ಯಅಧೀಕ್ಷಕರನ್ನು, ಅಧೀಕ್ಷಕರನ್ನು ಮಾತ್ರ ಇನ್ನೂ ವರ್ಗಾವಣೆ ಮಾಡಿಲ್ಲವೇಕೆ? ಎಂದು ಜನ ಮಾತನಾಡುತ್ತಿದ್ದಾರೆ!

ಅಂದಹಾಗೆ, ರೌಡಿ ಗುಬ್ಬಚ್ಚಿ ಸೀನನನ್ನು ಬೆಳಗಾವಿ ಹಿಂಡಲಗ ಜೈಲಿಗೆ, ಅವನ ಸಹಚರರಾದ ಅರುಣ್, ಶೇಖರ್, ಪ್ರವೀಣ್, ಸೂರ್ಯ, ಮಿಥುನ್, ಪ್ರಜ್ವಲ್, ಚೇತನ್,ಅರವಿಂದ್, ಪ್ರೀಕ್ಷಿತ್, ಕಾರ್ತಿಕ್‌ರನ್ನು ಕ್ರಮವಾಗಿ ಬೆಳಗಾವಿ, ಧಾರವಾಡ, ಬಿಜಾಪುರ, ಶಿವಮೊಗ್ಗ, ಕಲಬುರ್ಗಿ ಜೈಲುಗಳಿಗೆ ಶಿಫ್ಟ್ ಮಾಡಲಾಗಿದೆ... ☯


ಕೊಲೆಯಾದ ಲಿಕ್ಕಿ ವೆಂಕಟೇಶ್

# ಮೈಸೂರಿನಲ್ಲಿ ರೌಡಿಶೀಟರ್ ಗಿಲ್ಕಿ ವೆಂಕಟೇಶ್ ಮರ್ಡರ್!

**ಹಾಡಹಗಲೇ ಜನಗಳು ಓಡಾಡುವ ಪ್ರದೇಶದಲ್ಲಿ ಗ್ಲಾಸನ್ನು ಅರ್ಧಕ್ಕಿಳಿಸಿ ಕಾರನ್ನು ಚಾಲಿಸಿಕೊಂಡು ಹೋಗುತ್ತಿದ್ದ ರೌಡಿ ಶೀಟರ್ ಮೈಸೂರಿನ ಕ್ಯಾತಮಾರನಹಳ್ಳಿ ಟೆಂಟ್‌ನಿವಾಸಿ ವೆಂಕಟೇಶ್ ಅಲಿಯಾಸ್ ಗಿಲ್ಕಿ ವೆಂಕಟೇಶ್‌ನನ್ನು ಆಟೋ ಮತ್ತು ಬೈಕ್‌ನಲ್ಲಿ ಬಂದ ಆರು ಮಂದಿ ದುಷ್ಕರ್ಮಿಗಳು ಅಡ್ಡಗಟ್ಟಿ ಕಣ್ಣಿಗೆ ಕಾರದ ಪುಡಿ ಎರಚಿ, ಕಾರಿನಿಂದ ಹೊರಗೆ ಎಳೆದು ಲಾಂಗ್ ಬೀಸಿ ಉಸಿರು ನಿಲ್ಲಿಸಿದ್ದಾರೆ. ಅಲ್ಲಿಗೆ ಡಾನ್ ಪಟ್ಟಕ್ಕಾಗಿ ಹಾತೊರೆಯುತ್ತಿದ್ದ ಗಿಲ್ಕಿ ವೆಂಕಟೇಶ್ ಮಣ್ಣಲ್ಲಿ ಮಣ್ಣಾಗಿ ಹೋಗಿದ್ದಾನೆ.**


ಆರೋಪಿ ಹಾಲಪ್ಪ

## ಮೈಸೂರು

✍ಬಿ.ಎಂ. ಲವಕುಮಾರ್

ಸದ್ಯದ ಪರಿಸ್ಥಿತಿಯನ್ನು ಗಮನಿಸಿದರೆ ಮೈಸೂರಿನಲ್ಲಿ ರೌಡಿಸಂ ಜಿಗಿತುಕೊಂಡಂತೆ ಕಾಣುತ್ತಿದೆ. ಕಳೆದ ಐದು ತಿಂಗಳ ಅವಧಿಯಲ್ಲಿ ಎರಡು ರೌಡಿಗಳ ಹೆಣ ಉರುಳಿದೆ.


ಕಮೀಷನರ್ ಸೀಮಾ ಲಾಟ್ಕರ್


ಡಿಸಿಪಿ ಆರ್.ಎನ್. ಬಿಂದುಮಣಿ


ಡಿಸಿಪಿ ಸುಂದರ್‌ರಾಜ್

ಈ ಕೊಲೆಗಳು ಡಾನ್ ಪಟ್ಟಕ್ಕಾಗಿ ನಡೆದಿವೆ ಎಂಬ ಮಾತುಗಳು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿವೆ. ಇದು ಹೀಗೆಯೇ ಮುಂದುವರೆದರೆ ಸಾಂಸ್ಕೃತಿಕ ನಗರಿಗೆ ರಕ್ತ ಮೆತ್ತಿಕೊಳ್ಳುವ ದಿನಗಳು ದೂರವಿಲ್ಲ. ಇವತ್ತು ಇವನು... ನಾಳೆ ಅವನು... ಎಂಬಂತೆ ಹೆಣಗಳು ಉರುಳುವ ಮುನ್ನ ಪೊಲೀಸರು ಖಡಕ್ ಕ್ರಮ ಕೈಗೊಂಡು ರೌಡಿ ಶೀಟರ್‌ಗಳ ನೆಟ್‌ಬೋಲ್ಟ್ ಟೈಟ್ ಮಾಡಬೇಕಾಗುತ್ತದೆ.


ಕಾರ್ತಿಕ್

ಮೈಸೂರಿನ ದೊಡ್ಡಕೆರೆ ಮೈದಾನದ ದಸರಾ ವಸ್ತುಪ್ರದರ್ಶನದ ಬಳಿಯ ಜಾಗದಲ್ಲಿ ಜನರ ಎದುರೇ ಅಕ್ಟೋಬರ್ 7ರಂದು ಬೆಳಿಗ್ಗೆ 11.30ರ ವೇಳೆಯಲ್ಲಿ ಕಾರಿನಿಂದ ಹೊರಗೆ ಎಳೆದು ಕೊಚ್ಚಿ ಹಾಕಿ ಹೋಗುತ್ತಾರೆ ಎಂದರೆ ಮೈಸೂರಿನಲ್ಲಿ ಏನಾಗುತ್ತಿದೆ? ಪೊಲೀಸರು ಏನು ಮಾಡುತ್ತಿದ್ದಾರೆ? ಎಂಬ ಪ್ರಶ್ನೆಗಳನ್ನು ಜನ ಕೇಳುತ್ತಿದ್ದಾರೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಾಗಿದೆ. ಇಲ್ಲಿಯೇ ಅಪರಾಧ ಚಟುವಟಿಕೆಗಳನ್ನು ಹತ್ತಿಕ್ಕಲು ಸಾಧ್ಯವಾಗಿಲ್ಲ ಎನ್ನುವುದಾದರೆ ರಾಜ್ಯದ ಪರಿಸ್ಥಿತಿ ಏನು? ಎಂದು ಜನ ಕೇಳುತ್ತಿದ್ದಾರೆ.

ಇವತ್ತು ಹೆಣವಾಗಿ ಹೋದ ವೆಂಕಟೇಶ್ ಅಲಿಯಾಸ್ ಗಿಲ್ಕಿ ವೆಂಕಟೇಶ(38)ನ ಬಗ್ಗೆ ಹೇಳುವ ಮುನ್ನ ಕಳೆದ ಐದು ತಿಂಗಳ ಹಿಂದೆ ಹೆಣವಾಗಿ ಹೋದ ರೌಡಿಶೀಟರ್ ಕಾರ್ತಿಕ್ ಬಗ್ಗೆ ಹೇಳಬೇಕಾಗುತ್ತದೆ. ಇವತ್ತಿನ ವೆಂಕಟೇಶ್ ಕೊಲೆ ಅವತ್ತಿನ ಕಾರ್ತಿಕ್ ಕೊಲೆಗೆ ರಿವೇಂಜ್ ಎನ್ನಲಾಗುತ್ತಿದೆ. ಆದರೆ ವೆಂಕಟೇಶ್ ಮತ್ತು ಕಾರ್ತಿಕ್ ಗೆಳೆಯರಾಗಿದ್ದವರು. ಅವರ ನಡುವೆ ಹೆಣ ಬೀಳಿಸುವಂತಹ ದ್ವೇಷ ಶುರುವಾಗಿದ್ದು ಹೇಗೆ? ಏನಿದರ ಕಥೆ ಎನ್ನುವುದನ್ನು ನೋಡುತ್ತಾ ಹೋದರೆ ಮೈಸೂರಿನಲ್ಲಿ ರೌಡಿಸಂನ ಕಥೆಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ.

ಮೂಲಗಳ ಪ್ರಕಾರ ಕಳೆದ ಐದು ತಿಂಗಳ ಹಿಂದೆ ಅಂದರೆ ಮೇ 5ರಂದು ಮೈಸೂರು ತಾಲ್ಲೂಕು ವರುಣ ಗ್ರಾಮದ ಹೊರವಲಯದಲ್ಲಿ ಕ್ಯಾತಮಾರನಹಳ್ಳಿ ರೌಡಿಶೀಟರ್ ಕೆ. ಬಾಸ್ ಅಂತಲೇ ಫೇಮಸ್ ಆಗಿದ್ದ ಕಾರ್ತಿಕ್‌ನನ್ನು ಕೊಲೆ ಮಾಡಲಾಗಿತ್ತು. ಹಾಗೆ ನೋಡಿದರೆ ಗಿಲ್ಕಿ ವೆಂಕಟೇಶ್ ಒಂದು ಕಾಲದಲ್ಲಿ ಕಾರ್ತಿಕ್‌ಗೆ ಗುರುವಾಗಿದ್ದವನು. ಆದರೆ ವೆಂಕಟೇಶ್‌ನನ್ನು ಮೀರಿ ಕಾರ್ತಿಕ್ ಬೆಳೆದಿದ್ದನು. ಎಪಿಎಂಸಿಯಲ್ಲಿ ವ್ಯಾಪಾರ ಮತ್ತು ವಸೂಲಿ, ಬಡ್ಡಿ ದಂಧೆ ಎಲ್ಲವನ್ನು ಮಾಡಿ ನೋಡು ನೋಡುತ್ತಲೇ ಬೆಳೆದು ನಿಂತಿದ್ದನು. ಈತನ ಜತೆಗೆ ಒಂದಷ್ಟು ಜನ ಸಹಚರರಿದ್ದರು. ಈತನ ವಿರುದ್ಧ ಉದಯಗಿರಿಯಲ್ಲಿ ಹಾಗೂ ವರುಣಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ತಲಾ ಒಂದೊಂದು ಕೇಸ್ ದಾಖಲಾಗಿತ್ತಲ್ಲದೆ, ರೌಡಿಶೀಟರ್ ಆಗಿದ್ದನು.


ಹಾಲಪ್ಪನ ಸಹಚರ

ಕಾರ್ತಿಕ್ ಜತೆಗಿದ್ದ ಹುಡುಗರ ಪೈಕಿ ಚಾಲಕನಾಗಿದ್ದ ಪ್ರವೀಣ್ ಒಬ್ಬನಾಗಿದ್ದ. ಹೀಗಿರುವಾಗಲೇ ಒಂದು ಹುಡುಗಿಗಾಗಿ ಪ್ರವೀಣ್ ಮತ್ತು ಕಾರ್ತಿಕ್ ನಡುವೆ ವೈಮನಸ್ಸು ಉಂಟಾಗಿತ್ತು. ಅದು ಎಲ್ಲಿಗೆ ಹೋಯಿತೆಂದರೆ ಕಾರ್ತಿಕ್‌ನನ್ನೇ ಮುಗಿಸುವ ಮಟ್ಟಕ್ಕೆ ಹೋಗಿತ್ತು. ಇದೆಲ್ಲವೂ ನಡೆಯುವಾಗಲೂ ಕಾರ್ತಿಕ್ ಜತೆಗೆ ಇವತ್ತು ಕೊಲೆಯಾದ ವೆಂಕಟೇಶ್ ಇದ್ದನು. ಜತೆಗಿದ್ದುಕೊಂಡೇ ಕಾರ್ತಿಕ್‌ಗೆ ಸ್ಕೆಚ್ ಹಾಕಿದ್ದನು. ಯಾವಾಗ ಪ್ರವೀಣ್ ಮತ್ತು ಕಾರ್ತಿಕ್ ನಡುವೆ ದ್ವೇಷ ತಾರಕಕ್ಕೇರಿತೋ ಕಾರ್ತಿಕ್‌ಗೆ ಪ್ರವೀಣ್ ಸ್ಕೆಚ್ ಹಾಕಿದ್ದನು.

ಮೇ 5ರಂದು ಮುಂಜಾನೆ ಹುಡುಗಿಯನ್ನು ಮುಂದಿಟ್ಟುಕೊಂಡು ಪ್ರವೀಣ್ ಅವಳ ಮೂಲಕವೇ ಕಾರ್ತಿಕ್‌ನನ್ನು ಕರೆಯಿಸಿದ್ದನು. ಆತ ಬರುತ್ತಿದ್ದಂತೆಯೇ ಅವಿನಾಶ್, ರವಿ, ಚಂದ್ರು, ಆನಂದ, ವೆಂಕಟೇಶ್ ಶೆಟ್ಟಿ ಅವರೊಂದಿಗೆ ಮಚ್ಚು ಬೀಸಿ ಕೊಲೆಗೈದು ಪರಾರಿಯಾಗಿದ್ದರು. ಹೊಟೇಲ್‌ವೊಂದರ ಸಿಸಿ ಟಿವಿಯಲ್ಲಿ ಈ ದೃಶ್ಯ ಸೆರೆಯಾಗಿತ್ತು. ಇದಾದ ಬಳಿಕ ಎಲ್ಲವೂ ಸರಿಹೋಯಿತು ಎಂದುಕೊಳ್ಳುವ ಹೊತ್ತಿಗೆ ಇದೀಗ ಕಾರ್ತಿಕ್‌ನ ಗುರುವಾಗಿದ್ದ ಗಿಲ್ಕಿ ವೆಂಕಟೇಶ್ ಕೊಲೆಯಾಗಿ ಹೋಗಿದ್ದಾನೆ. ಆದರೆ ಇಲ್ಲಿ ಕೊಲೆಯಾಗಲು ಕಾರಣ ಹಣ, ವ್ಯವಹಾರ ಇನ್ನಿತರ ವಿಚಾರಗಳು ಇವೆ ಎನ್ನಬಹುದಾದರೂ ಅದರಾಚೆಗೆ ಕಾರ್ತಿಕ್ ನಂತರ ಆತನ ಹುಡುಗರನ್ನು ಸೈಡ್ ಗೆ ತಳ್ಳಿ ತಾನೇ ಡಾನ್ ಆಗಿ ಮೆರೆಯಲು ಹವಣಿಸಿದ್ದ ಎಂದು ಹೇಳಲಾಗಿದೆ.

ಆರ್‌ಎಂಸಿಯಲ್ಲಿ ಕಾರ್ತಿಕ್, ಗಿಲ್ಕಿ ವೆಂಕಟೇಶ್ ಸೇರಿದಂತೆ ಹಲವರು ಕೆಲಸ ಮಾಡುತ್ತಿದ್ದುದಲ್ಲದೆ, ಅಲ್ಲಿನ ವ್ಯವಹಾರಗಳ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದರು.

☞10





ಹತ್ಯೆ ಮಾಡುತ್ತಿರುವ ದೃಶ್ಯ

# ಲೋಕಲ್ ರಾಜಕೀಯಕ್ಕೆ ಭೀಮನಗೌಡ ಬಲಿ! ಮಗ್ಗಲು ಹೊರಳಿಸಿತಾ ಭೀಮಾತೀರದ ಪಾತಕಲೋಕ!!



ವಿಜಯಪುರ

✍ ರಾಜೀವ್ ಬೈರಿ

ಚಡಚಣ ಭಾಗದಲ್ಲಿ ಕಾಂಗ್ರೆಸ್ ಮುಖಂಡನಾಗಿದ್ದ ಭೀಮನಗೌಡ ಬಿರಾದಾರ್ ಹತ್ಯೆಗೆ ಕಾರಣವೇನು? ಅಂತ ಹುಡುಕ್ತಾ ಹೋದಾಗ ಇಂಟರೆಸ್ಟಿಂಗ್ ಕಹಾನಿಗಳು ಹೊರ ಬೀಳ್ತಿವೆ. ಆರಂಭದಲ್ಲಿ ಭೀಮಾತೀರದ ವಿಚಾರಕ್ಕೆ ಭೀಮನಗೌಡ ಹತ್ಯೆಯಾಗಿರಬಹುದು ಅಂತಾ ಪೊಲೀಸರು ಅಂದಾಜಿಸಿದ್ರು. ಆದ್ರೆ ಪ್ರಕರಣದ ಆಳಕ್ಕಿಳಿದಾಗ, ಹಂತಕರನ್ನ ಗುರುತಿಸಿದಾಗಲೇ ಪೊಲೀಸರಿಗೆ ಅಸಲಿ ಸಮಾಚಾರ ಏನು ಅನ್ನೋದು ಗೊತ್ತಾದದ್ದು. ಗ್ರಾಮ ಪಂಚಾಯ್ತಿ ಅಧ್ಯಕ್ಷ ಭೀಮನಗೌಡ ಹತ್ಯೆಗೆ ಕಾರಣಆತನ ಅಧ್ಯಕ್ಷ ಸ್ಥಾನ ಅನ್ನೋದು ನಿಜವೇ?

ಭೀಮಾತೀರದಲ್ಲಿ ಹಂತಕರ ನಡುವೆ ಗ್ಯಾಂಗ್ ವಾರ್‌ಗಳು ನಡೆಯೋದು, ಹೆಣಗಳು ಬೀಳೋದು ಕಾಮನ್. ಅದರಲ್ಲೂ ಹಂತಕ ಪಡೆಗಳ ನಡುವಿನ ಭಯಾನಕ ದ್ವೇಷ, ಗ್ಯಾಂಗ್‌ಗಳ ನಡುವಿನ ಕಿತ್ತಾಟಗಳು, ಮತ್ತೊಂದು ಪ್ರತಿಷ್ಠೆಗಳು ಹತ್ಯಾಕಾಂಡಗಳಿಗೆ ಕಾರಣವಾಗಿವೆ. ಹಾಗೇ ಭೀಮನಗೌಡ ಹತ್ಯೆ ವಿಚಾರದಲ್ಲಿ ನೋಡಿದಾಗ ಇಲ್ಲಿ ಅಚ್ಚರಿಯ ಕಹಾನಿ ಕೇಳೋದಕ್ಕೆ ಸಿಗ್ತಿದೆ. ಭೀಮನಗೌಡನ ಗ್ರಾಮ ಪಂಚಾಯತ್ ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟವರೆ ಈ ಹತ್ಯೆ ನಡೆಸಿದ್ದಾರೆ ಅನ್ನೋದು. ಒಬ್ಬನ ಕೈಯಲ್ಲಿಯೇ ಅದೆಷ್ಟು ವರ್ಷಗಳು ಅಂತಾ ಅಧಿಕಾರ ಕೊಡೊದು ಅನ್ನೋ ಜಿದ್ದಿಗೆ ಬಿದ್ದು ರಾಜಕೀಯ ಕಾರಣಕ್ಕೆ ಈ ಹತ್ಯೆ ನಡೆದಿದೆ ಎನ್ನಲಾಗ್ತಿದೆ. ಇನ್‌ಫ್ಯಾಕ್ಟ್ ಲೋಕಲ್ ರಾಜಕಾರಣಕ್ಕೆ ಭೀಮಾತೀರದಲ್ಲಿ ಪಂಚಾಯ್ತಿ ಅಧ್ಯಕ್ಷನ ಶೂಟೌಟ್ ಮಾಡಿರೋದು ಇದೇ ಮೊದಲು ಎನ್ನಲಾಗ್ತಿದೆ.



### ಗ್ರಾ. ಪಂ.ಯಲ್ಲಿ ಭೀಮನಗೌಡ ಫ್ಯಾಮಿಲಿ ಪಾರುಪತ್ಯ..!

ಹೌದು, ದೇವರ ನಿಂಬರಗಿ ಗ್ರಾಮದಲ್ಲಿ ಭೀಮನಗೌಡನದ್ದು ದೊಡ್ಡ ಕುಟುಂಬ, ಶ್ರೀಮಂತಿಕೆ ಹಾಗೂ ಗೌಡಕಿ ಕುಟುಂಬ. ಭೀಮನಗೌಡ ತಂದೆ ಕಲ್ಲನಗೌಡ ಸತತವಾಗಿ ಗ್ರಾಮ ಪಂಚಾಯ್ತಿಗೆ ಅಧ್ಯಕ್ಷರಾಗುತ್ತಾ ಅಧಿಕಾರ ನಡೆಸಿದವರು. ನಂತರ ತಾಯಿ ಗಂಗಾಬಾಯಿಯೂ ಜನರ ಆಶೀರ್ವಾದದಿಂದ ಪಂಚಾಯ್ತಿ ಅಧ್ಯಕ್ಷೆಯಾಗಿದ್ದಳು. ಬಳಿಕ ಕಳೆದ 2008ರಿಂದ ಭೀಮನಗೌಡ ಗ್ರಾಮ ಪಂಚಾಯ್ತಿಯಲ್ಲಿ ಕಿಂಗ್ ಅನ್ನೋ ಹಾಗಿದ್ದ. ಪ್ರತಿ ಚುನಾವಣೆಯಲ್ಲಿಯೂ ಭೀಮನಗೌಡ ಪ್ಯಾನಲ್‌ಗೆ ಭರ್ಜರಿ ಗೆಲುವು ಸಿಗ್ತಿತ್ತು. ಹೀಗಾಗಿಯೇ ಭೀಮನಗೌಡ ಸತತ ಎರಡು ಬಾರಿ ಗ್ರಾಮ ಪಂಚಾಯ್ತಿಗೆ ಅಧ್ಯಕ್ಷನಾಗಿದ್ದ. ಚಡಚಣ ತಾಲೂಕು ಪಂಚಾಯ್ತಿಗೂ ಅಧ್ಯಕ್ಷನಾಗಿ ಕೆಲಸ ಮಾಡಿದ್ದ. ಮುಂಬರುವ ಗ್ರಾಮ ಪಂಚಾಯ್ತಿ ಚುನಾವಣೆಗೂ ರೆಡಿಯಾಗಿದ್ದ. ಸ್ಥಳೀಯರೇ ಹೇಳೋ ಹಾಗೇ ಈ ಬಾರಿ ಗ್ರಾಮ ಪಂಚಾಯ್ತಿ ಎಲೆಕ್ಷನ್ ನಡೆದರೆ ಭೀಮನಗೌಡ ಫ್ಯಾನಲ್ ಗೆಲ್ಲೋದು ಎನ್ನುತ್ತಿದ್ದರು. ಈ ವಿಚಾರ ಅದೇ ಗ್ರಾಮದ ಜಾಕೀರ್ ಮನಿಯಾರ್‌ಗೆ ನುಂಗಲಾರದ ತುತ್ತಾಗಿತ್ತು. ಇವನೇ ಎಲೆಕ್ಷನ್ ಗೆಲ್ಲುತ್ತಾ ಹೋದರೆ ನಮಗೆ ಅಧಿಕಾರ ಸಿಗೋದು ಹೇಗೆ ಎನ್ನುದ್ದನಂತೆ. ಈ ಹೊಟ್ಟೆಯುರಿಯೇ ಇವತ್ತು ಭೀಮನಗೌಡ ಕೊಲೆಗೆ ಕಾರಣವಾಗಿದೆ ಎನ್ನುತ್ತಿದ್ದಾರೆ ಗ್ರಾಮದವರು.

ಬರೀ ರಾಜಕಾರಣಕ್ಕಾಗಿ ಕೊಲೆ ನಡೆಯುತ್ತಾ? ಅಧಿಕಾರ ಸಿಗಲಿಲ್ಲಾ ಅಂತ ಕೊಂದು ಬಿಡ್ತಾರಾ? ಅದು ಬಂದೂಕಿನಿಂದ ಶೂಟೌಟ್ ಮಾಡಿ? ಹೀಗೆ ಹಲವು ಪ್ರಶ್ನೆಗಳು ಕಾಡುತ್ತವೆ. ಮರ್ಡರ್ ಆಗುವುದಕ್ಕೆ ಮತ್ತೇನೋ ವಿಷಯ ಇರಬೇಕು ಅಂತ ಕೆಣಕಿದಾಗಲೇ ಸಿಕ್ಕಿದ್ದು ಕಳೆದ 2023 ಹಳೆ ವಿಡಿಯೋ ಒಂದು. ಈ ದೃಶ್ಯದಲ್ಲಿ ಸೊಂಟಕ್ಕೆ ಗನ್ ಒಂದನ್ನ ಸಿಗಿಸಿಕೊಂಡು ಇದೇ ಜಾಕೀರ್ ಮನಿಯಾರ್ ಗ್ರಾಮ ಪಂಚಾಯ್ತಿಯಲ್ಲಿ ಕುಳಿತು ಪಿಡಿಓಗೆ ಆವಾಜ್ ಹಾಕುತ್ತಿರೋದು. ಗ್ರಾಮ ಪಂಚಾಯ್ತಿ ಹಣಕಾಸು ಯೋಜನೆಯಲ್ಲಿ ಹೇರಾಪೇರಿ ಆಗಿದೆ ಅನ್ನೋದನ್ನ ಪಿಡಿಓನನ್ನ ಪ್ರಶ್ನಿಸಿದ ರೀತಿ ಇದು. ಇದೇ ಜಾಗದಲ್ಲಿ ಕೊಲೆಯಾದ ಗ್ರಾಮ ಪಂಚಾಯ್ತಿ ಅಧ್ಯಕ್ಷ ಭೀಮನಗೌಡ ಬಿರಾದಾರ್ ಸಹ ಇರೋದನ್ನ ನೋಡಬಹುದು. ಬಿರಾದಾರ್‌ಗೂ ಜಾಕೀರ್ ಮನಿಯಾರ್ ಆವಾಜ್ ಹಾಕುತ್ತಿರೋನು.





ಇದಿಷ್ಟೇ ಈ ಘಟನೆಯು ಬಳಿಕ ಜಾಕಿರ್ ಮೇಲೆ ಪಿಡಿಓ ಅಟ್ರಾಸಿಟಿ ಕೇಸ್ ದಾಖಲಿಸಿದ್ದ, ಅಲ್ಲದೆ ಭಾರತೀಯ ಶಸ್ತ್ರಾಸ್ತ್ರ ಕಾಯ್ದೆ ಅಡಿಯಲ್ಲಿ ಜಾಕೀರ್ ಅರೆಸ್ಟ್ ಆಗಿ ಮೂರು ತಿಂಗಳು ಜೈಲಲ್ಲಿ ಕಳೆದು ವಾಪಸ್ ಬಂದಿದ್ದ. ತಾನು ಜೈಲಿಗೆ ಹೋಗುವುದಕ್ಕೆ ಕಾರಣನೇ ಈ ಭೀಮನಗೌಡ ಬಿರಾದಾರ್ ಅನ್ನೋದು ಜಾಕೀರ್ ತಲೆಯಲ್ಲಿತ್ತು. ಹೀಗಾಗಿ ಇದರ ಸೇಡು ತೀರಿಸಿಕೊಳ್ಳಲು ಮನಿಯಾರ್ ಪಕ್ಕಾ ಪ್ಲಾನ್ ಮಾಡಿ ಹತ್ಯೆ ಮಾಡಿಸಿದ್ದಾನೆ ಅಂತ ಈಗ ಭೀಮನಗೌಡ ಬೆಂಬಲಿಗರು ಆರೋಪ ಮಾಡುತ್ತಿದ್ದಾರೆ.

### ಎಳೆ ಹುಡುಗರ ಕೈಗೆ ಗನ್ ಕೊಟ್ಟು ಹೊಡೆಸಿ ಬಿಟ್ರಾ..!?

ಕೇವಲ ರಾಜಕಾರಣಕ್ಕಾಗಿ, ರಾಜಕೀಯ ದ್ವೇಷಕ್ಕೆ ಅದು ಸಹ ಕಂಟ್ರಿಮೆಡ್ ಪಿಸ್ತೂಲು ಬಳಕೆ ಮಾಡಿ ಹೊಡೆದು ಬಿಡ್ತಾರಾ? ಅದರಲ್ಲೂ ಚಡಚಣ ತಾಲೂಕಿನಲ್ಲಿ ಕಾಂಗ್ರೆಸ್ ಮುಖಂಡನಾಗಿ ಗುರುತಿಸಿಕೊಂಡು ಓಡಾಡುತ್ತಿದ್ದ ಊರ ಗೌಡನ ಕೊಲ್ಲೋದು ಅಂದ್ರೆ ಸುಮ್ನೆನಾ?? ಹೀಗಾಗಿಯೇ ಭೀಮನಗೌಡ ಹತ್ಯೆ ಹಿಂದೆ ಹಲವು ಅನುಮಾನಗಳು ಕಾಡೋದಕ್ಕೆ ಶುರು ಮಾಡಿವೆ. ಕೆಲವರು ಇದೊಂದು ಬರೀ ರಾಜಕೀಯಕ್ಕಾಗಿ ನಡೆದ ಹತ್ಯೆ ಅಲ್ಲವೇ ಅಲ್ಲ ಎನ್ನುತ್ತಿದ್ದಾರೆ. ಮತ್ತೊಂದು ಆಂಗಲ್‌ನಲ್ಲಿ ಪ್ರಕರಣವನ್ನ ಇನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ ಹೋದರೆ, ಭೀಮಾತೀರದಲ್ಲಿ ಆದೊಂದು ಗ್ಯಾಂಗ್ ತೆರೆಮರೆಯಲ್ಲಿ ನಿಂತು ಮನಿಯಾರ್ ಹುಡುಗರಿಂದ ಈ ಹತ್ಯೆ ಮಾಡಿಸುತ್ತಾ ಅನ್ನೋ ಅನುಮಾನಗಳು ಕಾಡುತ್ತಿವೆ. ಯಾಕಂದ್ರೆ ಈ ಪ್ರಕರಣದಲ್ಲಿ ಭಾಗಿಯಾಗಿರೋ ರಜೀಉಲ್ಲಾ ಮಕಾನದಾರ್, ವಸೀಂ ಮನಿಯಾರ್, ಫಿರೋಜ್, ಮೌಲಾಲಿ ಲಾಡೇಸಾಬ್ ಪ್ರೊಫೆಷನಲ್ ಕ್ರಿಮಿನಲ್‌ಗಳಲ್ಲ. ಇಂಥ ಎಳೆ ಹುಡುಗರಿಗೆ ಕಂಟ್ರಿ ಪಿಸ್ತೂಲ್‌ಗಳು ಹೇಗೆ ಸಿಕ್ಕವು? ಹತ್ಯೆಯ ಸ್ಕೆಚ್ ರೆಡಿ ಮಾಡಿಕೊಟ್ಟಿದ್ದ್ಯಾರು ಎನ್ನುವ ಅನುಮಾನಗಳಿವೆ.

ಅಷ್ಟೇ ಅಲ್ಲದೆ ಇನ್ನೊಂದು ಕಾರಣಕ್ಕೆ ಭೀಮನಗೌಡ ಬಿರದಾರ್ ಹತ್ಯೆಯಲ್ಲಿ ಭೀಮಾತೀರದ ನಟೋರಿಯಸ್‌ಗಳೂ ಸಾತ್ ಕೊಟ್ಟಿದ್ದಾರಾ ಎನ್ನುವ ಡೌಟುಗಳು ಸಹ ಇವೆ. ಯಾಕೆಂದರೆ ಇನ್ನೂ ಇದೇ ಭೀಮನಗೌಡ ಬಿರಾದಾರ್ ಕಳೆದ 2017 ಅಕ್ಟೋಬರ್ 31ರಂದು ನಡೆದಿದ್ದ ಭೀಮಾತೀರದ ನಟೋರಿಯಸ್ ಹಂತಕ ಧರ್ಮರಾಜ್ ಚಡಚಣ ಹತ್ಯೆ ಹಾಗೂ ಆತನ ಸಹೋದರ ಗಂಗಾಧರ ನಿಗೂಢ ಸಾವಿನ ಪ್ರಕರಣದಲ್ಲಿ 8ನೇ ಆರೋಪಿಯಾಗಿದ್ದ. ವಿರೋಧಿ ಗ್ಯಾಂಗಿಗೆ ಇದೇ ಭೀಮನಗೌಡ ಡಬಲ್ ಮರ್ಡರ್ ಹಿಂದಿನ ಅಸಲಿ ಮಾಸ್ಟರ್ ಮೈಂಡ್ ಅನ್ನೋ ಸಂಶಯಗಳಿದ್ದವು. ಹಾಗಾಗಿ ಆ ಗ್ಯಾಂಗ್ ಏನಾದರೂ ಹಳೆ ಸೇಡು ತೀರಿಸಿಕೊಳ್ಳಲು, ಈ ಹೊಸ ಹುಡುಗರ ಕೈಗೆ ವೆಪನ್ ಕೊಟ್ಟು ಗೌಡನ ಕಥೆ ಮುಗಿಸಿಬಿಟ್ರಾ? ಇಷ್ಟೆಲ್ಲ ಅನುಮಾನಗಳು ಈಗ ಭೀಮನಗೌಡ ಬಿರಾದಾರ್ ಹತ್ಯೆಯಲ್ಲಿ ಮೂಡುತ್ತಿವೆ. ಯಾವ ಅನುಮಾನ ಗಟ್ಟಿ, ಯಾವ ಅನುಮಾನ ಟೊಳ್ಳು ಅನ್ನೋದನ್ನ ಪೊಲೀಸರೇ ತನಿಖೆ ಮೂಲಕ ಬಯಲಿಗೆಳೆಯಬೇಕಿದೆ. ☯

# ರಂಗಭೂಮಿ ಪ್ರತಿಭೆ ರಾಜು ತಾಳಿಕೋಟೆ ನಿಧನ



ಉತ್ತರ ಕರ್ನಾಟಕದ ಜನಪ್ರಿಯ ರಂಗಭೂಮಿ ಕಲಾವಿದ, ಧಾರವಾಡ ರಂಗಾಯಣದ ನಿರ್ದೇಶಕ ಹಾಗೂ ಚಲನಚಿತ್ರ ನಟ ರಾಜು ತಾಳಿಕೋಟೆ ಅವರು ಅಕ್ಟೋಬರ್ 13, 2025ರಂದು ಹೃದಯಘಾತವಾಗಿ ನಿಧನರಾಗಿದ್ದಾರೆ. ರಾಜು ತಾಳಿಕೋಟೆ ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಚಿಕ್ಕಸಿಂದಗಿ ಗ್ರಾಮದವರಾಗಿದ್ದರು. ಅವರ ಮೂಲ ಹೆಸರು ರಾಜೇಸಾಬ ಮುಕ್ತುಂಸಾಬ್ ತಾಳಿಕೋಟಿ. ಮತ ಪರಂಪರೆಯಲ್ಲಿ ಬೆಳೆದು ಧರ್ಮಕ್ಕೇ ಸೆಡ್ಡು ಹೊಡೆದ ಕೀರ್ತಿ ರಾಜು ಅವರಿಗೆ ಸಲ್ಲಬೇಕು.

ತಮ್ಮ ತಂದೆ-ತಾಯಿಯ ನಾಲ್ಕು ಮಕ್ಕಳಲ್ಲಿ ಕೊನೆಯವರು ರಾಜು. ತಂದೆ- ತಾಯಿ 'ಖಾಸ್ಗತೇಶ್ವರ ನಾಟ್ಯ ಸಂಘ' ಸ್ಥಾಪಿಸಿದ್ದರು. ತಾಳಿಕೋಟೆ ಖಾಸ್ಗತೇಶ್ವರ ಮಠದ ಪ್ರಸಾದ ನಿಲಯಕ್ಕೆ ವರ್ಷಕ್ಕೆ ಅರ್ಧ ಚೀಲ ಜೋಳ ಮತ್ತು ರೂ. 75 ನೀಡಿ ಅವರ ತಾಯಿ ಶಾಲೆಗೆ ಸೇರಿಸಿದ್ದರು. ಆಗಲೇ ಸಂಗೀತಾಭ್ಯಾಸ ಮಾಡಿದರು. ಆದರೆ ನಾಲ್ಕನೆಯ ತರಗತಿ ಓದುವಾಗ 11ನೇ ವಯಸ್ಸಿನಲ್ಲಿ ತಂದೆ -ತಾಯಿಗಳಿಬ್ಬರೂ ತೀರಿ ಹೋಗಿದ್ದರಿಂದ ರಾಜು ಅವರ ಓದು ಮೊಟಕಾಯಿತು. ಹೊಟ್ಟೆ ಪಾಡಿಗೆ ಹಲವು ಕೆಲಸಗಳನ್ನು ಮಾಡಬೇಕಾಯಿತು.

ಹೋಟೆಲ್‌ನಲ್ಲಿ ಸಪ್ಲೈಯರ್ ಆಗಿ, ಲಾರಿ ಕ್ಲೀನರ್, ಗೇಟ್ ಕೀಪರ್ ಆಗಿ ಹೀಗೆ ಹೊಟ್ಟೆಪಾಡಿಗಾಗಿ ಹಲವಾರು ಕೆಲಸ ಮಾಡುತ್ತ ಬಂದ ಅವರು, ಚಿತ್ತರಗಿ ನಾಟಕ ಕಂಪನಿಯಲ್ಲಿ ಗೇಟ್ ಕೀಪರ್ ಆಗಿ, ಪ್ರಚಾರ ಕಲಾವಿದನಾಗಿ, ಪರದೆ ಎಳೆಯುತ್ತ ಗ್ರೀನ್ ರೂಂ ಕಲಾವಿದರಾದರು. ಪಾತ್ರಧಾರಿಯೊಬ್ಬ ಕೈಕೊಟ್ಟ ವೇಳೆ ಬಣ್ಣ ಹಚ್ಚಿದ ರಾಜು ಅವರು ಮತ್ತೆ ಹಿಂತಿರುಗಿ ನೋಡಲಿಲ್ಲ. ಅವರೊಳಗಿನ ಕಲಾವಿದ ಬೆಳಕಿಗೆ ಬಂದಿದ್ದೇ ತಡ, ತಂದೆ-ತಾಯಿ ಕಟ್ಟಿ ಬೆಳೆಸಿದ್ದ ಖಾಸ್ಗತೇಶ್ವರ ನಾಟ್ಯ ಸಂಘಕ್ಕೆ ಅಣ್ಣನ ಜೊತೆ ಸೇರಿ 1983ರಲ್ಲಿ ಮರುಜೀವ ತುಂಬಿದರು.

ರಾಜು ಅವರು ಜೀವನದ ಬಹುಪಾಲು ಸಮಯವನ್ನು ಉತ್ತರ ಕರ್ನಾಟಕದ ಹಳ್ಳಿಗಳಲ್ಲಿ ನಾಟಕಗಳ ಮೂಲಕ ಜನರನ್ನು ರಂಜಿಸುವುದರಲ್ಲಿಯೇ ಕಳೆದಿದ್ದರು. ರಾಜು ತಾಳಿಕೋಟಿಯವರು ಉತ್ತರ ಕರ್ನಾಟಕದ ಶೈಲಿಯ ಭಾಷೆ ಮತ್ತು ಉಡುಗೆ-ತೊಡುಗೆಯೊಂದಿಗೆ ಹಾಸ್ಯ ಮತ್ತು ಬೋಧಪ್ರದ ಪಾತ್ರಗಳನ್ನು ಮಾಡುತ್ತಿದ್ದರಿಂದ ಅಪಾರ ಜನಪ್ರಿಯತೆ ಗಳಿಸಿದ್ದರು. ಅದರಲ್ಲೂ ವಿಶೇಷವಾಗಿ, ಕುಡುಕನ ಪಾತ್ರಗಳಲ್ಲಿ ಅವರ ಅಭಿನಯ ಅತ್ಯಂತ ಲೀಲಾಜಾಲವಾಗಿರುತ್ತಿತ್ತು. 'ಕಲಿಯುಗದ ಕುಡುಕ', 'ಕುಡುಕರ ಸಾಮ್ರಾಜ್ಯ', ಮತ್ತು 'ಅಸಲಿ ಕುಡುಕ' ಅವರ ಪ್ರಖ್ಯಾತ ನಾಟಕಗಳಾಗಿದ್ದು, ಈ ನಾಟಕಗಳ ಆಡಿಯೊ ಕ್ಯಾಸೆಟ್‌ಗಳು ಕೂಡ ಆ ಕಾಲದಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಮನೆಮಾತಾಗಿದ್ದವು.

ರಂಗಭೂಮಿಯಲ್ಲಿ ಅಪಾರ ಅನುಭವ ಪಡೆದ ನಂತರ ರಾಜು ಅವರು ಕನ್ನಡ ಚಲನಚಿತ್ರ ರಂಗಕ್ಕೆ ಪ್ರವೇಶಿಸಿದರು. ಪ್ರಖ್ಯಾತ ನಿರ್ದೇಶಕ ಯೋಗರಾಜ್ ಭಟ್ ಅವರ 'ಮನಸಾರೆ' (2009) ಚಿತ್ರದ ಮೂಲಕ ಅವರು ಜನಪ್ರಿಯತೆ ಗಳಿಸಿದರು. ನಂತರ 'ಪಂಚರಂಗಿ', 'ಪರಮಾತ್ಮ', 'ಭರ್ಜರಿ', 'ಮತ್ತೊಂದ್ ಮದುವೇನಾ!' 'ಮೈನಾ' ಸೇರಿದಂತೆ ಹಲವಾರು ಚಿತ್ರಗಳಲ್ಲಿ ತಮ್ಮದೇ ಆದ ವಿಶಿಷ್ಟ ಹಾಸ್ಯ ಶೈಲಿಯ ಮೂಲಕ ಪ್ರೇಕ್ಷಕರ ಗಮನ ಸೆಳೆದಿದ್ದರು. ರಾಜು ತಾಳಿಕೋಟೆ ಅವರು ಕಿರಿತೆರೆಯ 'ಬಿಗ್ ಬಾಸ್' 7 ಸೀಸನ್ನಿನ ಸ್ಪರ್ಧಿಯಾಗಿದ್ದರು.

2024 ವರ್ಷದಲ್ಲಿ ಕರ್ನಾಟಕ ಸರ್ಕಾರವು ರಾಜು ತಾಳಿಕೋಟೆ ಅವರನ್ನು ಧಾರವಾಡ ರಂಗಾಯಣ ನಿರ್ದೇಶಕರನ್ನಾಗಿ ನೇಮಕ ಮಾಡಿತ್ತು. ಈ ಹುದ್ದೆ ಸಿಕ್ಕ ಮೇಲೆ ರಾಜು ಫುಲ್ ಬ್ಯುಸಿ ಯಾಗಿದ್ದರು. ನಟನೆ ಕಮ್ಮಿಯಾಗಿತ್ತು. ಇದೀಗ ದಿಢೀರ್ ಹೃದಯಾಘಾತಕ್ಕೀಡಾಗಿ ನಮ್ಮನ್ನೆಲ್ಲ ಅಗಲಿದ್ದಾರೆ. ಅಗಲಿದ ಕಲಾ ಚೇತನಕ್ಕೆ ನಮ್ಮ ನಮನಗಳು ಸಲ್ಲುತ್ತವೆ. ☯



ಬಾಲಕಿಯ ಮೃತದೇಹ

**ಮೈಸೂರಿನ ಜಗದ್ವಿಖ್ಯಾತ ಅರಮನೆ ಬಳಿಯೇ ಬಲೂನ್ ಮಾರಿಕೊಂಡು ಬದುಕು ಸಾಗಿಸುತ್ತಿದ್ದ ರಾಯಚೂರು ಮೂಲದ ಬಡವರ ಅಪ್ರಾಪ್ತ ಬಾಲಕಿಯನ್ನು ಕಾಮಾಂಧನೊಬ್ಬ ಅಮಾನುಷವಾಗಿ ಅತ್ಯಾಚಾರಗೈದು, ಭೀಕರವಾಗಿ ಮುಖ ಮೂತಿ ಕುಯ್ದು ಕೊಲೆ ಮಾಡಿ ಪರಾರಿಯಾಗಿದ್ದು, ಆತನನ್ನು ಪೊಲೀಸರು ಕೊಳ್ಳೇಗಾಲ ಬಸ್ ನಿಲ್ದಾಣದಲ್ಲಿ ಬಂಧಿಸಿದ ನಂತರ ಆತನನ್ನು ಮೈಸೂರಿಗೆ ಕರೆತರುತ್ತಿದ್ದಾಗ, ಆಸಾಮಿ ತಾನು ಬಿಎಂಶ್ರೀ ನಗರದ ನಿವಾಸಿ ಎಂದು ಹೇಳಿದ್ದು, ಪೊಲೀಸರು ಅವನ ಮನೆ ನೋಡುವ, ಸಾಕ್ಷಿ ಸಂಗ್ರಹಿಸುವ ಸಲುವಾಗಿ ಅತ್ತ ಹೊರಟಾಗ, ಉಚ್ಚೆ ಉಯ್ಯಬೇಕು ಎಂದು ಕೆಳಗಿಳಿದು ಎಸ್ಕೇಪ್ ಆಗಲು ಯತ್ನಿಸಿದ್ದು, ಪಿಎಸ್ಐ ಜೈಕೀರ್ತಿ ಅವರು ಗುಂಡು ಹೊಡೆದು ಕೆಡವಿದ್ದಾರೆ!!**

ಅತ್ಯಾಚಾರ ಕೊಲೆ ಪ್ರಕರಣ ಬೆಳಕಿಗೆ ಬಂತೋ ಆವಾಗಲೇ ಪೊಲೀಸ್ ಕಮೀಷನರ್ ಸೀಮಾ ಮೇಡಂ ಅಲರ್ಟ್ ಆದ್ರು. ಕೇವಲ 24 ಗಂಟೆಗಳ ಹಿಂದಷ್ಟೇ ದಸರಾ ವಸ್ತು ಪ್ರದರ್ಶನದ ಬಳಿ ರೌಡಿ ಶೀಟರ್ ವೆಂಕಟೇಶ್ ಭೀಕರವಾಗಿ ಕೊಲೆಯಾಗಿದ್ದ. ಈ ಪ್ರಕರಣದ ಮೂರು ತಂಡ ರಚನೆಯಾಗಿತ್ತು. ಅಷ್ಟರಲ್ಲಾಗಲೇ ಅವರಿಗೆ ಸಿಸಿ ಕ್ಯಾಮರಾ ಸುಳಿವು ದೊರೆತಿತ್ತು.

**ಕಲಬುರ್ಗಿ ಕುಟುಂಬ!**

ದಸರಾಗಾಗಿ ಕಲಬುರ್ಗಿಯಿಂದ ಬೆಲೂನ್ ಮಾರಾಟ ಮಾಡಲು ಬಂದ ಬಡ ಕುಟುಂಬದ ನತದೃಷ್ಟ



ಪೊಲೀಸರಿಂದ ಗುಂಡೇಟು ತಿಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಕಾಮುಕ ಕಾರ್ತಿಕ್

# ಅರಮನೆ ಬಳಿ ಅಮಾಯಕ ಬಾಲಕಿಯ ಅತ್ಯಾಚಾರ-ಕೊಲೆ!

**ಈ** ಬಾರಿ ದಸರಾ ಸಂಭ್ರಮದಲ್ಲಿ ಮುಳುಗಿರೋ ಮೈಸೂರಿಗೆ ಎರಡೆರಡು ಕಂಟಕ ಎದುರಾದವು. ಒಂದು ಕ್ಯಾತಮಾರನಹಳ್ಳಿ ರೌಡಿ ಶೀಟರ್ ಗಿಲ್ಕಿ ವೆಂಕಟೇಶ್ ಹತ್ಯೆ. ಇನ್ನೊಂದು, ಅರಮನೆ ಹತ್ತಿರ ಬಲೂನ್ ಮಾರಾಟ ಮಾಡಲು ಬಂದಿದ್ದ ರಾಯಚೂರಿನ ಬಡ ಕುಟುಂಬದ ಹತ್ತು ವರ್ಷದ ಹೆಣ್ಣು ಮಗಳ ಭೀಕರ ರೇಪ್ ಅಂಡ್ ಮರ್ಡರ್!! ರೌಡಿ ಕೊಲೆ ವಿಚಾರ ಅತ್ಲಾಗಿರಲಿ, ಈ ಹೆಣ್ಣು ಮಗುವಿನ ಕೊಲೆ ಮಾತ್ರ ಅಕ್ಷಮ್ಯ.

ರಾಜ್ಯವನ್ನೇ ಬೆಚ್ಚಿ ಬೀಳಿಸಿದ್ದ ಈ ಅಪ್ರಾಪ್ತ ಬಾಲಕಿಯ ಮೇಲಿನ ಅತ್ಯಾಚಾರ ಪ್ರಕರಣಕ್ಕೆ ಮೈಸೂರು ಪೊಲೀಸರು ನ್ಯಾಯ ಒದಗಿಸುವತ್ತ ಗಂಭೀರವಾಗಿ ಹೆಜ್ಜೆ ಹಾಕಿದ್ದರು. ಈ ಭೀಭತ್ಸ ಕೃತ್ಯ ನಡೆದ ಕೆಲವೇ ಗಂಟೆಗಳಲ್ಲಿ ವಿಕೃತಕಾಮಿಯನ್ನ ಹೆಡೆಮುರಿ ಕಟ್ಟುವಲ್ಲಿ ಯಶಸ್ವಿಯಾಗಿದ್ದು ನಿಜ ದಸರಾ ಸಂಭ್ರಮ! ಸೆರೆಯಾದ ಕಾಮುಕ ಪೊಲೀಸರ ಮೇಲೆ ಹಲ್ಲೆ ನಡೆಸಿ ತಪ್ಪಿಸಿಕೊಳ್ಳುವ ಯತ್ನ ನಡೆದಾಗ ಕಾಲಿಗೆ ಗುಂಡು ಹಾರಿಸಿ ತಮ್ಮನ್ನ ರಕ್ಷಿಸಿಕೊಂಡಿದ್ದಲ್ಲದೆ ಅತ್ಯಾಚಾರಿಯನ್ನ ಶಾಶ್ವತ ಅಂಗ ವಿಕಲನನ್ನಾಗಿಸಿ ಸದೆಬಡಿದಿದ್ದಾರೆ.



ಸಿಸಿ ಕ್ಯಾಮೆರಾದಲ್ಲಿ ಸೆರೆಯಾದ ಕಾಮುಕ ಕಾರ್ತಿಕ್

ವಿಜಯನಗರ ಠಾಣೆ ಸಬ್ ಇನ್ಸ್ಪೆಕ್ಟರ್ ಜೈಕೀರ್ತಿ ಅವರ ಈ ಕಾರ್ಯ ಮೈಸೂರು ಮಾತ್ರವಲ್ಲ, ಇಡೀ ರಾಜ್ಯದ ಜನರ ಮೆಚ್ಚುಗೆಗೂ ಪಾತ್ರವಾಗಿದೆ. ಅಸಲು ಕಾಮುಕನ ಮೇಲೆ ಜೈಕೀರ್ತಿ ಗುಂಡು ಹಾರಿಸದಿದ್ದಲ್ಲಿ ಪೊಲೀಸರಿಗೂ ಅಪಾಯ ಕಟ್ಟಿಟ್ಟಬುತ್ತಿಯಾಗುತ್ತಿತ್ತು. ಆ ಕ್ಷಣದಲ್ಲಿ ಜೈಕೀರ್ತಿ ಸರ್ ತೆಗೆದುಕೊಂಡ ನಿರ್ಣಯ ಸಂದರ್ಭೋಚಿತ. ಸಧ್ಯ ಪಿಎಸ್ಐ ಜೈಕೀರ್ತಿ ಮೈಸೂರಿನ ಸೂಪರ್ ಕಾಪ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದಾರೆ.

ಯಾವಾಗ ಬಾಲಕಿ ಮೇಲೆ ಆರೋಪಿಗಳು ಸರೆಂಡರ್ ಆದಾಗ ಪೊಲೀಸರು ನಿಟ್ಟುಸಿರು ಬಿಟ್ಟಿದ್ದರು. ಅದನ್ನು ಮರೆವ ಮುನ್ನವೇ ಇಂಥ ಅಮಾನುಷ ಕ್ರೌರ್ಯ ನಡೆದು ಹೋಗಿತ್ತು.



ಕಮೀಷನರ್ ಸೀಮಾ ಲಾಟ್ಕರ್

ವೆಂಕಟೇಶ್ ಹತ್ಯೆ ಪ್ರಕರಣದ ಹಂತಕರನ್ನ ಜೈಲು ಕಂಬಿ ಹಿಂದೆ ಕಳಿಸಿದ ಬೆನ್ನ ಹಿಂದೆಯೇ ಅದೇ (ದಸರಾ ವಸ್ತುಪ್ರದರ್ಶನದ ಬಳಿ) ಸ್ಥಳದಲ್ಲಿ 10 ವರ್ಷದ ಅಮಾಯಕ ಬಾಲಕಿಯ ಮೃತದೇಹ ದೊರೆತಾಗ ಮೈಸೂರಿನ ಜನತೆ ಬೆಚ್ಚಿಬಿದ್ದದ್ದು ಮಾತ್ರವಲ್ಲ, ಪೊಲೀಸರು ಸಹ ವಿಚಲಿತರಾದರು.

ಕೇವಲ 24 ಗಂಟೆ ಅವಧಿಯಲ್ಲಿ ಒಂದೇ ಸ್ಥಳದಲ್ಲಿ ಎರಡು ಹತ್ಯಾ ಪ್ರಕರಣಗಳು ಪೊಲೀಸರ ನಿದ್ದೆ ಕೆಡಿಸಿತ್ತು. ಹೆಣ್ಣು ಮಗುವಿನ ಮೃತದೇಹ ಪತ್ತೆಯಾದ ಸ್ಥಿತಿ ಗಮನಿಸಿದಾಗಲೇ ಪೊಲೀಸರಿಗೆ ಖಚಿತವಾಗಿತ್ತು ಇದು ಅತ್ಯಾಚಾರ ಮತ್ತು ಕೊಲೆ ಎಂದು. ಬಾಲಕಿ ಧರಿಸಿದ್ದ ಕೆಳ ಉಡುಪು ಮಾಯವಾಗಿತ್ತು. ದೇಹದ ಮೇಲೆ 20 ಕ್ಕೂ ಹೆಚ್ಚು ಸ್ಥಳದಲ್ಲಿ ಗಾಯದ ಗುರುತುಗಳು. ಬಾಲಕಿಯ ಮರ್ಮಾಂಗ ಛಿದ್ರವಾಗಿತ್ತು. ಅದೊಂದು ಭೀಭತ್ಸ ಕೃತ್ಯವೆಂಬುದರಲ್ಲಿ ಸಂಶಯವೇ ಇರಲಿಲ್ಲ.

ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್, ಡಿಸಿಪಿಗಳಾದ ಬಿಂದುಮಣಿ ಹಾಗೂ ಸುಂದರರಾಜ್ ಅವರು ತಡಮಾಡದೆ ದುಷ್ಕರ್ಮಿಯ ಪತ್ತೆಗೆ ಮೂರು ತಂಡಗಳನ್ನ ರಚಿಸಿದ್ರು. ವಿಜಯನಗರ ಇನ್ಸ್ಪೆಕ್ಟರ್ ಸುರೇಶ್, ಸಬ್ಇನ್ಸ್ಪೆಕ್ಟರ್ ಜೈಕೀರ್ತಿ ಹಾಗೂ ಮಹಿಳಾ ಠಾಣೆ ಇನ್ಸ್ಪೆಕ್ಟರ್ ಅಶೋಕ್ ನೇತೃತ್ವದಲ್ಲಿ

ಹೆಣ್ಣುಮಗಳು ಈ ನತದೃಷ್ಟ ಬಾಲಕಿ. ರಾತ್ರಿ ಸುಮಾರು 11 ಗಂಟೆವರೆಗೂ ಬಲೂನ್ ಹಾಗೂ ಬೊಂಬೆಗಳನ್ನ ಮಾರಾಟ ಮಾಡಿ ದಣಿವಾಗಿದ್ದ ಈ ಕುಟುಂಬ ದಸರಾ ವಸ್ತುಪ್ರದರ್ಶನದ ಬಳಿಯೇ ತಾತ್ಕಾಲಿಕವಾಗಿ ನಿರ್ಮಿಸಿಕೊಂಡಿದ್ದ ಪ್ಲಾಸ್ಟಿಕ್ ಶೆಡ್‌ನಲ್ಲಿ ನಿದ್ರೆಗೆ ಜಾರಿತ್ತು. ಹೆತ್ತವರ ಜೊತೆ ಬಾಲಕಿ ಸಹ ಮೊಬೈಲ್‌ನಲ್ಲಿ ಸಿನಿಮಾ ವೀಕ್ಷಿಸುತ್ತಾ ನಿದ್ರೆಗೆ ಶರಣಾಗಿದ್ದಾಳೆ.

ಕೆಲವೇ ಗಂಟೆಗಳಲ್ಲಿ ಇದು ಶಾಶ್ವತ ನಿದ್ರೆ ಅನ್ನೋ ಕಿಂಚಿತ್ತೂ ಮಾಹಿತಿ ಇಲ್ಲದ ಹೆಣ್ಣುಮಗು ಕನಸಿನ ಲೋಕಕ್ಕೆ ಜಾರಿದ್ದಾಳೆ. ಈ ಮಧ್ಯೆ ವರುಣನ ಸಿಂಚನವಾಗಿ ತಣ್ಣಗಿನ ವಾತಾವರಣ ಗಾಢನಿದ್ರೆಗೆ ಜಾರಲು ಸಹಕರಿಸಿದೆ. ವಿಕೃತ ಕಾಮುಕನ ವೇಷದಲ್ಲಿ ಬಂದ ಯಮಕಿಂಕರ ಬಾಲಕಿಯನ್ನ ಮುಕ್ಕಿಬಿಟ್ಟಿದ್ದಾನೆ. ಗಾಢ ನಿದ್ರೆಯಲ್ಲಿದ್ದ ಬಾಲಕಿಯ ಬಾಯಿ ಮುಚ್ಚಿ ಹೊತ್ತೊಯ್ದ ಕಾಮುಕ ಘೋರ ಕೃತ್ಯವೆಸಗಿ ಪರಾರಿಯಾಗಿದ್ದಾನೆ.



ಪಿಎಸ್ಐ ಜೈಕೀರ್ತಿ

ಆ ಕುಟುಂಬ ನೆಲೆಸಲು ಹಾಕಿದ್ದ ತಾತ್ಕಾಲಿಕ ಶೆಡ್ ಮುಂಭಾಗವೇ ಇದ್ದ ಮನೆಯೊಂದರಲ್ಲಿ ಅಳವಡಿಸಲಾಗಿದ್ದ ಸಿಸಿ ಕ್ಯಾಮರಾ ತನ್ನ ಕೆಲಸ ಮಾಡಿದೆ. ವಿಕೃತ ಕಾಮಿ ಮುಗ್ಧ ಬಾಲಕಿಯನ್ನ ಹೊತ್ತೊಯ್ದ ದೃಶ್ಯಗಳು ಸಿಸಿ ಕ್ಯಾಮರದಲ್ಲಿ ಸೆರೆಯಾಗಿದೆ. ಕೆಲವೇ ಸಮಯದಲ್ಲಿ ಅತ್ಯಾಚಾರಿಯ ಫೋಟೋಗಳು ಪೊಲೀಸರ ಕೈ ಸೇರಿದೆ. ತಕ್ಷಣವೇ ಆರೋಪಿ ಸೆರೆಗೆ ರಚನೆಯಾದ ತಂಡಕ್ಕೆ ಆ ಫೋಟೋಗಳೆಲ್ಲ ರವಾನೆಯಾಗಿದೆ. ಘಟನೆ ನಡೆದ ಸ್ಥಳದಿಂದ ಹೊರಟ ಕಾಮುಕನ ಚಲನವಲನಗಳ ಬಗ್ಗೆ ತನಿಖಾ ತಂಡ ಮಾಹಿತಿ ಪಡೆದಿದೆ.

ಅಲ್ಲಿಂದ ಮುಂದೆ ಸಾಗುವ ಎಲ್ಲಾ ರಸ್ತೆಗಳಲ್ಲಿರುವ ಸಿಸಿ ಕ್ಯಾಮರಾಗಳನ್ನ ಪರಿಶೀಲಿಸಿದಾಗ ಅತ್ಯಾಚಾರಿ ಕೊನೆಗೆ ನಿಂತಿದ್ದು ಹಳೆ ಆರ್‌ಎಂಸಿ ಖಾಸಗಿ ಬಸ್ ಸ್ಟ್ಯಾಂಡ್‌ನಲ್ಲಿ!

**ಕಾರ್ತಿಕ್ ಗರಡಿ!**


ಅಲ್ಲಿದ್ದ ಕೆಲ ವ್ಯಕ್ತಿಗಳನ್ನ ವಿಚಾರಿಸಿದಾಗ ಆತ ಕಾರ್ತಿಕ್ ಗರಡಿ ಎಂಬ ವಿಚಾರ ಬೆಳಕಿಗೆ ಬಂದಿದೆ. ಆತ ಬಸ್‌ಗಳನ್ನ ಸ್ವಚ್ಛಗೊಳಿಸುವ ಕೆಲಸ ಮಾಡಿಕೊಂಡಿದ್ದ ಸಿದ್ದಲಿಂಗಪುರದ ನಿವಾಸಿ ಎಂದು ಗೊತ್ತಾಗಿದೆ. ಬೆಳಿಗ್ಗೆ ಸುಮಾರು 10 ಗಂಟೆ ವೇಳೆಯಲ್ಲಿ ಕೊಳ್ಳೆಗಾಲ ಬಸ್ ಹತ್ತಿ ಹೊರಟ ಮಾಹಿತಿ ಲಭ್ಯವಾಗಿದೆ. ತಡಮಾಡದ ತಂಡ ಕೊಳ್ಳೇಗಾಲಕ್ಕೆ ಪ್ರಯಾಣಿಸಿದೆ. ಕೊಳ್ಳೆಗಾಲದ ಭೀಮನಗರ, ಆದರ್ಶನಗರದಲ್ಲಿ ಪೊಲೀಸ್ ತಂಡ ಹುಡುಕಾಟ ನಡೆಸಿದಾಗ ಆತ ಪತ್ತೆಯಾಗಿಲ್ಲ, ತಾಳ್ಮೆ ಕಳೆದುಕೊಳ್ಳದೆ ಹುಡುಕಾಟ ಮುಂದುವರೆಸಿದಾಗ ಐನಾತಿ ಕಾಮಿ ಅಲ್ಲೇ ಟ್ಯಾಕ್ಸಿ ಸ್ಟ್ಯಾಂಡ್ ಬಳಿ ಇರುವ ಹೊಂಗೆ ಮರದ ಕೆಳಗೆ ವಿಶ್ರಾಂತಿ ಪಡೆಯುತ್ತಿದ್ದ ದೃಶ್ಯ ಕಾಣಿಸಿತ್ತು!

ಪೊಲೀಸರು ಹುಷಾರಾಗಿ ಕವರ್ ಮಾಡಿದ್ದಾರೆ. ಖಾಕಿಧಾರಿಗಳು ಸುತ್ತುವರೆಯುತ್ತಿದ್ದಂತೆ ಕಾಮುಕ ಗರಬಡಿದಂತೆ ಕಂಪಿಸಿ ಅಲ್ಲಿಂದ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಆದರೆ ಮಾವಂದಿರು ಬಿಡಬೇಕಲ್ಲ...

☞ 10



ಬಾಲಕಿಯ ಮೃತದೇಹ ಬಿದ್ದಿದ್ದ ಸ್ಥಳ



1990 ರ ಕಾಲಘಟ್ಟದಲ್ಲಿ ವೀರಪ್ಪನ್ ಹಾವಳಿ ಜೋರಾಗಿತ್ತು. 1993ರಲ್ಲಿ ಅವನ ಸುಳಿವು ನೀಡಿದವರಿಗೆ 5ಕೋಟಿ ಬಹುಮಾನ ಘೋಷಿಸಲಾಗಿತ್ತು. ಮುಂದೆ ಅದು 10 ಕೋಟಿಗೆ ವಿಸ್ತರಿಸಿತ್ತು. ಅನಂತರ 55 ಕೋಟಿಗೆ ಏರಿತ್ತು!

# ನರಹಂತಕ ಸಂಹಾರವಾಗಿ ಇಲ್ಲಿಗೆ 21 ವರ್ಷ! ವೀರಪ್ಪನ್ ಪ್ರೈಜ್ ಕ್ಯಾಚ್ ಇನ್ನೂ ಹಂಚಿಕೆಯಾಗಿಲ್ಲ!!


**ಅಕ್ಟೋಬರ್ 18,2004. ಕಾಡುಗಳ್ಳ,ನರಹಂತಕ ವೀರಪ್ಪನ್ ಪೊಲೀಸ್ ಎನ್ಕೌಂಟರ್‌ಗೆ ಬಲಿಯಾದ ದಿನ.ಸುಮಾರು 40 ವರ್ಷ ಪೊಲೀಸ್ ಇಲಾಖೆಯನ್ನು ಕಾಡಿದ್ದ ಆತನ ತಲೆಗೆ ಸರ್ಕಾರ ಇಟ್ಟಿದ್ದ ಇನಾಮು 55 ಕೋಟಿ. ವೀರಪ್ಪನ್ ಸಂಹಾರವಾಗಿ 21 ವರ್ಷ ಕಳೆಯುತ್ತಿದ್ದರೂ, ಪ್ರೈಜ್ ಕ್ಯಾಚ್ ಮನಿ ಅಧಿಕಾರಿ ವರ್ಗಕ್ಕೆ ಹಂಚಿಕೆಯಾಗಿಲ್ಲ! ಇದೀಗ ಈ ಕಾರ್ಯಕ್ಕೆ ಚಾಲನೆ ನೀಡಿ, ಯಾರ್‍ಯಾರಿಗೆ ಕೊಡಬೇಕು, ಎಷ್ಟೆಷ್ಟು ಕೊಡಬೇಕು, ಅದಕ್ಕೆ ಅವರು ಅರ್ಹರೆ... ಎಂಬಿತ್ಯಾದಿ ಸರ್ವೆ ಕಾರ್ಯ ನಡೆಯುತ್ತಿದೆ!! ಇದರ ಸುತ್ತ...ಒಂದು ವರದಿಯು...**

✍ ಮಹದೇವ್ ಕೆಂಪಯ್ಯ

ಕಾಡಿನ ರಾಜ ನಾಗಿ ಮೆರೆಯುತ್ತಿದ್ದ ವೀರಪ್ಪನ್ ನನ್ನು ಹಿಡಿಯಲು ಕರ್ನಾಟಕ ರಾಜ್ಯ ಮಾತ್ರವಲ್ಲದೆ, ಕೇರಳ ತಮಿಳುನಾಡು ರಾಜ್ಯಗಳ ಪೊಲೀಸರು ಹರಸಾಹಸ ಪಡುತ್ತಿದ್ದರು. ಅಂತಹ ಸನ್ನಿವೇಶದಲ್ಲಿ ಅಕ್ಟೋಬರ್ 18, 2004 ರಂದು ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಾಪರಪಟ್ಟಿಯಲ್ಲಿ ಎಸ್‌ಟಿಎಫ್ ಮುಖ್ಯಸ್ಥ ವಿಜಯ್ ಕುಮಾರ್ ಮತ್ತವರ ಟೀಮ್ ವೀರಪ್ಪನ್ ಮತ್ತವನ ಸಹಚರರ ಕತೆ ಕ್ಲೋಸ್ ಮಾಡಿ ಇತಿಹಾಸ ನಿರ್ಮಿಸಿತ್ತು. ನರಹಂತಕ ವೀರಪ್ಪನ್ ತಲೆಗೆ ಎರಡೂ ರಾಜ್ಯಗಳು ಕೋಟ್ಯಂತರ ಪ್ರೈಜ್ ಕ್ಯಾಚ್ ಘೋಷಣೆ ಮಾಡಿದ್ದವಲ್ಲ, ತಮಿಳುನಾಡು ಸರ್ಕಾರ ತನ್ನ ಕರ್ತವ್ಯ ತಾನು ಮಾಡಿತ್ತೋ ಏನೋ ಗೊತ್ತಿಲ್ಲ, ಆದರೆ ನಮ್ಮಲ್ಲಿ ಮಾತ್ರ ಇನ್ನೂ ರಾಯಲ್ಟಿ ಹಣ ಹಂಚಿಕೆಯಾಗಿಲ್ಲ!




ಶಂಕರ ಬಿದರಿ



ಜ್ಯೋತಿಪ್ರಕಾಶ್ ಮಿರ್ಜಿ



ಜಿ.ಎ. ಬಾವ



ಅರಣ್ಯ ಮಂತ್ರಿ ಈಶ್ವರ ಖಂಡ್ರೆ

1993ರಲ್ಲಿ ಏನು ಘೋಷಣೆ ಮಾಡಲಾಗಿತ್ತೋ, ಆದರ ಅನ್ವಯ ಬಹುಮಾನದ ಹಣ ಹಾಗೂ ಎಸ್‌ಟಿಎಫ್‌ನಲ್ಲಿ ಕರ್ತವ್ಯ ನಿರ್ವಹಿಸಿರೋ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗಕ್ಕೆ ಒಂದೊಂದು ನಿವೇಶನ ಹಂಚಿಕೆ ಆಗಬೇಕಿದೆ. ಅರಣ್ಯ ಮಂತ್ರಿ ಸಮಕ್ಷಮದಲ್ಲಿ ಚಾಮರಾಜನಗರ ನಗರ



ಬಿ.ಬಿ. ಅಶೋಕ್‌ಕುಮಾರ್



ಅರಕೇಶ್

ಜಿಲ್ಲಾ ಅರಣ್ಯ ಸಂರಕ್ಷಕರು (ಡಿಸಿಎಫ್) ಕಚೇರಿಯಲ್ಲೇ ಇದು ನಿರ್ಧಾರವಾಗಬೇಕಿದೆ. ಬಲ್ಲ ಮೂಲಗಳ ಪ್ರಕಾರ, 754 ಸಿಬ್ಬಂದಿ ಅರಣ್ಯ ಇಲಾಖೆ ಸಿಬ್ಬಂದಿ ಹಾಗೂ 299 ಪೊಲೀಸ್ ಇಲಾಖೆ ಸಿಬ್ಬಂದಿ ಎಸ್‌ಟಿಎಫ್‌ನಲ್ಲಿ ಕಾರ್ಯ ನಿರ್ವಹಿಸಿದ್ದಾರೆ.

ಈ ಪೈಕಿ ಯಾರ್‍ಯಾರಿಗೆ ವೀರಪ್ಪನ್ ಪ್ರೈಜ್ ಕ್ಯಾಚ್‌ಮನಿ ಹಂಚಿಕೆ ಆಗಬೇಕು... ಯಾರಿಗೆ ಎಷ್ಟೆಷ್ಟು.... ಮತ್ತು ಈ ಹಣ ಪಡೆಯಲಿಕ್ಕೆ ಅವರಿಗೆ ಅರ್ಹತೆ ಇದೆಯೇ? ಎಂಬಿತ್ಯಾದಿ ಲೆಕ್ಕಾಚಾರ ಕಳೆದ ಜೂನ್ ನಿಂದ ಶುರುವಾಗಿತ್ತು. ಅರಣ್ಯ ಮಂತ್ರಿ ಖಂಡ್ರೆ ಅವರು ಚಾಮರಾಜನಗರ ಜಿಲ್ಲಾ ಅರಣ್ಯ ಸಂರಕ್ಷಣ ಕಚೇರಿಯಲ್ಲಿ ಈ ಬಗ್ಗೆ ವರದಿ ತಯಾರಿಸಿ ನೀಡಲು ಆದೇಶ ಮಾಡಿದ್ರು. ಮುಂದೆ ಈ ಕಾರ್ಯ ಏನಾಯ್ತು ಅರ್ಥಾತ್ ಎಲ್ಲಿವರೆಗೆ ಬಂತು ಎಂಬುದು ಇನ್ನೂ ಬಹಿರಂಗವಾಗಿಲ್ಲ. ಎಂ. ರಾಜೇಂದ್ರ, ಮತ್ತು ಎ.ಟಿ. ವೆಂಕಟೇಗೌಡ ಎಂಬಿಬ್ಬರು ಸಿಬ್ಬಂದಿಗಳು ಈ ಹಿನ್ನಲೆಯಲ್ಲಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಅದರಿಂದ ಒಂದಷ್ಟು ಮಾಹಿತಿ ಸಿಕ್ಕಿತ್ತು.

ನರಹಂತಕ ವೀರಪ್ಪನ ವಿಶೇಷ ಕಾರ್ಯಾಚರಣೆಯಲ್ಲಿ ಕಾರ್ಯನಿರ್ವಹಿಸಿದ್ದ ಅಧಿಕಾರಿ, ಸಿಬ್ಬಂದಿಗಳು ಬಹುಮಾನಕ್ಕೆ ಅರ್ಹರಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಖಚಿತಪಡಿಸಿಕೊಂಡು ಪರಿಶೀಲನಾ ವರದಿಯನ್ನು ಸಲ್ಲಿಸಬೇಕು ಎಂದು ಅರಣ್ಯಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆಯು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಅಲ್ಲದೇ 1993ರ ಆದೇಶದಲ್ಲಿ ಸತತ 15 ವರ್ಷಗಳಿಂದ ಕಾರ್ಯಾಚರಣೆಯಲ್ಲಿ ತೊಡಗಿದವರಿಗೆ ಬಹುಮಾನ ನೀಡಲು ಅವಕಾಶ ನೀಡಿರುವ ಬಗ್ಗೆ ನಮೂದಿಸಿಲ್ಲ ಎಂಬ ಸಂಗತಿಯೂ ಇದೀಗ ಬಹಿರಂಗವಾಗಿದೆ.

ಎಂ. ರಾಜೇಂದ್ರ ಮತ್ತು ಎ.ಟಿ. ವೆಂಕಟೇಗೌಡ ಮತ್ತಿತರರು ಕರ್ನಾಟಕ ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿ (10982/2018, ಸಿ/ಡಬ್ಲ್ಯೂ 50155-167 ದಿನಾಂಕ 14.08.2024)ಗೆ ಸಂಬಂಧಿಸಿದಂತೆ ಇಲಾಖೆಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಮ್ ಪರ್ವೇಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯು ವರದಿ ಸಲ್ಲಿಸಲು ನಿರ್ದೇಶಿಸಿದೆ.

2025ರ ಮೇ 2ರಂದು ಅಧಿಕಾರಿಗಳ ಸಭೆ ನಡೆದಿತ್ತು. ಈ ಸಭೆಯ ನಡವಳಿಗಳು 'ದಿ ಫೈಲ್'ಗೆ ಲಭ್ಯವಾಗಿದೆ.

'ನರಹಂತಕ ವೀರಪ್ಪನ್‌ನನ್ನು 2004ರ ಅಕ್ಟೋಬರ್ 18ರಂದು ಸಂಹಾರ ಮಾಡಿದ ದಿನದಂದು ಎಸ್‌ಟಿಎಫ್‌ನಲ್ಲಿ ಕೆಲಸ ನಿರ್ವಹಿಸಿದಂತಹ ಅಧಿಕಾರಿ ಸಿಬ್ಬಂದಿಗಳ ಪೈಕಿ ನ್ಯಾಯಾಲಯದ ಆದೇಶದಲ್ಲಿನ ಒಟ್ಟು 24 ಅಧಿಕಾರಿ ಸಿಬ್ಬಂದಿಗಳನ್ನು ನಿಯುಕ್ತಿಗೊಳಿಸಲಾಗಿದೆಯೇ, ಸರ್ಕಾರವು 2005ರ ಜುಲೈ 8ರಂದು ಹೊರಡಿಸಿದ್ದ ಆದೇಶದಂತೆ ಬಹುಮಾನಕ್ಕೆ ಅರ್ಹರಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಂಡು ಎರಡು ದಿನದೊಳಗಾಗಿ ಆರ್ಥಿಕ ಇಲಾಖೆಯು ಕೋರಿರುವ ಮಾಹಿತಿ ಅನುಸಾರ ಮಾಹಿತಿ ಒದಗಿಸಬೇಕು' ಎಂದು ಚಾಮರಾಜನಗರದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸಿಬ್ಬಂದಿ ಮತ್ತು ನೇಮಕಾತಿ ವಿಭಾಗದ ಎಪಿಸಿಸಿಎಫ್ ಅವರಿಗೆ ಸೂಚಿಸಿರುವುದು ನಡವಳಿಯಿಂದ ಗೊತ್ತಾಗಿದೆ.

ಈ ಬಹುಮಾನಕ್ಕೆ ಅರ್ಹರಿರುವ ಅಧಿಕಾರಿ ಸಿಬ್ಬಂದಿಗಳು ಮತ್ತು ಇದಕ್ಕೆ ಎಷ್ಟು ವೆಚ್ಚವಾಗಲಿದೆ ಎಂಬ ಸಂಪೂರ್ಣ ಮಾಹಿತಿ ಒದಗಿಸಬೇಕು ಎಂದೂ ನಿರ್ದೇಶಿಸಲಾಗಿದೆ. ಮತ್ತು 2004ರ ಅಕ್ಟೋಬರ್ 8ರಂದು ಕೆಲಸ ನಿರ್ವಹಿಸಿರುವ ಬಗ್ಗೆ ಹಾಜರಾತಿ ಪುಸ್ತಕ ಅಥವಾ ಟಾಸ್ಕ್ ಪೋರ್ಸ್‌ಗೆ ನಿಯುಕ್ತಿಗೊಳಿಸಿದ ಆದೇಶದ ಅನ್ವಯ ಖಚಿತಪಡಿಸಿಕೊಳ್ಳಬೇಕು ಎಂದೂ ಸಹ ಸೂಚಿಸಿರುವುದು ತಿಳಿದು ಬಂದಿದೆ.

ಅದೇ ರೀತಿ 2005ರ ಜುಲೈ 8ರಂದು ಒಳಾಡಳಿತ ಇಲಾಖೆಯು ಹೊರಡಿಸಿದ್ದ ಆದೇಶ (ಹೆಚ್‌ಡಿ 33 ಪಿಪಿಪಿ 2005) ಅನ್ವಯ ಒಟ್ಟು 754 ಅಧಿಕಾರಿ ಸಿಬ್ಬಂದಿಗಳ ಪೈಕಿ ಎಲ್ಲಾ ಅಧಿಕಾರಿಗಳಿಗೆ ನಿವೇಶನ ಹಂಚಲಾಗಿದೆಯೇ, ಹಂಚಿದ್ದಲ್ಲಿ ಯಾವ ಮಾನದಂಡಗಳನ್ನು ಅನ್ವಯಿಸಲಾಗಿದೆ, ನಿವೇಶನ ಹಂಚದಿದ್ದಲ್ಲಿ ಯಾವ ರೀತಿ ಕ್ರಮವಹಿಸಲಾಗಿದೆ ಮತ್ತು ಈ ಸಂಬಂಧ ಯಾವುದಾದರೂ ನ್ಯಾಯಾಲಯ ಪ್ರಕರಣ ಬಾಕಿ ಇದೆಯೇ, ಇದ್ದಲ್ಲಿ ಪ್ರಸ್ತುತ ಹಂತದ ಮಾಹಿತಿಯನ್ನು ಒದಗಿಸಬೇಕು ಎಂದು ಒಳಾಡಳಿತ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿರುವುದು ಗೊತ್ತಾಗಿದೆ.


ವೀರಪ್ಪನ್ ವಿಶೇಷ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಒಟ್ಟು 299 ನೌಕರರಲ್ಲಿ ಎಂ. ರಾಜೇಂದ್ರ ಮತ್ತು ಎ.ಟಿ. ವೆಂಕಟೇಗೌಡ ಮತ್ತಿತರರು ಕರ್ನಾಟಕ ಹೈಕೋರ್ಟ್ ರಿಟ್ ಅರ್ಜಿ (10982/2018, ಸಿ/ಡಬ್ಲ್ಯೂ 50155-167 ದಿನಾಂಕ 14.08.2024) ಸಲ್ಲಿಸಿದ್ದರು. ಈ ಪ್ರಕರಣದಲ್ಲಿ ಒಟ್ಟು 14 ಅರ್ಜಿದಾರರು ಹಾಗೂ ಕಾಳೇಗೌಡ ಮತ್ತು ಇತರರು ಹೈಕೋರ್ಟ್‌ನಲ್ಲಿ (ರಿಟ್ ಅರ್ಜಿ 31605/2024) ಪ್ರಕರಣದಲ್ಲಿ 10 ಅರ್ಜಿದಾರರು ಸೇರಿ ಒಟ್ಟಾರೆ 24 ಅಧಿಕಾರಿ ನೌಕರರ ಮಾಹಿತಿಯನ್ನು ಒದಗಿಸಿತ್ತು.

ಅರ್ಜಿದಾರರುಗಳಿಗೆ ಪ್ರೋತ್ಸಾಹ ಧನ 35.00 ಲಕ್ಷ ರೂ. ಹಾಗೂ 2010ರ ಸರ್ಕಾರದ ಆದೇಶದ ಅನ್ವಯ ನಿವೇಶನದ ಮಂಜೂರಾತಿಗಾಗಿ ಪ್ರತಿ ಚದರ ಅಡಿಗೆ 210 ರೂ.ನಂತೆ 63.00 ಲಕ್ಷ ಮತ್ತು ವಾರ್ಷಿಕ ವೇತನ ಬಡ್ತಿಗಾಗಿ 5.06 ಲಕ್ಷ ರೂ. ಸೇರಿ ಒಟ್ಟಾರೆ 103.60 ಲಕ್ಷ ರೂ.ಗಳ ಅವಶ್ಯಕತೆ ಇದೆ ಎಂದು ಅಂದಾಜಿಸಿರುವುದು ತಿಳಿದು ಬಂದಿದೆ.

ಸಭೆಯಲ್ಲಿ ಕೈಗೊಂಡಿರುವ ತೀರ್ಮಾನಗಳ ಕುರಿತು ಸಚಿವ ಈಶ್ವರ್ ಖಂಡ್ರೆ ಅವರೊಂದಿಗೆ ಅಧಿಕಾರಿಗಳು ಚರ್ಚಿಸಿದ್ದಾರೆ ಎಂದು ಗೊತ್ತಾಗಿದೆ.

ಹೀಗೇ, ಇನ್ನೂ ಚರ್ಚೆಯಲ್ಲೇ ಇರುವ ವೀರಪ್ಪನ್ ಪ್ರೈಜ್ ಕ್ಯಾಚ್ ಮನಿ ಹಂಚಿಕೆ ವಿಚಾರ ಆದಷ್ಟು ಬೇಗ ಮುಗಿದು ಈಗಿನ ಅರಣ್ಯ ಸಚಿವ ಖಂಡ್ರೆ ಕಾಲದಲ್ಲೇ ಅರ್ಹರಿಗೆ ತಲುಪಲಿ ಎಂಬುದು ನಮ್ಮ ಆಶಯ. ☯





ವೀರಪ್ಪನ್ ಮತ್ತವನ ಸಹಚರರ ಶವಗಳು

## ಆಪರೇಷನ್ ಕುಕೂನ್

ಭಾರತ ದೇಶದ ಕುಖ್ಯಾತ ನರಹಂತಕನಿಗಾಗಿ ಹಲವು ದಶಕಗಳ ಕಾಲ ನಡೆಯುತ್ತಿದ್ದ ನರಬೇಟೆಯು ಕೇವಲ 20 ನಿಮಿಷಗಳಲ್ಲಿ ಅಂತ್ಯಗೊಂಡಿತ್ತು. ಆತನನ್ನು ಸೆರೆಹಿಡಿಯಲೆಂದೇ ರಚನೆಯಾಗಿದ್ದ ವಿಶೇಷ ಕಾರ್ಯಪಡೆ (ಎಸ್‌ಟಿಎಫ್)ಯು ಆ ಆ್ಯಂಬುಲೆನ್ಸ್ ಮೇಲೆ 338 ಬುಲೆಟ್‌ಗಳ ಸುರಿಮಳೆಗೈದಿತ್ತು. ಅವುಗಳಲ್ಲಿ ಮೂರು ಗುಂಡುಗಳು ಕಾಡುಗಳ್ಳನ ದೇಹ ಹೊಕ್ಕವು. ಅಕ್ಟೋಬರ್ 18, 2004ರ ರಾತ್ರಿ 1.00 ಗಂಟೆಗೆ, ವೀರಪ್ಪನ್ ಕುರಿತ ಫೈಲ್‌ನ್ನು ಕ್ಲೋಸ್ ಮಾಡಲಾಯಿತು. 'ಆಪರೇಶನ್ ಕುಕೂನ್' ಯಶಸ್ವಿಯಾಗಿತ್ತು. ನಿವೃತ್ತ ಪೊಲೀಸ್ ಅಧಿಕಾರಿ ಕೆ. ವಿಜಯ್‌ಕುಮಾರ್ ಆಪರೇಶನ್ ಕುಕೂನ್ ಮುಖ್ಯಸ್ಥರಾಗಿದ್ದರು. ಮುಂದೆ ಇವರೇ ಬರೆದ ವೀರಪ್ಪನ್ ಹತ್ಯೆ ಕುರಿತ ಪುಸ್ತಕದಲ್ಲಿ ಕೊನೆಯ ಪುಟದಲ್ಲಿ "ಕೂಸೆ ಮುನಿಸ್ವಾಮಿ ವೀರಪ್ಪನ್‌ನ ಫೈಲ್‌ನ್ನು ಮುಚ್ಚಲಾಗಿದೆ' ಎಂದು ಸಮಾಧಾನದ ನಿಟ್ಟುಸಿರೆಳೆದಂತೆ ಬರೆದಿದ್ದಾರೆ.

"ಒಂದು ವೇಳೆ ವೀರಪ್ಪನ್ ಆ ರಾತ್ರಿ ಬಾರದೆ ಇದ್ದಲ್ಲಿ, ಏನಾಗಬಹುದಿತ್ತೆಂದು ನನಗೆ ತಿಳಿದಿಲ್ಲ. ಒಂದು ವೇಳೆ ಹಾಗಾಗಿದ್ದಲ್ಲಿ ಅದು ಕೂಡಾ ನಮ್ಮ ಸರಣಿ ವೈಫಲ್ಯಗಳಲ್ಲಿ ಒಂದಾಗಿರುತ್ತಿತ್ತು" ಎಂದು ವಿಜಯ್‌ಕುಮಾರ್ ಹೇಳಿದ್ದಾರೆ. ಸಾಮಾನ್ಯವಾಗಿ ಯಾವತ್ತೂ ಕಟ್ಟೆಚ್ಚರದಿಂದಿರುತ್ತಿದ್ದ ವೀರಪ್ಪನ್ ಅಂದು ಮಾತ್ರ ಎಂದಿನಂತಿರಲಿಲ್ಲ ಎಂದು ಅವರು ವಿಸ್ಮಯಗೊಂಡಿದ್ದರ ಬಗ್ಗೆ ಬರೆದಿದ್ದಾರೆ.



ವಿಜಯ್‌ಕುಮಾರ್

ತಮಿಳುನಾಡು ಎಸ್‌ಟಿಎಫ್‌ನ ವರಿಷ್ಠರಾಗಿದ್ದ ವಿಜಯ್‌ಕುಮಾರ್, ಆಪರೇಷನ್ ಕುಕೂನ್ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದು, ಆಗಿನ ಮುಖ್ಯಮಂತ್ರಿ ಜೆ. ಜಯಲಲಿತಾ 2001ರಲ್ಲಿ ಅವರಿಗೆ ಈ ಹೊಣೆಯನ್ನು ವಹಿಸಿದ್ದರು. ಅವರು ವೀರಪ್ಪನ್ ಬಲಿಗಾಗಿ ಕಾದಿದ್ದರು. ಕಾರಣ, ವೀರಪ್ಪನ್ ಅಪಹರಣ ಪಟ್ಟಿಯಲ್ಲಿ ಜಯಲಲಿತಾರವರ ಹೆಸರೂ ಇತ್ತು! ಈ ಮೊದಲು ವಿಜಯ್‌ಕುಮಾರ್, ರಾಜೀವ್‌ಗಾಂಧಿ ಅವರಿಗಾಗಿನ ವಿಶೇಷ ರಕ್ಷಣಾ ತಂಡದಲ್ಲಿದ್ದರು. ಅಲ್ಲದೇ ಕಾಶ್ಮೀರದಲ್ಲಿ ಗಡಿಭದ್ರತಾ ಪಡೆಯಲ್ಲೂ ಸೇವೆ ಸಲ್ಲಿಸಿದ್ದರು. ಆಪರೇಷನ್ ಕುಕೂನ್ ಯಶಸ್ವಿಯಾದ ನಂತರ ವಿಜಯ್ ಕುಮಾರ್ ಬರೆದಿರುವ ಕೃತಿಯಲ್ಲಿ.... 1990ರಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಪೊಲೀಸರು ರಚಿಸಿದ್ದ ಜಂಟಿ ಕಾರ್ಯಪಡೆ (ಎಸ್‌ಟಿಎಫ್)ಯ ರಚನೆಯಿಂದ ಹಿಡಿದು ವೀರಪ್ಪನ್ ಬೇಟೆಯ ಕುರಿತ ವಿವರಗಳನ್ನು ಅತ್ಯಂತ ಸ್ಪಷ್ಟತೆಯೊಂದಿಗೆ ಓದುಗರ ಮುಂದೆ ಅನಾವರಣಗೊಳಿಸುತ್ತದೆ. ಆ ಕೃತಿಯ ಬಗ್ಗೆ ಏನೇ ವಿವಾದಗಳಿದ್ದರೂ ಮೇಲ್ನೋಟಕ್ಕೆ ಸತ್ಯಾಂಶಗಳೇ ತುಂಬಿಕೊಂಡಿವೆ. ಆದರೆ ನಮ್ಮ ರಾಜ್ಯದ ಡಿಜಿಪಿಯಾಗಿದ್ದ ದಿನಕರನ್ ಬರೆದಿದ್ದ 'ವೀರಪ್ಪನ್ ಪ್ರೈಜ್ ಕ್ಯಾಚ್, ರಾಜ್‌ಕುಮಾರ್' ಕೃತಿ ಮಾತ್ರ ಸಂಪೂರ್ಣ ಭಂಡಾಯದಿಂದ ಕೂಡಿತ್ತು. ಇದರಲ್ಲಿ ನಮ್ಮ ರಾಜಕಾರಣಿಗಳ ಹಾಗೂ ಕೆಲ ಪೊಲೀಸ್ ಅಧಿಕಾರಿಗಳ ಒಳ ಒಪ್ಪಂದಗಳ ಕುರಿತು ಬರೆಯಲಾಗಿತ್ತು. ಹೀಗಾಗಿಯೇ ಈ ವಿವಾದಿತ ಕೃತಿಯನ್ನು ಜನ ಅಷ್ಟಾಗಿ ಪುರಸ್ಕರಿಸಲಿಲ್ಲ. ಆದರೆ ವಿಜಯ್‌ಕುಮಾರ್ ಬರೆದ ಪುಸ್ತಕವನ್ನು ಹತ್ತಾರು ಭಾಷೆಗಳಿಗೆ ಭಾಷಾಂತರ ಮಾಡಲಾಗಿದೆ. ☯



# ಮೌಲ್ವಿ ಸೈಯ್ಯದ್ ಇಬ್ರಾಹಿಂ 'ದೇಶದ್ರೋಹ' ಕಾಯ್ದೆ ಅಡಿ ಜೈಲಿಗೆ!

ದಕ್ಷಿಣ ಕನ್ನಡ

✍ ಮೋಹನ್ ಬೋಳಂಗಡಿ

ಪ್ರಸ್ತುತ ಕಾಲಘಟ್ಟದಲ್ಲಿ ಸಾಮಾಜಿಕ ಜಾಲತಾಣಗಳು ವ್ಯಾಪಕವಾಗಿ ಸಾರ್ವಜನಿಕವಾಗಿ ಜನಾಭಿಪ್ರಾಯವನ್ನು ರೂಪುಗೊಳಿಸುವಲ್ಲಿ ಬಹುಮುಖ್ಯ ಪಾತ್ರವಹಿಸಿದೆ. ಬಹುತೇಕ ಯುವಜನರಲ್ಲಿ ಅಂಡ್ರಾಯ್ಡ್ ಮೊಬೈಲ್ ಸೆಟ್‌ಗಳಿವೆ. ಅವುಗಳಲ್ಲಿ ವಾಟ್ಸಾಪ್, ಫೇಸ್ ಬುಕ್, ಇನ್‌ಸ್ಟಾಗ್ರಾಂನಂತಹ ಸಾಮಾಜಿಕ ಜಾಲತಾಣಗಳ ಸಂಪರ್ಕಗಳಿವೆ. ಈ ಜಾಲತಾಣಗಳಲ್ಲಿ ಅವರವರ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಜನಾಭಿಪ್ರಾಯಗಳನ್ನು ರೂಪುಗೊಳಸಲಾಗುತ್ತಿದೆ. ಸಾಮಾನ್ಯವಾಗಿ ಇದೆಲ್ಲವೂ ವೈಯಕ್ತಿಕ ಅಭಿಪ್ರಾಯಗಳೇ ಆಗಿದ್ದರೂ ಸಹ ಸಮಾಜದ ಮೇಲೆ ಸತ್ಪರಿಣಾಮ ಅಥವಾ ದುಷ್ಪರಿಣಾಮ ಬೀರುವ ಎಲ್ಲಾ ಸಾಧ್ಯತೆಗಳಿವೆ. ಕೇಂದ್ರ ಸರಕಾರ ಜಾರಿಗೊಳಿಸಿರುವ ಮಾಹಿತಿ ಮತ್ತು ತಂತ್ರಜ್ಞಾನ ಕಾಯ್ದೆಯಡಿ ಈ ಸಾಮಾಜಿಕ ಜಾಲತಾಣಗಳು ಬರುತ್ತವೆ. ಆದ್ದರಿಂದ ಸಾಮಾಜಿಕ ಜಾಲತಾಣಗಳಲ್ಲಿ ಯಾವುದೇ ರೀತಿಯ ಅಭಿಪ್ರಾಯಗಳನ್ನು ಬರೆದು ಸಾರ್ವಜನಿಕವಾಗಿ ಪೋಸ್ಟ್ ಮಾಡಿದರೆ ಕ್ರಿಮಿನಲ್ ಅಪರಾಧ ಆಗುತ್ತದೆಯಾದರೂ ಅದು ಜಾಮೀನು ಸಹಿತ ಅಪರಾಧವಾಗಿದ್ದರಿಂದ ಪೊಲೀಸರು ಸೂಕ್ತವಾದ ಕಾನೂನು ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿರಲಿಲ್ಲ, ವಿರೋಧ ಭಾಸದ ಕೆಲವೊಂದು ಪೋಸ್ಟ್‌ಗಳನ್ನು ಈ ಜಾಲತಾಣಗಳಲ್ಲಿ ಸಕ್ರಿಯರಾಗಿದ್ದವರು ಹಂಚಿಕೊಳ್ಳುತ್ತಾರಾದರೂ ಅವರು ನಕಲಿ ಐಡಿಗಳಿಂದ ಪೋಸ್ಟ್ ಮಾಡುತ್ತಿರುವುದರಿಂದ ಅವರನ್ನು ಪತ್ತೆ ಹಚ್ಚಲು ಪೊಲೀಸರಿಗೆ ಸಕಾಲದಲ್ಲಿ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಈ ಜಾಲತಾಣಗಳ ಹಾವಳಿ ವಿಪರೀತ ಎನ್ನುವ ಮಟ್ಟಿಗೆ ಹರಡಿಹೋಗಿದೆ. ಇಂತಹದ್ದೇ ಜಾಲತಾಣದಲ್ಲಿ ಸಕ್ರಿಯರಾಗಿದ್ದಂತಹ ಮುಸ್ಲಿಂ ಧರ್ಮಗುರುವೊಬ್ಬರು ಇದೀಗ ದೇಶದ್ರೋಹದ ಆಪಾದನೆಯ ಮೇಲೆ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಸೇರಿದ್ದಾರೆ.



ಪೊಲೀಸ್ ಆಯುಕ್ತ ಸುಧೀರ್ ಕುಮಾರ್


### ನಡೆದದ್ದು ಏನು?

ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ರಾಮಕುಂಜ ಎಂಬ ಗ್ರಾಮದಲ್ಲಿ ಸೈಯ್ಯದ್ ಇಬ್ರಾಹಿಂ ತಂಙಳ್ ಎಂಬ 55 ವರ್ಷದ ಮುಸ್ಲಿಂ ಧರ್ಮಗುರುವೊಬ್ಬರಿದ್ದಾರೆ. ಅವರು ಆತೂರು ಬದ್ರಿಯಾ ಜುಮ್ಮಾ ಮಸೀದಿಯಲ್ಲಿ ಧರ್ಮಗುರುವಾಗಿ ಹಲವು ವರ್ಷಗಳಿಂದ ದೀನಿ ಸೇವೆಯಲ್ಲಿ ತೊಡಗಿದ್ದರು. ಅವರು ಕೆಲವು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿದ್ದ ಎಸ್‌ಡಿಪಿಐ ಎಂಬ ರಾಜಕೀಯ ಪಕ್ಷವೊಂದರಲ್ಲಿ ಸಂಘಟನೆಯಾದ ಪಿಎಫ್‌ಐನೊಂದಿಗೆ ಗುರುತಿಸಿಕೊಂಡಿದ್ದರು. ತಾನು ದೀನಿ ಸೇವೆ ಮಾಡುತ್ತಿದ್ದಂತಹ ಮಸೀದಿಯ ವ್ಯಾಪ್ತಿಯಲ್ಲಿನ ಯುವಕರನ್ನು ಪಿಎಫ್‌ಐಗೆ ಸೇರುವಂತೆ ಉತ್ತೇಜನ ನೀಡುತ್ತಿದ್ದರು. ಧರ್ಮಗುರುವಿನ ಬೋಧನೆ ಕೇಳಿ ಹಲವು ಮಂದಿ ಯುವಕರು ಪಿಎಫ್‌ಐಗೆ ಸೇರಿದ್ದರು. ಈ ಸಂದರ್ಭದಲ್ಲಿ ಆತೂರು ಬದ್ರಿಯಾ ಜುಮ್ಮಾ ಮಸೀದಿಯ ಜಮಾಅತ್‌ರು ಒಟ್ಟು ಸೇರಿ ಧರ್ಮಗುರು ವಾಗಿದ್ದ ಸೈಯ್ಯದ್ ಇಬ್ರಾಹಿಂ ತಂಙಳ್ ಅವರು ಜಮಾಅತ್‌ನ ಯುವಕರಲ್ಲಿ ವಿಷಬೀಜವನ್ನು ಬಿತ್ತುತ್ತಿದ್ದಾರೆ ಎಂದು ಆಪಾದಿಸಿ ಅವರನ್ನು ಮಸೀದಿಯಿಂದ ವಜಾಗೊಳಿಸಲಾಗಿತ್ತು. ಅವರು ಧರ್ಮಗುರುಗಳಾಗಿದ್ದ ಸಂದರ್ಭದಲ್ಲಿ ಸಲಾಮತ್ ಸಲಾಂ ಎಂಬ ವಾಟ್ಸಾಪ್ ಗ್ರೂಪೊಂದನ್ನು ಸೃಷ್ಟಿಸಿದ್ದರು. ಆ ಗ್ರೂಪ್‌ನಲ್ಲಿ ಸುಮಾರು 1000ಕ್ಕೂ ಹೆಚ್ಚು ಮಂದಿ ಸಕ್ರಿಯರಾಗಿದ್ದರು. ಅವರೆಲ್ಲರೂ ಇಬ್ರಾಹಿಂ ತಂಙಳ್ ಅವರ ಬೋಧನೆಗಳನ್ನು ಆಲಿಸುತ್ತಿದ್ದರು ಮತ್ತು ಇತರರಿಗೆ ಹಂಚುತ್ತಿದ್ದರು. ಅವರು ಮಸೀದಿಯಿಂದ ವಜಾಗೊಂಡ ಬಳಿಕವೂ ಆ ಗ್ರೂಪ್ ಸಕ್ರಿಯವಾಗಿತ್ತು ಮತ್ತು ಅವರ ಬೋಧನೆಗಳು ಮತ್ತು ಅಭಿಪ್ರಾಯಗಳು ಹಂಚಲ್ಪಡುತ್ತಿದ್ದವು. ಆ ಗ್ರೂಪಿನಲ್ಲಿದ್ದವರೆಲ್ಲರೂ ಪಿಎಫ್‌ಐ ಸಂಘಟನೆಯ ಬಗ್ಗೆ ಮೃದು ಧೋರಣೆ ಹೊಂದಿದ್ದವರಾಗಿದ್ದರು.

2022ರಲ್ಲಿ ಕೇಂದ್ರ ಸರಕಾರ ಪಿಎಫ್‌ಐ ಸಂಘಟನೆಯನ್ನು ದೇಶದ್ರೋಹಿ ಸಂಘಟನೆ ಎಂದು ಗುರುತಿಸಿ ಬ್ಯಾನ್ ಮಾಡಿತ್ತು. ಆ ಸಂಘಟನೆಯಲ್ಲಿ ಸಕ್ರಿಯರಾಗಿದ್ದವರು ಅದರ ಸಂಪರ್ಕವನ್ನು ಕಡಿದುಕೊಂಡಿದ್ದರು. ಆದರೆ ಇದರ ಅರಿವಿಲ್ಲದ ಸೈಯ್ಯದ್ ಇಬ್ರಾಹಿಂ ತಂಙಳ್ ಅವರು ತನ್ನ ಸಲಾಮತ್ ಸಲಾಂ ಎಂಬ ವಾಟ್ಸಾಪ್ ಗ್ರೂಪ್ ಅನ್ನು ಸಕ್ರಿಯವಾಗಿ ನಿರ್ವಹಿಸುತ್ತಿದ್ದರು. ಇದು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿಯವರ ಗಮನಕ್ಕೆ ಬಂದಿತ್ತು. ಅವರ ನೇರ ನಿರ್ದೇಶನದಡಿಯಲ್ಲಿ ಕಾರ್ಯ ನಿರ್ವಹಿಸುವ ಸೋಷಿಯಲ್ ಮೀಡಿಯಾ ಮೊನಿಟರಿಂಗ್ ಸೆಲ್‌ನ ಅಧಿಕಾರಿಗಳು ಈ ವಾಟ್ಸಾಪ್ ಗ್ರೂಪ್‌ನ್ನು ಕಾಲ ಕಾಲಕ್ಕೆ ಪರಿಶೀಲನೆ ಮಾಡುತ್ತಿದ್ದರು. ಅದರಲ್ಲಿ ಪಿಎಫ್‌ಐ ಸಂಘಟನೆಯ ವಿಚಾರಧಾರೆಗಳು ಮತ್ತು ಸಂಘಟನೆಯ ವಿಸ್ತರಣೆಯ ಬಗ್ಗೆ ಪೋಸ್ಟ್‌ಗಳು ಹರಿದಾಡುತ್ತಿದ್ದವು. ಈ ವಿಚಾರವನ್ನು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿಯವರು ಸೆನ್ ಪೊಲೀಸ್ ಉಪಾಧೀಕ್ಷಕ ರವೀಶ್ ನಾಯಕ್ ಅವರಿಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಆದೇಶ ನೀಡಿದ್ದರು. ಪೊಲೀಸ್ ಆಯುಕ್ತರ ಸೂಚನೆಯನ್ನು ಗಂಭೀರವಾಗಿ ಪರಿಗಣಿಸಿದ ಸೆನ್ ಪೊಲೀಸ್ ಉಪಾಧೀಕ್ಷಕ ರವೀಶ್ ನಾಯಕ್ ಅವರು ಸಲಾಮತ್ ಸಲಾಂ ವಾಟ್ಸಾಪ್ ಗ್ರೂಪ್‌ನ ಅಡ್ಮಿನ್ ಸೈಯ್ಯದ್ ಇಬ್ರಾಹಿಂ ತಂಙಳ್ ಅವರನ್ನು ಗುರುತಿಸಿ ವಿಚಾರಣೆಗೆ ಬರುವಂತೆ ಸೂಚನೆ ನೀಡಿದ್ದರು. ಅದರಂತೆ ಅಕ್ಟೋಬರ್ 9ರಂದು ಮಧ್ಯಾಹ್ನದ ವೇಳೆಗೆ ತನ್ನಿಬ್ಬರು ಸ್ನೇಹಿತರೊಂದಿಗೆ ಸೈಯ್ಯದ್ ಇಬ್ರಾಹಿಂ ತಂಙಳ್ ಅವರು ಉರ್ವಸ್ಟೋರಿನ ಮೂಡಾ ಕಟ್ಟಡದ 2ನೇ ಮಹಡಿಯಲ್ಲಿರುವ ಸೆನ್ ಪೊಲೀಸ್ ಠಾಣೆಗೆ ಬಂದಿದ್ದರು. ಸೆನ್ ಪೊಲೀಸ್ ಠಾಣೆಯ ಸಿಬ್ಬಂದಿಗಳು ಅವರೊಂದಿಗೆ ಆತ್ಮೀಯವಾಗಿ ಮಾತನಾಡಿ ಕೆಲವೊಂದು ಮಾಹಿತಿಗಳನ್ನು ಪಡೆದುಕೊಂಡರು. ಈ ಪ್ರಕ್ರಿಯೆ ನಡೆಯುತ್ತಿದ್ದಂತೆಯೇ ಸೆನ್ ಪೊಲೀಸ್ ಉಪಾಧೀಕ್ಷಕ ರವೀಶ್ ನಾಯಕ್ ಅವರು ಬಂದರು ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಅವರಿಗೆ ಸೂಚನೆ ನೀಡಿ ಸೈಯ್ಯದ್ ಇಬ್ರಾಹಿಂ ತಂಙಳ್ ವಿರುದ್ಧ ಕಾನೂನು ಬಾಹಿರ ಚಟುವಟಿಕೆಗಳ ನಿಯಂತ್ರಣ ಕಾಯ್ದೆ 1968ರ ಅಡಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಕೇಸು ದಾಖಲಿಸಿಕೊಳ್ಳುವಂತೆ ತಿಳಿಸಿದರು. ಅದರಂತೆ ಬಂದರು ಠಾಣೆಯಲ್ಲಿ ಕೇಸು ದಾಖಲಾಯಿತು. ಈ ಸಂದರ್ಭದಲ್ಲಿ ಸೈಯ್ಯದ್ ಇಬ್ರಾಹಿಂ ತಂಙಳ್ ಅವರು ಸೆನ್ ಪೊಲೀಸ್ ಠಾಣೆ ಇರುವ ಕಟ್ಟಡದ ಕೆಳಭಾಗದಲ್ಲೇ ಇದ್ದರು. ಅವರನ್ನು ಅಲ್ಲಿಂದಲೇ ಬಂದರು ಪೊಲೀಸರು ವಶಕ್ಕೆ ತೆಗೆದುಕೊಂಡರು. ತದನಂತರ ಸ್ಥಳೀಯ ನ್ಯಾಯಾಲಯಕ್ಕೆ ಹಾಜರು ಪಡಿಸಿ ಟ್ರಾನ್ಸಿಟ್ ವಾರಂಟ್ ಪಡೆದು ಬೆಂಗಳೂರಿನ 49ನೇ ಹೆಚ್ಚುವರಿ ಸಿವಿಲ್ ಮತ್ತು ಸತ್ರ ನ್ಯಾಯಾಲಯ (ಇ.ಇ.ಎ.50) ಮತ್ತು ಎನ್‌ಐಎ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯವು ನ್ಯಾಯಾಂಗ ಬಂಧನ ವಿಧಿಸಿದೆ. ಅವರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿಗೆ ರವಾನಿಸಲಾಗಿದೆ. ☯



ಸೈಯ್ಯದ್ ಇಬ್ರಾಹಿಂ ತಂಙಳ್



ಎಸಿಪಿ ರವೀಶ್ ನಾಯಕ್



# ಮೈಸೂರಿನಲ್ಲಿ ರೌಡಿಶೀಟರ್ ಗಿಲ್ಕಿ ವೆಂಕಟೇಶ್ ಮರ್ಡರ್!

5 ☞

ಹೀಗಾಗಿ ಅಲ್ಲಿ ಡೀಲ್ ಮಾಡುವುದು, ಹಪ್ತಾ ವಸೂಲಿ ಹೀಗೆ ಎಲ್ಲವೂ ನಡೆಯುತ್ತಿರುತ್ತದೆ. ಇಲ್ಲಿ ತಮ್ಮ ಪಟಾಲಂ ಇಟ್ಟುಕೊಂಡು ಸಾಮ್ರಾಜ್ಯ ಕಟ್ಟಿಕೊಂಡಿದ್ದರು. ಕಾರ್ತಿಕ್ ಇದರಲ್ಲಿ ಮುಂಡಗೆ ಆಗಿದ್ದ ಆದರೆ ಆತ ಮರ್ಡರ್ ಆಗಿ ಹೋಗಿದ್ದ ಅವನು ಹೋದ ಬಳಿಕ ಆತನ ಹುಡುಗರು ಸೇರಿದಂತೆ ಎಲ್ಲರನ್ನು ಜತೆಗಿರಿಸಿಕೊಂಡು ತಾನು ಮೆರೆಯಬೇಕೆಂಬ ಆಲೋಚನೆ ಮಾಡಿದ್ದನು. ಇದಕ್ಕಾಗಿ ತಯಾರಿ ನಡೆಸಿದ್ದನು. ಎರಡು ಹೆಂಡಿರ ಗಂಡನಾಗಿದ್ದ ವೆಂಕಟೇಶ್ ರೌಡಿ ಶೀಟರ್ ಆಗಿದ್ದಲ್ಲದೆ, ತನಗೆ ಡಾನ್ ಪಟ್ಟ ಸಿಕ್ಕರೆ ಇನ್ನಷ್ಟು ದಿವಿನಾಗಿ ಬೆಳೆಯ ಬಹುದೆಂದು ಕನಸು ಕಂಡಿದ್ದನು. ಆದರೆ ಗಿಲ್ಕಿ ವೆಂಕಟೇಶ್ ಕನಸಿಗೆ ಅಡ್ಡಿಯಾಗಿದ್ದವನು ಗಾಯತ್ರಿಪುರಂನ ಹಾಲಪ್ಪ.



ಕೃತ್ಯ ನಡೆದ ಸ್ಥಳದಲ್ಲಿ ಪೊಲೀಸ್ ಅಧಿಕಾರಿಗಳು

ವೆಂಕಟೇಶ್ ಡಾನ್ ಆಗಿ ಬೆಳೆಯುವುದು ಹಾಲಪ್ಪನ ಗ್ಯಾಂಗ್‌ಗೆ ಸುತರಾಂ ಇಷ್ಟವಿರಲಿಲ್ಲ, ಕಾರ್ತಿಕ್ ಇರುವ ತನಕ ತೆಪ್ಪಗಿದ್ದ ವೆಂಕಟೇಶ್ ಇದೀಗ ಬಾಲ ಬಿಚ್ಚಿದ್ದಾನೆ. ಆತ ಬೆಳೆದರೆ ಇಲ್ಲಿ ನಮಗೆ ಉಳಿಗಾಲವಿಲ್ಲ ಎಂಬುದು ಹಾಲಪ್ಪನ ಆಲೋಚನೆಯಾಗಿತ್ತು. ಹೀಗಾಗಿ ಹಾಲಪ್ಪ ಮತ್ತು ವೆಂಕಟೇಶ್ ನಡುವೆ ಕಿರಿಕಿರಿಗಳು ಆರಂಭವಾಗಿತ್ತು. ವೆಂಕಟೇಶ್‌ನನ್ನು ಫೀಲ್ಡ್‌ನಲ್ಲಿ ಮೆರೆಯಲು ಬಿಡಬಾರದು ಎನ್ನುವುದು ಹಾಲಪ್ಪ ಅಂಡ್ ಗ್ಯಾಂಗ್‌ನದ್ದಾಗಿತ್ತು. ಹೀಗಿರುವಾಗಲೇ ಹಾಲಪ್ಪ ತನ್ನ ಡಾನ್ ಪಟ್ಟಕ್ಕೆ ಅಡ್ಡಿಯಾಗಿದ್ದಾನೆ ಎಂದು ಗಿಲಿ ಗಿಲಿ ವೆಂಕಟೇಶ ಹಾಲಪ್ಪನ ಕೊಲೆಗೆ ಸ್ಕೆಚ್ ಹಾಕಿದ್ದರು. ಅದರಂತೆ ವೆಂಕಟೇಶ್ ಹಾಗೂ ಅವನ ಸಹಚರರು ಹಾಲಪ್ಪನನ್ನು ಎತ್ತಲು ಪ್ರಯತ್ನಿಸಿದ್ದರು.

ಹಾಲಪ್ಪನನ್ನು ಹುಡುಕಾಡುತ್ತಾ ಹೊರಟ ಗಿಲ್ಕಿ ವೆಂಕಟೇಶ್ ಗ್ಯಾಂಗ್ ಹಾಲಪ್ಪನ ಗೆಳೆಯ ಮಂಜುನಾಥನ ಮನೆಗೆ ತೆರಳಿ ಹಾಲಪ್ಪ ಎಲ್ಲಿದ್ದಾನೆ ತಿಳಿಸು ಅವನ ಮುಗಿಸಬೇಕೆಂದು ಕೂಗಾಡಿದ್ದರು. ಇದೆಲ್ಲದರ ಬೆಳವಣಿಗೆಯಿಂದ ಭಯಗೊಂಡಿದ್ದ ಹಾಲಪ್ಪ ತಾನು ಬದುಕಿ ಉಳಿಯಬೇಕಾದರೆ ಗಿಲ್ಕಿ ವೆಂಕಟೇಶ್‌ನನ್ನು ಮುಗಿಸಬೇಕು ಎಂಬ ತೀರ್ಮಾನಕ್ಕೆ ಬಂದು ಬಿಟ್ಟಿದ್ದನು. ಜತೆಗೆ ವೆಂಕಟೇಶ್‌ನನ್ನು ಮುಗಿಸಿದರೆ ನೆಮ್ಮದಿಯಾಗಿ ಇರಬಹುದೆಂಬ ಆಲೋಚನೆ ಮಾಡಿದ್ದನು. ವೆಂಕಟೇಶ್ ತನ್ನ ಮೇಲೆ ಅಟ್ಯಾಕ್ ಮಾಡುವ ಮುನ್ನವೇ ಆತನ ಮೇಲೆ ಅಟ್ಯಾಕ್ ಮಾಡಿ ಎತ್ತಿ ಬಿಡಬೇಕೆಂಬ ನಿರ್ಧಾರಕ್ಕೆ ಬಂದಿದ್ದಲ್ಲದೆ, ತನ್ನ ಸಹಚರರಾದ ಮೈಸೂರಿನ ನಾಯ್ಡುನಗರ ನಿವಾಸಿ ಕೀರ್ತಿ ಕುಮಾರ್ (28), ವೀರನಗೆರೆಯ ನಂದನ್ (27), ಸಿದ್ದಾರ್ಥ ಬಡಾವಣೆಯ ನಿರೂಪ್ (28), ನಜರ್‌ಬಾದ್‌ನ ಭರತ್ (22) ಹಾಗೂ ಮಂಡ್ಯ ಜಿಲ್ಲೆಯ ಮೈಲಾಪುರ ಗ್ರಾಮದ ಧ್ರುವಕುಮಾರ್ (24) ಅವರನ್ನು ಸೇರಿಸಿಕೊಂಡು ಸ್ಕೆಚ್ ಹಾಕಿದ್ದನು.

ಅವತ್ತು ಅಕ್ಟೋಬರ್ 7ನೇ ತಾರೀಕು ಮಂಗಳವಾರ ಮೈಸೂರಿನ ಜನ ದಸರಾ ಗುಂಗಿನಿಂದ ಹೊರ ಬಂದು ತಮ್ಮ ತಮ್ಮ ಕೆಲಸದಲ್ಲಿ ಲೀನರಾಗಿದ್ದರು. ಹೊರಗಿನಿಂದ ಬಂದ ಪ್ರವಾಸಿಗರು ಅಡ್ಡಾಡಿಕೊಂಡಿದ್ದರು. ಅದು ಅಂದಾಜು 11.30ರ ಸಮಯ ಗಿಲ್ಕಿ ವೆಂಕಟೇಶ್ ನಗರದಲ್ಲಿ ತನ್ನ ಕಾರು ಮಾರುತಿ ಸ್ವಿಫ್ಟ್ (ಕೆಎ-05 ಎನ್‌ಬಿ-9574) ನಲ್ಲಿ ಅಡ್ಡಾಡುತ್ತಾ ಬೆಂಗಳೂರು ನೀಲಗಿರಿ ರಸ್ತೆಯಿಂದ ದಸರಾ ವಸ್ತುಪ್ರದರ್ಶನದ ಮುಂದಿನ ರಸ್ತೆ ಮೂಲಕ ಇಟ್ಟಿಗೆಗೂಡು ಕಡೆಗೆ ತೆರಳುತ್ತಿದ್ದಾಗ ಜ್ವಾಲಾಮುಖಿ ಹೋಟೆಲ್ ಜಂಕ್ಷನ್ ಬಳಿಯ ಅರಳಿ ಮರದ ಹತ್ತಿರ ತಲುಪುತ್ತಿದ್ದಾಗ ಆತನನ್ನೇ ಹಿಂಬಾಲಿಸಿಕೊಂಡು ಆಟೋ ಮತ್ತು ಬೈಕ್‌ನಲ್ಲಿ ಬಂದ ಹಾಲಪ್ಪ ಅಂಡ್ ಗ್ಯಾಂಗ್ ದಿಢೀರ್ ಆಗಿ ಕಾರನ್ನು ಅಡ್ಡ ಹಾಕಿದೆ. ವೆಂಕಟೇಶ್‌ಗೆ ಏನಾಗುತ್ತಿದೆ ಎಂಬುದು ಗೊತ್ತಾಗುವ ಹೊತ್ತಿಗೆ ಆತನ ಕಣ್ಣಿಗೆ ಕಾರದ ಪುಡಿ ಎರಚಿಯಾಗಿತ್ತು.

ಅಷ್ಟರಲ್ಲೇ ಅವನ ಮೇಲೆ ಅಟ್ಯಾಕ್ ಮಾಡಿದ ಗ್ಯಾಂಗ್ ಆತನನ್ನು ಕಾರಿನಿಂದ ಎಳೆದು ಲಾಂಗ್‌ನಿಂದ ಯದ್ವಾ ತದ್ವಾ ಕೊಚ್ಚಿ ಹಾಕಿತ್ತು. ಅಷ್ಟರಲ್ಲೇ ಅದನ್ನು ನೋಡಿದ ಕೆಲವರು ವೀಡಿಯೋ ಮಾಡುತ್ತಿದ್ದರೆ ಅವರ ಕಡೆಗೆ ಲಾಂಗ್ ತೋರಿಸಿದ ಗ್ಯಾಂಗ್ ಬೆದರಿಸಿದ್ದರು. ಕೆಲವೇ ಕೆಲವು ನಿಮಿಷದಲ್ಲಿ ಆತನನ್ನು ಬರ್ಬರವಾಗಿ ಕೊಚ್ಚಿಹಾಕಿ ಹೊರಟು ಹೋಗಿಯಾಗಿತ್ತು. ಸಿನಿಮಾದಲ್ಲಷ್ಟೆ ಇಂತಹ ಭೀಬತ್ಸ ದೃಶ್ಯಗಳನ್ನು ನೋಡಿದ್ದ ಜನ ಇದೀಗ ತಮ್ಮ ಕಣ್ಣೆದುರೇ ರೌಡಿಗಳ ಅಟ್ಟಹಾಸವನ್ನು ನೋಡಿ ಬೆಚ್ಚಿಬಿದ್ದಿದ್ದರು. ಅಲ್ಲದೆ ಆತಂಕದ ವಾತಾವರಣವೂ ಅಲ್ಲಿ ನಿರ್ಮಾಣವಾಗಿತ್ತು.





ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ನಗರ ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್, ಡಿಸಿಪಿಗಳಾದ ಆರ್.ಎನ್. ಬಿಂದುಮಣಿ, ಕೆ.ಎಸ್. ಸುಂದರರಾಜ್, ದೇವರಾಜ ಉಪ ವಿಭಾಗದ ಎಸಿಪಿ ಕೆ. ರಾಜೇಂದ್ರ, ನಜರ್‌ಬಾದ್ ಠಾಣೆ ಇನ್ಸ್‌ಪೆಕ್ಟರ್ ಮಹದೇವಸ್ವಾಮಿ, ದೇವರಾಜಠಾಣೆ ಇನ್ಸ್‌ಪೆಕ್ಟರ್ ರಘು, ಸಿಸಿಬಿ ಇನ್ಸ್‌ಪೆಕ್ಟರ್ ಲೇಪಾಕ್ಷಿ, ಶ್ವಾನದಳ ಮತ್ತು ನಗರ ಬೆರಳಚ್ಚು ಮುದ್ರೆ ವಿಭಾಗದ ಸಿಬ್ಬಂದಿ ಆಗಮಿಸಿ ಪರಿಶೀಲನೆ ನಡೆಸಿದರು. ಇದಾದ ನಂತರ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಹಂತಕರ ಬೇಟೆ ಆರಂಭಿಸಿದ್ದರು.





ಅತ್ತ ಗಿಲ್ಕಿ ವೆಂಕಟೇಶ್ ಶವವನ್ನು ಕೆ.ಆರ್. ಆಸ್ಪತ್ರೆಯ ಶವಾಗಾರಕ್ಕೆ ಕೊಂಡೊಯ್ದು ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ವಾರಸುದಾರರಿಗೆ ನೀಡಲಾಯಿತು. ಇತ್ತ ಹಂತಕ ಹಾಲಪ್ಪ ಅಂಡ್ ಗ್ಯಾಂಗ್‌ನ ಬಂಧನಕ್ಕಾಗಿ ಪೊಲೀಸ್ ಕಮೀಷನರ್ ಸೀಮಾ ಲಾಟ್ಕರ್ ಅವರು ನಾಲ್ಕು ತನಿಖಾ ತಂಡವನ್ನು ರಚಿಸಿದ್ದರು. ಈ ತಂಡದಲ್ಲಿದ್ದ ಪೊಲೀಸ್ ಅಧಿಕಾರಿಗಳು ಕೊಲೆ ನಡೆದ ಸ್ಥಳದಲ್ಲಿ ಸಾರ್ವಜನಿಕರು ತೆಗೆದಿದ್ದ ಫೋಟೋಗಳು ಮತ್ತು ಸುತ್ತಲಿನ ಸಿಸಿ ಕ್ಯಾಮೆರಾ ಫುಟೇಜ್‌ಗಳ ಸುಳಿವಿನ ಆಧಾರದ ಮೇಲೆ ಹಂತಕರ ಬೆನ್ನತ್ತಿ ಹೋಗಿತ್ತು. ಕೊಲೆ ನಡೆದ 24 ಗಂಟೆಯೊಳಗೆ ಅಂದರೆ ಅಕ್ಟೋಬರ್ 8 ಬುಧವಾರ ಬೆಳಗ್ಗೆ ನಗರದ ಹೊರವಲಯದಲ್ಲಿನ ಮನೆಯೊಂದರಲ್ಲಿ ಹಂತಕರು ಅಡಗಿ ಕುಳಿತಿರುವ ಬಗ್ಗೆ ಮಾಹಿತಿ ಪೊಲೀಸ್ ಅಧಿಕಾರಿಗಳಿಗೆ ಗೊತ್ತಾಗಿತ್ತು. ಹೀಗಾಗಿ ಆ ಮನೆಯನ್ನು ಸುತ್ತುವರೆದ ಪೊಲೀಸರು ಹಂತಕ ಹಾಲಪ್ಪ ಅಂಡ್ ಗ್ಯಾಂಗ್‌ನ್ನು ಬಂಧಿಸುವಲ್ಲಿ ಯಶಸ್ವಿಯಾಗಿತ್ತು. ಅಲ್ಲದೆ ಅವರ ಕೃತ್ಯಕ್ಕೆ ಬಳಸಿದ್ದ ಮಚ್ಚು, ಲಾಂಗ್, ಆಟೋ, ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಯಿತು.

ಹಂತಕರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ ಮೇರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ರೌಡಿಗಳ ಅಟ್ಟಹಾಸ ಇಲ್ಲಿಗೆ ನಿಲ್ಲುತ್ತಾ? ಮತ್ತೆ ರಿವೆಂಜಾ? ಅದು ಗೊತ್ತಿಲ್ಲ, ಪೊಲೀಸರು ಈಗಿನಿಂದಲೇ ರೌಡಿಶೀಟರ್‌ಗಳನ್ನು ಹುಡುಕಿ ಗ್ಯಾಂಗ್ ಕಟ್ಟಿಕೊಂಡು ಓಡಾಡುವವರನ್ನು ಹುಡುಕಿ ಹೆಡೆಮುರಿ ಕಟ್ಟಬೇಕಾಗಿದೆ. ಇನ್ನು ಮುಂದೆ ಬಾಲ ಬಿಚ್ಚದಂತೆ ನೋಡಿಕೊಳ್ಳುವ ಜವಾಬ್ದಾರಿ ಮೈಸೂರು ಪೊಲೀಸರ ಮೇಲಿದೆ...

# ಬಾಲಕಿಯ ರೇಪ್ & ಮರ್ಡರ್!

7 ☞

ಹಿಡಿದು ತರಡಿನ ಮೇಲೆ ಒದ್ದು ಲಾಕ್ ಮಾಡಿದ್ದಾರೆ. ಬಳಿಕ ಆರೋಪಿಯನ್ನ ಮೈಸೂರಿನತ್ತ ಕರೆತರುತ್ತಿದ್ದಾಗ ಆತನ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಿದ ಪೊಲೀಸರಿಗೆ ಆತ ಮೈಸೂರಿನ ಬಿಎಂಶ್ರೀ ನಗರದ ನಿವಾಸಿ ಅಂತ ಹೇಳಿದ್ದಾನೆ. ಅಲ್ಲೇ ತನ್ನ ಮನೆ ಇರುವುದಾಗಿ ತಿಳಿಸಿದಾಗ, ಆತನ ಆಧಾರ್ ಕಾರ್ಡ್, ವೋಟರ್ ಐಡಿ ಪಡೆಯುವ ಉದ್ದೇಶದಿಂದ ಪೊಲೀಸರು ಬಿಎಂಶ್ರೀ ನಗರದತ್ತ ಕರೆತಂದಿದ್ದಾರೆ.

ರಿಂಗ್ ರೋಡ್‌ನಲ್ಲಿರೋ ಗೂಡ್‌ಶೆಡ್ ಬಳಿ ಉಚ್ಚೆ ಉಯ್ಯಬೇಕು ಸರ್... ಅಂದಿದ್ದಾನೆ. ಪೊಲೀಸರು ಅವನ ಹಿಂದೆಯೇ ಇದ್ದು ಮೂತ್ರವಿಸರ್ಜನೆಗೆ ಅವಕಾಶ ಕೊಟ್ಟಿದ್ದಾರೆ. ಆಸಾಮಿ ಹತ್ತಿರದಲ್ಲೇ ಬಿದ್ದಿದ್ದ ಬಿಯರ್ ಬಾಟಲ್ ಎತ್ತಿಕೊಂಡು ಪೊಲೀಸರ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದಾನೆ. ಸಿಬ್ಬಂದಿಗಳಾದ ಪ್ರಕಾಶ್ ಹಾಗೂ ವೆಂಕಟೇಶ್ ಅವನನ್ನು ಹಿಡಿಯಲು ಪ್ರಯತ್ನಿಸಿದಾಗ ವೆಂಕಟೇಶ್ ಅವರಿಗೆ ಬಾಟಲ್‌ನಿಂದ ಇರಿದಿದ್ದಾನೆ.



ಬಾಲಕಿಯ ತಂದೆ, ತಾಯಿ

ಆ ಸಮಯದಲ್ಲಿ ಸಬ್ ಇನ್ಸ್‌ಪೆಕ್ಟರ್ ಜೈಕೀರ್ತಿ ಸರ್ವೀಸ್ ರಿವಾಲ್ವಾರ್ ಎತ್ತಿಕೊಂಡು ಓಡಬೇಡ.... ಎಂದು ಎಚ್ಚರಿಕೆ ನೀಡಿದ್ದಾರೆ. ಒಂದು ಸುತ್ತು ಗಾಳಿಯಲ್ಲಿ ಗುಂಡು ಹಾರಿಸಿ ಶರಣಾಗುವಂತೆ ಸೂಚನೆ ನೀಡಿದ್ದರೂ ಬಾಟಲ್ ಹಿಡಿದು ಜೈಕೀರ್ತಿ ಅವರ ಮೇಲೂ ಹಲ್ಲೆಗೆ ಮುಂದಾಗಿದ್ದಾನೆ. ಕಾರ್ತಿಕ್ ನ ವರ್ತನೆ ನಿಯಂತ್ರಿಸಲು ಸಾಧ್ಯವಾಗದ್ದರಿಂದ ಅವನ ಕಾಲಿಗೆ ಗುಂಡು ಹಾರಿಸಿದ್ದಾರೆ. ನಂತರ ಮುಕುಳಿ ಮುದುರಿಕೊಂಡು ಬಿದ್ದಿದ್ದ ಕಾರ್ತಿಕ್ ನನ್ನು ಎತ್ತಿ ಪೊಲೀಸ್ ಜೀಪ್‌ಗಿಟ್ಕೊಂಡು, ಗಾಯಗೊಂಡ ಸಿಬ್ಬಂದಿ ವೆಂಕಟೇಶ್ ರನ್ನ ಕೆ.ಆರ್. ಆಸ್ಪತ್ರೆಗೆ ಕರೆತಂದು ದಾಖಲಿಸಲಾಗಿದೆ.

**ಹಳೇ ಕಾಮುಕ!**

ಆರೋಪಿ ಕಾರ್ತಿಕ್ ಹಿನ್ನಲೆ ಕೆದಕಿದ ಪೊಲೀಸರಿಗೆ, ಆತ ಈ ಹಿಂದೆ ಕೊಳ್ಳೆಗಾಲದಲ್ಲಿ ಮಹಿಳೆಯೊಬ್ಬಳ ಮೇಲೆ ಅತ್ಯಾಚಾರವೆಸಗುವ ಪ್ರಯತ್ನ ಮಾಡಿ ಜೈಲಿಗೆ ಹೋಗಿದ್ದು ಎರಡು ವರ್ಷ ಶಿಕ್ಷೆ ಅನುಭವಿಸಿದ್ದ ಹಳೇ ಅಪರಾಧಿ ಎಂದೂ ತಿಳಿದು ಬಂದಿದೆ. ಇಂಥ ಕಾಮುಕನಿಗೆ ಪಿಎಸ್‌ಐ ಜೈಕೀರ್ತಿ ಗುಂಡು ಹೊಡೆಯದೆ ಬಿಟ್ಟಿದ್ದರೆ ಇವನಿಂದ ಇನ್ನೆಷ್ಟು ಅನಾಹುತ ನಡೆಯುತ್ತಿತ್ತೋ! ಸಧ್ಯ, ಈ ವಿಕೃತಕಾಮಿ ಕಾರ್ತಿಕ್ ಬಂದಿಯಾಗಿದ್ದಾನೆ. ಈತನನ್ನು ಸೆರೆ ಹಿಡಿದ ಮೈಸೂರು ಪೊಲೀಸರ ಕಾರ್ಯಕ್ಷಮತೆ ಬಗ್ಗೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಪಿಎಸ್‌ಐ ಜೈಕೀರ್ತಿ ಈಗ ಸೂಪರ್ ಕಾಪ್ ಎಂಬ ಕೀರ್ತಿಗೆ ಭಾಜನರಾಗಿದ್ದಾರೆ.





**ಶಿವಮೊಗ್ಗ ಮೂಲದ ಯುವನಟಿಗೆ ತನ್ನ 'ಪ್ಯಾನ್ ಇಂಡಿಯಾ' ಸಿನಿಮಾದಲ್ಲಿ ನಾಯಕಿ ಪಾತ್ರ ನೀಡಿ, ಹಿಂದಿ ವರ್ಷನ್ ಪ್ರಚಾರಕ್ಕೆಂದು ಮುಂಬೈಗೆ ಕರೆದೊಯ್ದು, ಅಲ್ಲಿ ಆಕೆಗೆ ಗೊತ್ತಿಲ್ಲದಂತೆ ಹೆಂಡ ಕುಡಿಸಿ ಆಕೆಯ ಖಾಸಗಿ ಅಂಗಗಳೊಂದಿಗೆ ಆಟವಾಡಿ ಅದನ್ನು ವಿಡಿಯೋ ಮಾಡಿಕೊಂಡು, ಸೆಕ್ಸ್ ಮಾಡಲು ಸಹಕರಿಸು, ಇಲ್ಲದಿದ್ದರೆ... ಎಂದು ಬ್ಲಾಕ್‌ಮೇಲ್ ಮಾಡುತ್ತಿರುವ ಆರೋಪದಲ್ಲಿ ನಟ, ನಿರ್ದೇಶಕ ನಿರ್ಮಾಪಕ ಹೇಮಂತ್ ಕುಮಾರ್‌ನನ್ನು ರಾಜಾಜಿನಗರ ಪೊಲೀಸರು ಬಂಧಿಸಿದ್ದಾರೆ!**

# 'ರಿಚ್ಚಿ' ಹೀರೋ ಪಚ್ಚಿಗೆ ಹೀರೋಯಿನ್ ಲಚ್ಚಿ ಡಿಚ್ಚಿ!



**ಚಿ**ತ್ರರಂಗದಲ್ಲಿ ಲೈಂಗಿಕ ಹಗರಣಗಳು, ಲೈಂಗಿಕ ಕಿರುಕುಳ ಪ್ರಕರಣಗಳು ಸರ್ವೇಸಾಮಾನ್ಯ ಎನ್ನುವಂತಾಗಿ ಬಿಟ್ಟಿದೆ! ಇದಕ್ಕೆ ಇದೊಂದು ಕೇಸ್ ಹೊಸ ಸೇರ್ಪಡೆ ಯಷ್ಟೇ. ಕನ್ನಡ ಚಿತ್ರರಂಗದಲ್ಲಿ ಏನಾದರೂ ಸಾಧಿಸ ಬೇಕು ಅಂತ ಹೊರಟು, ತಾನೇ ನಿರ್ಮಾಪಕ, ನಿರ್ದೇಶಕ ಹಾಗೂ ನಾಯಕನಟನಾಗಿ 'ರಿಚ್ಚಿ' ಅನ್ನೋ ಸಿನಿಮಾ ಮಾಡುತ್ತಿದ್ದ ಹೇಮಂತ್‌ಕುಮಾರ್ (ಪಚ್ಚಿ) ಮೇಲೆ ಯುವನಟಿಯೊಬ್ಬಳು ಲೈಂಗಿಕ ಕಿರುಕುಳ ಆರೋಪ ಹೊರಿ ಸಿದ್ದು, ದೂರಿನ ಬೆನ್ನಲ್ಲೇ ಆ ನಿರ್ದೇಶಕನನ್ನು ರಾಜಾಜಿ ನಗರ ಪೊಲೀಸರು ಬಂಧಿಸಿದ್ದಾರೆ.

ದೂರಿನಲ್ಲಿರೋ ಪ್ರಕಾರ, 2022ರಲ್ಲಿ ಈ ನಟಿಗೆ (ಲಚ್ಚಿ ಅಂತಿಟ್ಟುಕೊಳ್ಳಿ) ಹೇಮಂತ್ ಕುಮಾರ್ ಪರಿಚಯ ಆಗಿದ್ದರು. ಅವರ ನಿರ್ಮಾಣ ಹಾಗೂ ನಿರ್ದೇಶನದ 'ರಿಚ್ಚಿ' ಎಂಬ ಚಿತ್ರದಲ್ಲಿ ಲಚ್ಚಿಗೆ ಹೀರೋಯಿನ್ ಚಾನ್ಸ್ ನೀಡಿದ್ದರು. ಎರಡು ಲಕ್ಷ ಸಂಭಾ ವನೆ ಮಾತಾಡಿ 60 ಸಾವಿರ ಅಡ್ವಾನ್ಸ್ ನೀಡಿದ್ದರು. ಶೂಟಿಂಗ್ ವಿಳಂಬವಾಗಿ ನಡೆದು, ಬಾಕಿ ಹಣವನ್ನೇ ಕೊಡದೆ ಮೋಸ ಮಾಡಿದರು. ಅಲ್ಲದೆ, ಶೂಟಿಂಗ್ ನಲ್ಲಿ ತನಗೆ ಅರೆಬರೆ ಬಟ್ಟೆ ತೊಡಿಸಿ ಅಶ್ಲೀಲ ವಾಗಿ ಚಿತ್ರಿಸಿದ್ದಾರೆ.

ಶೂಟಿಂಗ್ ಮುಗಿದು ಸಿನಿಮಾದ ಪ್ರಚಾರಕ್ಕೆಂದು 2023ರ ಆಗಸ್ಟ್ 5ರಂದು ಸುದ್ದಿಗೋಷ್ಠಿಗೆಂದು ಮುಂಬೈಗೆ ಹೋದಾಗ, ತನಗೆ ತಿಳಿಯದಂತೆ ಮಾಕ್ಟೇಲ್‌ನಲ್ಲಿ ಮದ್ಯ ಬೆರೆಸಿ ಕುಡಿಸಿದ್ದರು. ತನಗೆ ಮತ್ತು ಬರಿಸಿ ಮಲಗಿ ದಾಗ ಖಾಸಗಿ ವಿಡಿಯೋಗಳು, ಚಿತ್ರಗಳನ್ನು ತೆಗೆದುಕೊಂಡು ಬಳಿಕ ನಟಿಯನ್ನು ಲೈಂಗಿಕವಾಗಿ ಕಾಡಿದರು. ಆ ಬಳಿಕ ಆ ಚಿತ್ರಗಳನ್ನು ತೋರಿಸಿ ತನ್ನನ್ನು ಬ್ಲಾಕ್‌ಮೇಲ್ ಮಾಡಿರುವುದಾಗಿ ಲಚ್ಚಿ ತನ್ನ ದೂರಿನಲ್ಲಿ ವಿವರಿಸಿದ್ದಾಳೆ. ಸದರಿ ದೂರಿನ ಬೆನ್ನಲ್ಲೇ ರಾಜಾಜಿನಗರ ಪೊಲೀಸರು ಹೇಮಂತ್ ನನ್ನು ಬಂಧಿಸಿದ್ದಾರೆ.

ಅಂದಹಾಗೆ ನಟ ಹೇಮಂತ್ ಮತ್ತು ನಟಿಯ ನಡುವೆ ಈ ಹಿಂದೆಯೂ ಸಹ ಜಗಳ ನಡೆದಿತ್ತಂತೆ. ನಟಿಯು ರಿಚ್ಚಿ ಸಿನಿಮಾದ ಪ್ರಚಾರಕ್ಕೆ ಬರುತ್ತಿಲ್ಲ, ತನ್ನ ಫೋನ್ ಕರೆಯನ್ನೂ ಸ್ವೀಕರಿಸುತ್ತಿಲ್ಲ ಎಂದು ಹೀರೋ ಹೇಮಂತ್ ಫಿಲಂ ಚೇಂಬರ್‌ಗೆ ದೂರು ನೀಡಿದ್ದ ರಂತೆ. ಇದಕ್ಕೂ ಮುಂಚೆ 2023ರಲ್ಲಿ ಲಚ್ಚಿ ಹಾಗೂ ಆಕೆಯ ತಾಯಿ ಇಬ್ಬರೂ ತಮ್ಮ ಮೇಲೆ ಹಲ್ಲೆ ಮಾಡಿದ್ದಾರೆಂದು ಹೀರೋ ಹೇಮಂತ್‌ಕುಮಾರ್ ಫಿಲಂ ಚೇಂಬರ್ ಮೆಟ್ಟಿಲೇರಿದ್ದು, ಫಿಲಂ ಚೇಂಬರ್ ನವರು ಮಧ್ಯಸ್ಥಿಕೆ ವಹಿಸಿ ರಾಜಿ ಸಂಧಾನ ಮಾಡಿಸಿದ್ದರಂತೆ. ಇಷ್ಟೆಲ್ಲಾ ಆದ ಮೇಲೆ ಬಾಂಬೆ ಘಟನೆ ನಡೆದಿದೆ ನೋಡಿ!

ಘಟನೆ ನಡೆದ ಎರಡು ವರ್ಷದ ಬಳಿಕ... ಈ ನಟಿಮಣಿ ಹೀರೋ, ಪ್ರೊಡ್ಯೂಸರ್, ಡೈರೆಕ್ಟರ್ ಹೇಮಂತ್ ವಿರುದ್ಧ ಲೈಂಗಿಕ ಕಿರುಕುಳ ದೂರು ನೀಡಿದ್ದಾಳೆ ನೋಡಿ!! ಇವಳನ್ನು ಹೀರೋಯಿನ್ ಮಾಡಿಕೊಂಡು ಪ್ಯಾನ್ ಇಂಡಿಯಾ ಸಿನಿಮಾ ತೆಗೆದಿರೋ ಹೀರೋ ಹೇಮಂತ್‌ಕುಮಾರ್ ಪಚ್ಚಿ ಈಗ ಪೊಲೀಸ್ ಕೈಲಿ ಅಪ್ಪಚ್ಚಿ ಯಾಗಿ ಪರಪ್ಪನ ಅಗ್ರಹಾರ ಜೈಲು ಪಾಲಗಿದ್ದಾನೆ!!!

**ಇಷ್ಟಕ್ಕೂ ಲಚ್ಚಿ ಬ್ಯಾಕ್‌ಗ್ರೌಂಡ್?**

ಲಚ್ಚಿ ಮೊಲದ ಹಾಗೆ ಮುದ್ದಾಗಿರೋ ಯುವನಟಿ. ಶಿವಮೊಗ್ಗ ಮೂಲದವಳು. ಕನ್ನಡತಿ ಅನ್ನೋ ಸೀರಿಯಲ್ ನಲ್ಲಿ 'ವಿಲನಿ' ಯಾಗಿ ಮಿಂಚಿದ್ದಳು. ಅಲ್ಲದೆ 2022ರಲ್ಲಿ ಓಟಿಟಿಯಲ್ಲಿ ರಿಲೀಸ್ ಆಗಿದ್ದ ಬಿಗ್ ಬಾಸ್ ವಿಶೇಷ ಸರಣಿಯಲ್ಲಿ ಓರ್ವ ಸ್ಪರ್ಧಿಯಾಗಿದ್ದಳು. 'ಭರ್ಜರಿ ಬ್ಯಾಚು ಲರ್ಸ್' ಶೋ ನಲ್ಲಿ ಬುಲೆಟ್ ಪ್ರಕಾಶ್ ಮಗ ರಕ್ಷಕ್ ಜೊತೆ ಲಲ್ಲೆಗರೆದಿದ್ದಳು! ಇಂತಹ ಹಿನ್ನಲೆಯ ಅರೆಬರೆ ನಟಿಮಣಿಯನ್ನು, ಅನ್ನ ಪೂರ್ಣೇಶ್ವರಿನಗರದ ಹುಡುಗ ಹೇಮಂತ್ 'ರಿಚ್ಚಿ' ಅನ್ನೋ ತನ್ನ ಸಿನಿಮಾಗೆ ಹೀರೋಯಿನ್ ಮಾಡಿಕೊಂಡಿದ್ದ.



ಇಷ್ಟಕ್ಕೂ ಈ ಸಿನಿಮಾಗೆ ಅವನೇ ನಿರ್ಮಾಪಕ, ನಿರ್ದೇ ಶಕ. ಪ್ಯಾನ್ ಇಂಡಿಯಾ ಸಿನಿಮಾ ಅಂತ ಅನೌನ್ಸ್ ಮಾಡಿಯೇ 'ರಿಚ್ಚಿ'ಯನ್ನು ಅತ್ಯಂತ ರಿಚ್ಚಾಗಿ ಶೂಟ್ ಮಾಡಿ ದ್ದಾನೆ ಅನ್ನೋ ಸುದ್ದಿ ಇದೆ. ಈ ಹೀರೋ ಹೇಮಂತ ತನ್ನ ನಾಯಕಿಗೆ ಸರಿಯಾಗಿ ಸಂಭಾವನೆಯನ್ನೇ ಕೊಟ್ಟಿಲ್ಲವಂತೆ. ಮಾತಾಡಿದ್ದು 2 ಲಕ್ಷ, ಕೊಟ್ಟಿದ್ದು 60 ಸಾವಿರ. ಶೂಟಿಂಗ್ ಮುಗಿದು ಕುಂಬಳಕಾಯಿ ಒಡೆದ ಬಳಿಕ ಬಾಕಿ ಅಮೌಂಟ್ ಕೇಳಿದ್ದಕ್ಕೆ ಚೆಕ್ ಕೊಟ್ಟಿದ್ದಾನಂತೆ. ಅದು ಬೌನ್ಸ್ ಆಗಿದೆಯಂತೆ.

ಹೀಗಾಗಿ, ರೊಚ್ಚಿಗೆದ್ದಿರೋ ಹೀರೋಯಿನ್, ಇದನ್ನು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಮಾಡಿ ಮರ್ಯಾದೆ ಕಳೆದಿದ್ದಾಳೆ. ಇದಾದ ಬಳಿಕ ಹೀರೋ ಹೇಮಂತ್ ನಿಂದ ಹೀರೋಯಿನ್ ಲಚ್ಚಿಗೆ ಲೈಂಗಿಕ ಕಿರುಕುಳ... ಅನ್ನೋ 'ಬ್ರೇಕಿಂಗ್ ನ್ಯೂಸ್' ಮೊಳಗಿದೆ!

**ಇಷ್ಟೆಲ್ಲಾ ಆದ ಮೇಲೂ ಮುಂಬೈಗೆ ಹೇಗೆ ಹೋದಳು?!**

ಮುಂಬೈನಲ್ಲಿ ಹಿಂದಿ ವರ್ಷನ್ ರಿಲೀಸ್‌ಗಾಗಿ ಪ್ರಮೋ ಷನ್ ಮಾಡಬೇಕಿದೆ ಒಬ್ಬಳೇ ಬಾ... ಅಂತೇಳಿ ಅಲ್ಲಿಗೆ ಕರೆಸಿ ಕೊಂಡು, ಕೂಲ್ ಡ್ರಿಂಕ್ಸ್ ನಲ್ಲಿ ಹಾಟ್ ಡ್ರಿಂಕ್ಸ್ ಮಿಕ್ಸ್ ಮಾಡಿ ಕುಡಿಸಿ, ಆಕೆ ಅಸ್ತ ವ್ಯಸ್ತವಾಗಿ ಬಿದ್ದಿರೋವಾಗ, ಲಚ್ಚಿ ಪ್ರೈವೇಟ್ ಪಾರ್ಟ್ಸ್ ಜೊತೆ ಚಿನ್ನಾಟವಾಡಿ, ಅದನ್ನು ಶೂಟಿಂಗ್ ಮಾಡಿ ದ್ದಾನಂತೆ! ಇದನ್ನು ಆಕೆಗೆ ತೋರಿಸಿ ಕಾಮಕ್ರೀಡೆಗೆ ಸಹಕರಿಸುವಂತೆ ಒತ್ತಾಯಿಸಿದ್ದನಂತೆ. ಇದನ್ನೆಲ್ಲಾ ಎರಡನೇ ಕ್ಲಾಸ್ ಮಕ್ಕಳು ಮನೆ ಪಾಠ ಬರೆದು ತೋರಿಸುವಂತೆ ಬರೆದು ರಾಜಾಜಿನಗರ ಪೊಲೀಸ್ ಸ್ಟೇಷನ್‌ಗೆ ಕೊಟ್ಟಿದ್ದಾಳೆ,

**ರಿಚ್ಚಿ ಹೀರೋಯಿನ್ ಲಚ್ಚಿ!**

ಸೋ, ಹೀರೋ ಹೇಮಂತ್ ಈಗ ಅರೆಸ್ಟ್ ಆಗಿ ಪೊಲೀಸ್ ವಿಚಾರಣೆ ಎದುರಿಸುತ್ತಿದ್ದಾನೆ. ಗಮನೀಯ ಅಂಶವೇನು ಅಂದ್ರೆ, ಹೀರೋ/ ಪ್ರೊಡ್ಯೂಸರ್ ಹೇಮಂತ್ ಸರಿಯಾಗಿ ದುಡ್ಡೇ ಕೊಟ್ಟಿಲ್ಲ ಅಂತ ಆರೋಪಿಸಿರೋ ಹೀರೋಯಿನ್, ಅವನು ಕೊಟ್ಟಿದ್ದ ಚೆಕ್ ಬೌನ್ಸ್ ಆಗಿದ್ದು ಅದನ್ನು




ತಾನು ಸೋಶಿಯಲ್ ಮೀಡಿಯಾದಲ್ಲಿ ಹಾಕಿದ್ದೆ ಅನ್ನೋ ಹೀರೋಯಿನ್, ಸಿನಿಮಾ ಪ್ರಚಾರಕ್ಕೆ ಮುಂಬೈಗೆ ಕರೆದಾಗ ತಾನು ಬರಲ್ಲ ಅಂದಿದ್ದಕ್ಕೆ ರೌಡಿಗಳಿಂದ ಬೆದರಿಸಿದ್ದ, ತನ್ನ ತಾಯಿಗೂ ಪ್ರಾಣ ಬೆದರಿಕೆ ಕರೆ ಮಾಡಿಸಿದ್ದ ಅಂತೆಲ್ಲ ಪೊಲೀಸ್ ಕಂಪ್ಲೇಂಟ್‌ನಲ್ಲಿ ಬರೆದಿರೋ ನಟಿಮಣಿ, ಅದು ಹೇಗೆ ಮುಂಬೈಗೆ ಒಬ್ಬಳೇ ಹೋದಳು? ಅಲ್ಲಿ ಮೂಸಿಯು ನೋಡದೆ ಡ್ರಿಂಕ್ಸ್ ಹೇಗೆ ಹೀರಿದಳು?? ಒಂದು ಗುಟುಕು ಕುಡಿದಾಗಲಾದರೂ 'ರುಚಿ' ಬದಲಾಗಿದ್ದು ತಿಳಿಯಲಿಲ್ಲವೇ??





ರಕ್ಷಕ್ ಬುಲೆಟ್ ಜೊತೆ

ರಾಜಾಜಿನಗರ ಪೊಲೀಸರು ಕೊಂಚ ಈ ನಟಿಮಣಿಯನ್ನೂ ಪ್ರಶ್ನಿಶಬೇಕಿದೆ. ಯಾಕೆಂದರೆ, 'ನ್ಯಾಯ' ಎಲ್ಲರಿಗೂ ಒಂದೇ.... 'ನ್ಯಾಯ ಎಲ್ಲಿದೆ?' ಅಂತ ಸಿನಿಮಾ ದಲ್ಲಿ ಹಾಡಬಹುದೇ ವಿನಃ ನಿಜಜೀವನದಲ್ಲಿ ಯಾರೂ ಹಾಡ ಬಾರದು ಮತ್ತು ಹುಡುಕ ಬಾರದು...

# ಸೌಜನ್ಯ ಫೈಲ್ಸ್



1

ನಿರೂಪಣೆ :

**ಮೋಹನ್ ಬೋಳಂಗಡಿ**

# ಕಾಲೇಜಿಗೆ ಹೋದ ಮಗಳು ಬರಲೇ ಇಲ್ಲ!

ದಕ್ಷಿಣಕನ್ನಡ ಜಿಲ್ಲೆಯ ಧಾರ್ಮಿಕ ಶ್ರದ್ಧಾಕೇಂದ್ರ ಶ್ರೀ ಕ್ಷೇತ್ರ ಧರ್ಮಸ್ಥಳ. ಸುಮಾರು 800 ವರ್ಷಗಳ ಇತಿಹಾಸ ಹೊಂದಿರುವ ಚತುರ್ದಾನ ಪರಂಪರೆಯ ಕ್ಷೇತ್ರ. ಈ ಕ್ಷೇತ್ರವನ್ನೊಳಗೊಂಡ ಭೂ ಪ್ರದೇಶವನ್ನು ಈ ಹಿಂದೆ ಕುಡುಮ ಎಂದು ಸಂಬೋಧಿಸಲಾಗುತ್ತಿತ್ತು. ಯಾವಾಗ ಮಾಧ್ವ ಪರಂಪರೆಯ ವಾದಿರಾಜ ಸ್ವಾಮಿಗಳು ಇಲ್ಲಿಗೆ ಆಗಮಿಸಿ ಅಲ್ಲಿ ಪೂಜಿಸಲ್ಪಡುತ್ತಿದ್ದಂತಹ ಮಂಜುನಾಥ ಸ್ವಾಮಿಯ ಲಿಂಗವನ್ನು ಪುನರ್ ಪ್ರತಿಷ್ಠಾಪನೆ ಮಾಡಿ ಶಿವಳ್ಳಿ ಬ್ರಾಹ್ಮಣರನ್ನು ಪೂಜೆಗೆ ನಿಯೋಜಿಸಿ ಈ ಕ್ಷೇತ್ರವನ್ನು ಧರ್ಮಸ್ಥಳ ಎಂದು ಘೋಷಿಸಿದರು. ಅಲ್ಲಿಂದ ಈ ಭೂ ಪ್ರದೇಶ ಧರ್ಮಸ್ಥಳ ಎಂದೇ ಹೆಸರು ವಾಸಿಯಾಯಿತು.

ಈ ಕ್ಷೇತ್ರದಿಂದ ಕೇವಲ ಎರಡು ಕಿಲೋಮೀಟರ್ ದೂರದಲ್ಲಿರುವಂತಹ ಪ್ರದೇಶವೇ ಪಾಂಗಾಳ. ಇಲ್ಲಿ ಬಾಳುಗೌಡ ಮತ್ತು ಪೂವಣಿಗೌಡ ಎಂಬ ಎರಡು ಕುಟುಂಬಗಳು ಕೃಷಿ ಆಧಾರಿತ ಭೂಮಿಯನ್ನು ಹೊಂದಿದ್ದವು. ಪೂವಣಿ ಗೌಡರ ಮಗನಾದ ಚಂದಪ್ಪಗೌಡರು ಬಾಳುಗೌಡರ ಮಗಳಾದ ಕುಸುಮಾವತಿ ಎಂಬವರನ್ನು ವಿವಾಹವಾಗಿದ್ದರು. ಈ ದಂಪತಿಗೆ ನಾಲ್ಕು ಹೆಣ್ಣು, ಒಂದು ಗಂಡು ಮಗ. ಸುಂದರ ಸಂಸಾರ. ಮಧ್ಯಮ ವರ್ಗದ ಕುಟುಂಬ. ಚಂದಪ್ಪ ಗೌಡರು ಸಣ್ಣ ಮಟ್ಟಿನ ಕಾಂಟ್ರಾಕ್ಟ್ ಕೆಲಸ ಮಾಡುತ್ತಿದ್ದರು. ಇಂತಹ ಕುಟುಂಬದ ಹೆಣ್ಣುಮಗಳೇ ಸೌಜನ್ಯ. ಆಕೆಗೆ 2012ರಲ್ಲಿ 17ರ ಹರೆಯ. ಇಲ್ಲಿಂದ 8 ಕಿಲೋಮೀಟರ್ ದೂರದ ಉಜಿರೆಯ ಎಸ್‌ಡಿಎಂ ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿನಿ. ದಿನನಿತ್ಯ ಕಾಲೇಜಿಗೆ ಮನೆಯಿಂದ ಹೋಗಿ ಬರುತ್ತಿದ್ದಳು. ತಂದೆ ಮತ್ತು ಮಾವ ವಿಠಲ ಗೌಡರ ಬಳಿ ಜೀಪು ಇದ್ದರೂ ಆಕೆ ಬಸ್ಸಿನಲ್ಲಿಯೇ ಕಾಲೇಜಿಗೆ ಹೋಗುತ್ತಿದ್ದಳು. ಪ್ರತಿನಿತ್ಯ ಧರ್ಮಸ್ಥಳದ ನೇತ್ರಾವತಿ ಸ್ನಾನಘಟ್ಟದ ಬಳಿ ಬಸ್ಸು ಏರುತ್ತಿದ್ದ ಆಕೆ ಸಂಜೆಯ ವೇಳೆಗೆ ಅದೇ ಸ್ಥಳದಲ್ಲಿ ಬಸ್ಸಿನಿಂದ ಇಳಿದು ನಡೆದುಕೊಂಡು ಸುಮಾರು ಒಂದು ಕಿ.ಮೀ. ದೂರದ ತನ್ನ ಮನೆಗೆ ಬರುತ್ತಿದ್ದಳು. ಕೆಲವೊಂದು ಸಂದರ್ಭಗಳಲ್ಲಿ ಆಕೆಯನ್ನು ಮಾವ ವಿಠಲಗೌಡ ಕರೆದುಕೊಂಡು ಬರುವುದು ಇತ್ತು. ವಿಠಲಗೌಡ ಅವರಿಗೆ ಸ್ನಾನಘಟ್ಟದ ಬಳಿ ಶ್ರೀ ಕ್ಷೇತ್ರ ಧರ್ಮಸ್ಥಳಕ್ಕೆ ಸಂಬಂಧಿಸಿದ ಕಟ್ಟಡದಲ್ಲಿ ಸುಪ್ರಭಾತ ಎಂಬ ಹೆಸರಿನ ಹೊಟೇಲು ಇತ್ತು.



ಎಸ್ಪಿ ಅಭಿಷೇಕ್ ಗೋಯಲ್

2012 ಅಕ್ಟೋಬರ್ 9ರಂದು ದಿನನಿತ್ಯದಂತೆ ಸೌಜನ್ಯ ಬೆಳಿಗ್ಗೆ ಮನೆಯಿಂದ ಕಾಲೇಜಿಗೆ ಹೋಗಿದ್ದಳು. ಅಂದು ಆಕೆಯ ಹಿರಿಯರ ಮನೆಯಲ್ಲಿ ಮಧ್ಯಾಹ್ನದ ವೇಳೆಗೆ ಹೊಸ ಅಕ್ಕಿ ಊಟ ಮಾಡುವ ಕಾರ್ಯಕ್ರಮ ಇತ್ತು. ಎಲ್ಲ ಸಂಬಂಧಿಕರು ಒಟ್ಟು ಸೇರಿ ಊಟ ಮಾಡುವ ಕಾರ್ಯಕ್ರಮ ಅದಾಗಿತ್ತು. ಆದ್ದರಿಂದ ಸೌಜನ್ಯ ಮಧ್ಯಾಹ್ನ ಕ್ಲಾಸು ಮುಗಿಸಿ ಊಟಕ್ಕೆ ಮನೆಗೆ ಬರುತ್ತೇನೆ ಎಂದು ಹೇಳಿದ್ದಳು. ಆಕೆಯನ್ನು ಆ ದಿನ ಬೆಳಿಗ್ಗೆ ಬೆಳ್ತಂಗಡಿಗೆ ಕಾರ್ಯ ನಿಮಿತ್ತ ಹೋಗಲಿಕ್ಕಿದ್ದ ತಂದೆ ಚಂದಪ್ಪ ಗೌಡರೇ ಜೀಪಿನಲ್ಲಿ ಕರೆದೊಯ್ದು ಕಾಲೇಜು ಬಳಿ ಇಳಿಸಿದ್ದರು. ಮಧ್ಯಾಹ್ನದ ವೇಳೆಗೆ ಕರೆದುಕೊಂಡು ಹೋಗಲು ಬರುತ್ತೇನೆ ಎಂದು ವಾಗ್ದಾನ ನೀಡಿದ್ದರು. ಆದರೆ ಮಧ್ಯಾಹ್ನದ ವೇಳೆಗೆ ಕಾಲೇಜು ಬಿಟ್ಟರೂ ಆಕೆಗೆ ಸ್ಪೆಷಲ್ ಕ್ಲಾಸ್ ಇದ್ದುದರಿಂದ ಕಾಲೇಜಿನಲ್ಲೇ ಉಳಕೊಂಡಳು. ಆಕೆಯ ತಂದೆಯ ಚಂದಪ್ಪ ಗೌಡರು ಒಂದು ಗಂಟೆಯ ವೇಳೆಗೆ ಕಾಲೇಜಿನ ಬಳಿ ಬಂದಿದ್ದು, ಆಕೆಯನ್ನು ಕಾದು ಬಾರದೇ ಇದ್ದಾಗ ಮನೆಗೆ ಹೋಗಿದ್ದರು.

ಸಂಜೆ ನಾಲ್ಕು ಗಂಟೆಯ ವೇಳೆಗೆ ಸೌಜನ್ಯಳ ಮಾವ ವಿಠಲಗೌಡರು ಮನೆಗೆ ಬಂದಿದ್ದ ತಂಗಿ ಯಶೋದ ಮತ್ತವರ ಮಕ್ಕಳನ್ನು ಕರೆದುಕೊಂಡು ಜೀಪಿನಲ್ಲಿ ಬಸ್ಸಿಗೆ ಬಿಡಲು ನೇತ್ರಾವತಿ ಸ್ನಾನಘಟ್ಟದತ್ತ ಬರುತ್ತಿದ್ದರು. ಈ ವೇಳೆಗೆ ಬಸ್ಸಿನಲ್ಲಿ ಬಂದು ಇಳಿದ ಸೌಜನ್ಯ ತುಂತುರು ಮಳೆಯಲ್ಲಿ ಕೊಡೆ ಹಿಡಿದುಕೊಂಡು ಬರುತ್ತಿದ್ದಳು. ವಿಠಲ ಗೌಡರು ಆಕೆಗೆ ವಿಶ್ ಮಾಡಿದ್ದರು.

ಸಂಜೆ ಗಂಟೆ 6 ಆದರೂ ಸೌಜನ್ಯ ಮನೆ ತಲುಪಲಿಲ್ಲ. ಮನೆಯಲ್ಲಿ ತಾಯಿ ಕುಸುಮಾವತಿ ಆಕೆಯ ದಾರಿ ಕಾಯುತ್ತಿದ್ದರು. ಆಕೆಯ ಅಕ್ಕ ಮತ್ತು ತಂಗಿಯಂದಿರು, ತಮ್ಮ ಮನೆಯಲ್ಲೇ ಇದ್ದರು. ಸೌಜನ್ಯ ಬರುವುದು ಕಾಣದಾದಾಗ ಸಹಜವಾಗಿಯೇ ಆತಂಕಗೊಂಡ ತಾಯಿ ಕುಸುಮಾವತಿಯವರು ಆಕೆ ತಮ್ಮ ವಿಠಲಗೌಡರ ಹೊಟೇಲ್‌ನಲ್ಲಿ ಇರಬಹುದು ಎಂಬ ಸಂಶಯದಿಂದ ವಿಠಲಗೌಡರಿಗೆ ಫೋನ್ ಮಾಡಿದ್ದರು. ಆ ಸಂದರ್ಭದಲ್ಲಿ ಅವರು ಆಕೆ ಆ ವೇಳೆಗಾಗಲೇ ಮನೆ ಕಡೆ ಹೋಗಿದ್ದನ್ನು ತಿಳಿಸಿದರು. ಆಗ ಗಾಬರಿಗೊಂಡ ಕುಸುಮಾವತಿಯವರು ಗಂಡ ಚಂದಪ್ಪ ಗೌಡರಿಗೆ ಮತ್ತು ತಮ್ಮ ವಿಠಲಗೌಡರಿಗೆ ತನ್ನ ದುಗುಡವನ್ನು ತೋಡಿಕೊಂಡರು. ವಿಠಲಗೌಡರು ತನ್ನ ಪತ್ನಿಯ ಸೋದರ ಸಂಬಂಧಿಯಾದ ವೇಣೂರಿನಲ್ಲಿ ವಾಸವಿರುವ ಜಗದೀಶ್ ಎಂಬವರಿಗೆ ದೂರವಾಣಿ ಮೂಲಕ ವಿಷಯ ಮುಟ್ಟಿಸಿದರು. ಆದರೆ ಜಗದೀಶ್ ಅವರಿಗೆ ಬರಲು ಸಾಧ್ಯವಾಗಲಿಲ್ಲ. ಅವರ ಪತ್ನಿ ಬಾಣಂತಿಯಾಗಿದ್ದರಿಂದ ಮತ್ತು ಮನೆಯಲ್ಲಿ ಯಾರೂ ಇಲ್ಲದೇ ಇದ್ದುದರಿಂದ ಅವರು ಬರಲಿಲ್ಲ. ಆಗ ವಿಠಲಗೌಡ ಮತ್ತು ಬಾವ ಚಂದಪ್ಪ ಗೌಡರು ನೇರವಾಗಿ ಹೋದದ್ದೇ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಬಳಿ. ಅವರಲ್ಲಿ ಕಾಲೇಜಿಗೆ ಹೋದ ಮಗಳು ಬಂದಿಲ್ಲ ಎಂದು ಅವಲತ್ತುಕೊಂಡರು. ಅವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡುವಂತೆ ಸೂಚಿಸಿದರು. ಅವರು ನೇರವಾಗಿ ಅಂದಿನ ಗೃಹ ಸಚಿವ ಆರ್. ಅಶೋಕ್ ಅವರಿಗೆ ದೂರವಾಣಿ ಕರೆ ಮಾಡಿ ವಿಷಯ ಮುಟ್ಟಿಸಿದರು. ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ವಿನಂತಿಸಿದರು.



ವಿಠಲಗೌಡ

ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಸಲಹೆಯಂತೆ ಚಂದಪ್ಪ ಗೌಡ ಮತ್ತ ವಿಠಲಗೌಡರು, ರಾತ್ರಿ ಸುಮಾರು 8 ಗಂಟೆಯ ವೇಳೆಗೆ ಬೆಳ್ತಂಗಡಿ ಪೊಲೀಸ್ ಠಾಣೆಗೆ ಬಂದರು. ಆ ಸಂದರ್ಭದಲ್ಲಿ ಎಸ್‌ಐ ಯೋಗೀಶ್ ಇರಲಿಲ್ಲ. ಠಾಣೆಯಲ್ಲಿ ಐತು ನಾಯ್ಕ ಎಂಬ ಹೆಡ್ ಕಾನ್ಸ್‌ಟೇಬಲ್ ಚಾರ್ಜಲ್ಲಿ ಇದ್ದರು. ಅವರು ಚಂದಪ್ಪ ಗೌಡರೊಂದಿಗೆ ಬಂದ ಕಾರಣವನ್ನು ವಿಚಾರಿಸಿದರು. ತನ್ನ ಮಗಳು ಸೌಜನ್ಯ ಬೆಳಿಗ್ಗೆ ಕಾಲೇಜಿಗೆ ಹೋದವಳು ವಾಪಾಸು ಬಂದಿಲ್ಲ ಎಂದು ಅವರು ಉತ್ತರಿಸಿದರು. ಸಹಜ ಎಂಬಂತೆ ಐತು ನಾಯ್ಕ್ ಅವರು ಆಕೆ ತನ್ನ ಸ್ನೇಹಿತರೊಂದಿಗೆ ಹೋಗಿರಬಹುದಾ ಎಂದು ವಿಚಾರಿಸಿದರು. ಅದಕ್ಕೆ ಚಂದಪ್ಪ ಗೌಡರು ಆಕೆ ಆ ರೀತಿಯಾಗಿ ಎಲ್ಲಿಗೂ ಯಾರೊಂದಿಗೂ ಹೋಗುವವಳಲ್ಲ. ಕಾಲೇಜು ಬಿಟ್ಟರೆ ನೇರವಾಗಿ ಮನೆಗೆ ಬರುತ್ತಿದ್ದಳು. ಒಂದೊಂದು ಬಾರಿ ಸ್ನಾನಘಟ್ಟದ ಬಳಿಯ ತನ್ನ ಮಾವನ ಹೊಟೇಲ್‌ಗೆ ಹೋಗುತ್ತಿದ್ದಳು. ಮಾವನೊಂದಿಗೆ ಬೈಕಿನಲ್ಲಿ ಮನೆಗೆ ಬರುತ್ತಿದ್ದಳು. ಯಾರೊಂದಿಗೂ ಮಾತನಾಡುತ್ತಿರಲಿಲ್ಲ ಎಂದು ತನ್ನ ಮಗಳ ಸೌಜನ್ಯಳ ದಿನಚರಿಯನ್ನು ವಿವರಿಸಿದರು. ಆ ಸಂದರ್ಭದಲ್ಲಿ ಎಚ್.ಸಿ. ಐತು ನಾಯ್ಕ್ ಅವರು ಬಿಳಿ ಹಾಳೆಯೊಂದನ್ನು ನೀಡಿ ದೂರು ಬರೆದುಕೊಡುವಂತೆ ಸೂಚಿಸಿದರು. ಆಕೆಯ ಭಾವಚಿತ್ರ ಇದೆಯಾ ಎಂದು ವಿಚಾರಿಸಿದರು. ಇಲ್ಲ ಎಂದಾಗ ಆಕೆಯ ಭಾವಚಿತ್ರದ 10 ಪ್ರತಿಗಳನ್ನು ತಂದುಕೊಡುವಂತೆ ಸೂಚಿಸಿದರು ಮತ್ತು ಚಂದಪ್ಪ ಗೌಡರು ಬರೆದು ಕೊಟ್ಟ ದೂರಿನ ಪ್ರತಿಯನ್ನು ಸ್ವೀಕರಿಸಿ ಸ್ವೀಕೃತಿ ನೀಡಿದರು. ತಾವು ಇಲಾಖಾವತಿಯಿಂದ ಸೌಜನ್ಯಳ ಪತ್ತೆಗಾಗಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರಲ್ಲದೆ ಆಕೆಯ ಸ್ನೇಹಿತರ ಬಳಿ ವಿಚಾರಿಸುವಂತೆ ಸೂಚನೆಯನ್ನೂ ನೀಡಿದರು.

ಚಂದಪ್ಪ ಗೌಡರು ಮತ್ತು ವಿಠಲಗೌಡರು ದೂರು ಕೊಟ್ಟು ವಾಪಸಾಗುತ್ತಿದ್ದಂತೆಯೇ ಅವರ ಅಕ್ಕಪಕ್ಕದ ಮನೆಯವರಲ್ಲಿ ಈ ವಿಚಾರ ಹರಡಿತ್ತು. ಸುಮಾರು 10 ರಿಂದ 15ರಷ್ಟಿದ್ದ ಯುವಕರ ತಂಡ ನೇತ್ರಾವತಿ ಸ್ನಾನಘಟ್ಟದಿಂದ ಪಾಂಗಾಳದವರೆಗೆ ಹುಡುಕಾಟಕ್ಕೆ ತೊಡಗಿತು. ಅದೇ ವೇಳೆಗೆ ಬೆಳ್ತಂಗಡಿ ಪೊಲೀಸ್ ಠಾಣೆಯಿಂದ ಮಾಹಿತಿ ಪಡೆದ ಧರ್ಮಸ್ಥಳ ಹೊರ ಠಾಣೆಯ ಪೊಲೀಸರು ಬೈಕಿನಲ್ಲಿ ಸ್ನಾನಘಟ್ಟದ ಬಳಿ ಬಂದು ಅಲ್ಲಿ ಸೇರಿದ್ದ ಯುವಕರಲ್ಲಿ ವಿಚಾರಿಸಿದರು. ಆದರೆ ಯಾವುದೇ ಮಾಹಿತಿ ಸಿಗಲಿಲ್ಲ. ಮನೆಮಂದಿ ರಾತ್ರಿಯವರೆಗೂ ಆಕೆಯ ನಿರೀಕ್ಷೆಯಲ್ಲಿಯೇ ಇದ್ದರು.

### ರಾತ್ರಿಯೇ ದಾಖಲಾಯಿತು ದೂರು!

ಚಂದಪ್ಪ ಗೌಡರು 8 ಗಂಟೆಯ ಸುಮಾರಿಗೆ ದೂರು ಕೊಟ್ಟು ಹೋಗಿದ್ದರು. ರಾತ್ರಿ ಜಿಲ್ಲಾ ಎಸ್ಪಿ ಅಭಿಷೇಕ್ ಗೋಯಲ್ ಅವರಿಗೆ ರಾಜ್ಯದ ಗೃಹಸಚಿವ ಆರ್ ಅಶೋಕ್ ಅವರಿಂದ ಕರೆ ಬಂದಿತ್ತು. ಕಾಲೇಜಿಗೆ ಹೋಗಿದ್ದ ವಿದ್ಯಾರ್ಥಿನಿ ನಾಪತ್ತೆಯಾದ ಬಗ್ಗೆ ವಿಚಾರಿಸಿದ್ದರು. ಅವರಿಗೆ ಮಾಹಿತಿಯೇ ಇರಲಿಲ್ಲ. ತಕ್ಷಣ ಬೆಳ್ತಂಗಡಿ ಠಾಣೆಗೆ ದೂರವಾಣಿ ಕರೆಮಾಡಿ ವಿಚಾರಿಸಿದರು. ಆ ಸಂದರ್ಭದಲ್ಲಿ ಚಂದಪ್ಪ ಗೌಡರು ಬಂದು ದೂರು ಕೊಟ್ಟಿರುವಂತಹ ಮಾಹಿತಿಯನ್ನೂ ಸ್ಥಳಕ್ಕೆ ಧರ್ಮಸ್ಥಳ ಹೊರಠಾಣೆಯ ಪೊಲೀಸ್ ಸಿಬ್ಬಂದಿಗಳನ್ನು ಕಳುಹಿಸಿರುವುದಾಗಿಯೂ ಠಾಣೆಯ ಪ್ರಭಾರದಲ್ಲಿದ್ದ ಎಚ್.ಸಿ. ಐತು ನಾಯ್ಕ್ ಅವರು ವಿವರಿಸಿದರು. ಎಸ್ಪಿ ಗೋಯಲ್ ಅವರು ತಕ್ಷಣ ಎಫ್‌ಐಆರ್ ದಾಖಲಿಸುವಂತೆ ಸೂಚಿಸಿದರು. ಐತು ನಾಯ್ಕ್ ಅವರು ಎಸ್‌ಐ ಯೋಗೀಶ್ ಅವರಿಗೆ ಮಾಹಿತಿ ನೀಡಿ ಎಸ್ಪಿ ಅವರ ಸೂಚನೆಯನ್ನು ತಿಳಿಸಿದ್ದರು. ಅವರ ಆದೇಶದಂತೆ ರಾತ್ರಿ 10.30ರ ವೇಳೆಗೆ ಐತು ನಾಯ್ಕ್ ಅವರು ಎಫ್‌ಐಆರ್ ದಾಖಲಿಸಿದರು ಮತ್ತು ಅದನ್ನು ಸಂಬಂಧಪಟ್ಟವರಿಗೆ ರವಾನಿಸಿದರು.



ಮರುದಿನ ಬೆಳಿಗ್ಗೆ ಅಂದರೆ 10.10.2012ರಂದು ಸೌಜನ್ಯಳ ಮಾವ ವಿಠಲಗೌಡ ಅವರು ಆಕೆಯ ಭಾವಚಿತ್ರ ಸಂಗ್ರಹಿಸಲು ಬೆಳ್ತಂಗಡಿಯ ಸ್ಟುಡಿಯೋಗೆ ಹೋದರೆ ಸಂಬಂಧಿಕ ಯುವಕರು ಮತ್ತು ಸ್ಥಳೀಯರು ಆಕೆಯ ಪತ್ತೆಗಾಗಿ ಮತ್ತು ಯಾವುದಾದರೂ ಸುಳಿವು ಸಿಗಬಹುದಾ ಎಂಬ ನಿರೀಕ್ಷೆಯಲ್ಲಿ ನೇತ್ರಾವತಿ ಸ್ನಾನಘಟ್ಟದಿಂದ ಧರ್ಮಸ್ಥಳದ ತನಕ ಮತ್ತು ಪಾಂಗಾಳ ರಸ್ತೆಯುದ್ದಕ್ಕೂ ಹುಡುಕಾಟ ನಡೆಸಿದರು. ಆ ವೇಳೆಗಾಗಲೇ ಕಾಲೇಜಿನ ವಿದ್ಯಾರ್ಥಿನಿ ನಾಪತ್ತೆಯಾಗಿದ್ದಾಳೆ ಎಂಬ ಸುದ್ದಿ ಸ್ಥಳೀಯವಾಗಿ ಹರಡಿತ್ತು. ಇದನ್ನು ಗಮನಿಸಿದ ಹಲವಾರು ಮಂದಿ ಸ್ಥಳೀಯರು ಸ್ಥಳದಲ್ಲಿ ಜಮಾಯಿಸಿದ್ದರು.

ಭಾವಚಿತ್ರ ಸಂಗ್ರಹಿಸಲು ಬೆಳ್ತಂಗಡಿಗೆ ಹೋಗಿದ್ದ ವಿಠಲಗೌಡರು ಸ್ಟುಡಿಯೋದಲ್ಲಿ ವಿಚಾರಿಸಿ ಭಾವಚಿತ್ರ ದೊರಕದೆ ಇದ್ದಾಗ ಕಾಲೇಜಿನಲ್ಲಿ ಇರುವಂತಹ ಭಾವಚಿತ್ರವನ್ನು ಪಡೆದುಕೊಂಡು ಅದರ ಪ್ರತಿ ಮಾಡಿಸುವ ಸಲುವಾಗಿ ಉಜಿರೆ ಎಸ್‌ಡಿಎಂ ಕಾಲೇಜಿಗೆ ಬಂದರು. ಅಲ್ಲಿನ ಪ್ರಾಂಶುಪಾಲರೊಂದಿಗೆ ವಿಷಯ ಮುಟ್ಟಿಸಿದರು. ಅವರು ಸಕರಾತ್ಮಕವಾಗಿ ಸ್ಪಂದಿಸಿದರು. ಕಾಲೇಜಿನ ಉಪನ್ಯಾಸಕರಲ್ಲಿ ಮತ್ತು ಆಕೆಯ ಸ್ನೇಹಿತೆಯರಲ್ಲಿ ವಿಚಾರಿಸಿದಾಗ ಆಕೆಯ ಬಗ್ಗೆ ಒಳ್ಳೆಯ ಅಭಿಪ್ರಾಯವೇ ಮೂಡಿತ್ತು. ಇದೇ ಸಂದರ್ಭದಲ್ಲಿ ಅಂದರೆ ಬೆಳಿಗ್ಗೆ 11.30ರ ವೇಳೆಗೆ ವಿಠಲ ಗೌಡರಿಗೆ ಸಂಬಂಧಿ ಯುವಕನೊಬ್ಬ ದೂರವಾಣಿ ಕರೆ ಮಾಡಿ ಮಣ್ಣಸಂಕದ ತೋಡಿನ ಪಕ್ಕದಲ್ಲಿ ಸೌಜನ್ಯಳ ಮೃತದೇಹ ಸಿಕ್ಕಿದೆ ಎಂಬ ಮಾಹಿತಿ ನೀಡಿದ. ಇದನ್ನು ಕೇಳಿದ ವಿಠಲಗೌಡರು ತಕ್ಷಣ ಸ್ಥಳಕ್ಕೆ ಧಾವಿಸಿದರು. ಆ ವೇಳೆಗಾಗಲೇ ಸುಮಾರು 500 ರಷ್ಟು ಸಾರ್ವಜನಿಕರು ಮೃತದೇಹದ ಸುತ್ತ ವೀಕ್ಷಿಸಿದ್ದರು ಮತ್ತು ಮೃತದೇಹದ ಮೇಲೆ ಬಿಳಿ ಬಟ್ಟೆಯೊಂದನ್ನು ಹಾಕಿದ್ದರು. ಸೌಜನ್ಯಳನ್ನು ದುರುಳರು ಅತ್ಯಾಚಾರಗೈದು ಕೊಲೆ ಮಾಡಿರುವುದು ಮೇಲ್ನೋಟಕ್ಕೆ ಖಾತ್ರಿಯಾಗುತ್ತಿತ್ತು. ಆಕೆಯ ದೇಹ ಅರೆನಗ್ನಾವಸ್ಥಿತಿಯಲ್ಲಿತ್ತು. ಆ ಸಂದರ್ಭದಲ್ಲಿ ಪೊಲೀಸರು ಬಂದು ಆ ಸ್ಥಳವನ್ನು ತಮ್ಮ ಸುಪರ್ದಿಗೆ ತೆಗೆದುಕೊಂಡರು. ಮತ್ತು ಅಲ್ಲಿ ಸೇರಿದ್ದ ಸ್ಥಳೀಯರನ್ನು ಚದುರಿಸಿದರು. ಆ ಸಂದರ್ಭದಲ್ಲಿ ಜಿಟಿ ಜಿಟಿ ಮಳೆ ಸುರಿಯುತ್ತಲಿತ್ತು. ಎಸ್.ಐ ಯೋಗೀಶ್ ಅವರು ವೃತ್ತ ನಿರೀಕ್ಷಕ ಭಾಸ್ಕರ್ ರೈ ಅವರ ಅನುಪಸ್ಥಿತಿಯಲ್ಲಿ ಅವರ ಜವಾಬ್ದಾರಿಯನ್ನು ವಹಿಸಿಕೊಂಡು ಮೃತದೇಹದ ಪರಿಶೀಲನೆ ನಡೆಸತೊಡಗಿದರು ಮತ್ತು ಹಿರಿಯ ಅಧಿಕಾರಿಗಳಿಗೆ ಮಾಹಿತಿ ರವಾನಿಸಿದರು.

(ಮುಂದುವರಿಯುವುದು.....)

## ಪಾತಕ ಪ್ರಪಂಚ

# ಪಾಗಲ್ ಪ್ರೇಮಿ

ಈ ಜಗತ್ತಿನಲ್ಲಿ ಜೀವಿಸುತ್ತಿರುವ ಎಲ್ಲಾ ಮನುಷ್ಯರ ಗುಣ, ಸ್ವಭಾವ, ಆಸೆ-ಆಮಿಷಗಳು ಒಂದೇ ರೀತಿ ಇರುವುದಿಲ್ಲ. ಕೆಲವರಂತೂ ತುಂಬಾ ವಿಚಿತ್ರವಾದ ಮತ್ತು ಸಹಜವಲ್ಲದ ವಿಲಕ್ಷಣ ಆಸೆ, ಬಯಕೆಗಳಿಂದ ಆಡಬಾರದ ಆಟಗಳನ್ನು ಆಡುತ್ತಿರುತ್ತಾರೆ. ಅಂತಹ ವಿಚಿತ್ರ ಪ್ರಸಂಗದ ಆಧಾರದ ಮೇಲೆ ಈ ಕಥಾ ಲೇಖನ ರಚಿತವಾಗಿದೆ ಎಂಬುದು ನಿಜ.

●●●

ಅವಳು ನಿರ್ಮಲ...! ಶ್ರೀಮತಿ ನಿರ್ಮಲ ಮಧುಸೂದನ್. ವಾಸ ಸ್ಥಳ ಆಂಧ್ರಪ್ರದೇಶ. ನಿರ್ಮಲ ಆಕರ್ಷಕ ರೂಪವತಿ. ಪ್ರಾಯ ಮತ್ತು ಸೌಂದರ್ಯ ತುಂಬಿರುವ ಅವಳ ಆ ಚೆಲುವಿನಲ್ಲಿ ರತಿ ವರ್ಚಸ್ಸಿದೆ. ಅವಳ ಸೌಂದರ್ಯಕ್ಕೆ ಬೆರಗಾಗಿ ಶ್ರೀಯುತರು ವಿವಾಹವಾಗಲು ಮುಂದೆ ಬಂದಿದ್ದರು. ಈ ಚೆಲುವೆಗೂ ಸಹ ತಾನು ಶ್ರೀಮಂತನ ಪತ್ನಿಯಾಗಿ, ಶ್ರೀಮಂತಿಕೆಯ ವೈಭವದ ಐಷಾರಾಮಿ ಜೀವನ ನಡೆಸುತ್ತಾ ಸುಖವಾಗಿರಬೇಕೆಂದು ತುಂಬಾ ಆಸೆ, ಕನಸುಗಳಿದ್ದವು. ಆದರೆ ಆ ಅದೃಷ್ಟ ಅವಳಿಗೆ ಕೂಡಿ ಬರಲಿಲ್ಲ. ಯಾಕೆ ಅಂದರೆ ಅವಳು ವಿವಾಹ ಆಗಿರೋದು ಯಾರನ್ನ?

ತಂದೆಯ ಕಡೆಯ ದೂರದ ಸಂಬಂಧಿ. ಯಾವಾಗಲೋ ಮಧುಸೂದನನ(ಇವಳ ಗಂಡ) ತಂದೆ ನಿರ್ಮಲಳ ಕುಟುಂಬದವರಿಗೆ ತುಂಬಾ... ತುಂಬಾ ಸಹಾಯ ಮಾಡಿದ್ದರು. ಹಾಗಾಗಿ ಅವರ ಮಗನಿಗೆ ತಮ್ಮ ಮಗಳನ್ನು ಕೊಟ್ಟು ವಿವಾಹ ಮಾಡುತ್ತೇನೆ ಎಂದು ಪ್ರಮಾಣ ಮಾಡಿದ್ದರು.

ಮಧುಸೂದನ ಬುದ್ಧಿವಂತ ಅಲ್ಲ. ಪ್ರೈಮರಿ ಸ್ಕೂಲ್ ಟೀಚರ್. ಈ ಹಿಂದೆ ಅವನ ತಂದೆಗೆ ಬೇಕಾದಷ್ಟು ಆಸ್ತಿ ಇತ್ತು. ಆದರೆ ಇತ್ತೀಚಿಗಿನ ವರ್ಷಗಳಲ್ಲಿ ಅವರ ವ್ಯವಹಾರದಲ್ಲಿ ತುಂಬಾ ನಷ್ಟ ಉಂಟಾಗಿದ್ದರಿಂದ ಆರ್ಥಿಕ ಸಮಸ್ಯೆ ಎದುರಾಗಿತ್ತು.

ಇದು ನಿಜ...! ಆದರೆ ಹಿಂದೆ ಮಾಡಿದ್ದ ಪ್ರಮಾಣಕ್ಕಾಗಿ ಮಗಳಿಗೆ ಇಷ್ಟ ಇಲ್ಲದಿದ್ದರೂ ಹೆದರಿಸಿ, ಆತ್ಮಹತ್ಯೆ ಮಾಡಿಕೊಳ್ಳುವ ಭಯ ಹುಟ್ಟಿಸಿ ಮದುವೆ ಮಾಡಿದ್ದರು. ಎಂತೆಂತಹ ಶ್ರೀಮಂತ ಸಂಬಂಧಗಳನ್ನು ಬಿಟ್ಟು ತಿರುಬೋಕಿ ರೀತಿ ಇರುವ ಮಧುಸೂದನನನ್ನು ವಿವಾಹವಾಗಬೇಕಾಗಿದೆಯಲ್ಲ ಎಂದು ಅತ್ತು ಗೋಳಾಡಿದ್ದಳು. ಬಾಹ್ಯ ರೂಪ ಚೆನ್ನಾಗಿಲ್ಲದ ಮತ್ತು ಸಂಪಾದನೆ ಸರಿಯಾಗಿಲ್ಲದ ಗಂಡ ಇವನು. ಇವನ ಬಗ್ಗೆ ಪ್ರೀತಿ, ಆಸಕ್ತಿ ಉಂಟಾಗಲು ಹೇಗೆ ಸಾಧ್ಯ?

ಇದೇ ಪ್ರಾರಬ್ಧಕರ್ಮ. ಅವಳು ಮನಪೂರ್ವಕವಾಗಿ ದಾಂಪತ್ಯ ಮಿಲನದಲ್ಲಿ ಸಹಕರಿಸುತ್ತಿರಲಿಲ್ಲ. ತಿಂಗಳಲ್ಲಿ ಒಂದೇ ಒಂದು ಸಲ ಮಾತ್ರ, ಅದೂ ಅವನು ಹತ್ತಾರು ಸಲ ಗೋಗರೆದು ಬೇಡಿಕೊಂಡರೆ, ಕಾಟಚಾರಕ್ಕೆ ಎಂಬಂತೆ ತೆರೆದುಕೊಳ್ಳುತ್ತಿದ್ದಳು.

ಪ್ರಣಯ, ಶೃಂಗಾರ, ರಸಿಕ ಆಟಗಳಿಗೆ ಅವಕಾಶ ಇಲ್ಲ. ಅವನು ಚುಂಬಿಸಲು ಪ್ರಯತ್ನಿಸಿದರೆ ಮುಖ ಬೇರೆ ಕಡೆ ತಿರುಗಿಸಿಕೊಳ್ಳುತ್ತಿದ್ದಳು ಮತ್ತು ಶೃಂಗಾರದಾಟ ಆಡಿದರೆ ರೇಗಿ, ಬೈದು ದೂರ ತಳ್ಳುತ್ತಿದ್ದಳು. ಇವಳಿಗೆ ಐಷಾರಾಮ ಬದುಕು ಬೇಕು. ಬಾಡಿಗೆ ಮನೆಯಲ್ಲಿರುವ ಪ್ರೈಮರಿ ಸ್ಕೂಲ್ ಟೀಚರ್. ಹೇಗೆ ತಾನೇ ಇವಳಿಗೆ ಶ್ರೀಮಂತಿಕೆಯ ವೈಭವ ಕೊಡಲು ಸಾಧ್ಯ?

ಈ ಕಾರಣದಿಂದಲೇ ಏನೋ ಇವಳು ರೇಗಾಡುತ್ತಿದ್ದಳು. ಬಿಸಿನೆಸ್ ಮಾಡಿ ಲಕ್ಷಲಕ್ಷ ಸಂಪಾದನೆ ಮಾಡಿ. ಈ ಟೀಚರ್ ಕೆಲಸ ಬಿಡಿ ಎಂದು ಆಗಾಗ ಹೇಳಿ ರೇಗಾಡುತ್ತಿದ್ದಳು. ಬುದ್ಧಿವಂತಿಕೆ ಮತ್ತು ವ್ಯವಹಾರ ಜ್ಞಾನ ಇಲ್ಲದ ಇವನು ಬದಲಾಗಲಿಲ್ಲ.

ಇವಳಿಗೆ ಈ ಬದುಕು ಬೇಸರದೊಂದಿಗೆ ಜಿಗುಪ್ಸೆ ಉಂಟು ಮಾಡಿದೆ. ಶ್ರೀಮಂತಿಕೆ ಕೊಡಲಾರದ ಗಂಡನಿಗೆ ಡೈವೋರ್ಸ್ ನೀಡಬೇಕು. ನನ್ನಂತ ಚೆಲುವೆನ ಯಾವ ಶ್ರೀಮಂತ ಬೇಕಾದರೂ ಮದುವೆ ಆಗುತ್ತಾನೆ ಎಂದು ಕೊಂಡಿದ್ದಳು. ಆದರೆ ಡೈವೋರ್ಸ್ ಸುಲಭವಲ್ಲ. ಅದು ಬೇಗ ಸಿಗುವುದಿಲ್ಲ.

ಅಸಹನೆ, ಅಸಮಾಧಾನ ಜಾಸ್ತಿಯಾಗಿ ಮಾನಸಿಕ ಸಮತೋಲನ ಕಳೆದುಕೊಂಡಿದ್ದಾಳೆ.

ಒಂದು ದಿನ ಬೆಳಿಗ್ಗೆ ಹತ್ತು ಗಂಟೆ ಸಮಯದಲ್ಲಿ ಕೊರಿಯರ್ ಪಾರ್ಸಲ್ ಬಂದಿತು.

ಅವಳಿಗೆ ಆಶ್ಚರ್ಯವಾಯಿತು. ದೊಡ್ಡಸೈಜಿನ ಬಾಕ್ಸ್ ಅನ್ನು ತುಂಬಾ ನೀಟಾಗಿ ಪ್ಯಾಕ್ ಮಾಡಲಾಗಿದೆ.

ನನಗ್ಯಾರು ಪಾರ್ಸಲ್ ಕಳಿಸಿದ್ದಾರೆ ಎಂದುಕೊಂಡೇ ಸೈನ್ ಮಾಡಿ ತೆಗೆದುಕೊಂಡು ಫ್ರಂ ಅಡ್ರೆಸ್ ನೋಡಿದಳು.

18ನೇ ಕ್ರಾಸ್, ಮಲ್ಲೇಶ್ವರಂ - ಬೆಂಗಳೂರು.

ಫೋನ್ ನಂಬರ್ ಸಹ ಇದೆ. ಯಾರು ಈ ರಾಜೇಂದ್ರ ಬಾಬು? ನನಗ್ಯಾಕೆ ಪಾರ್ಸಲ್ ಕಳಿಸಿದ್ದಾರೆ? ಇದರಲ್ಲಿ ಏನಿದೆ ಎಂಬ ಕುತೂಹಲದಿಂದ ಓಪನ್ ಮಾಡಿದಳು. ಅವಳ ಮುಖ ಅರಳಿತು. ಕಣ್ಣುಗಳು ಮಿನುಗಿದವು. ಬಾಯಿಂದ ಉದ್ಗಾರ ಬಂದಿತು.

ಎರಡು ಸಾವಿರ ರೂಪಾಯಿ ಮುಖಬೆಲೆಯ ಐವತ್ತು ನೋಟುಗಳಿವೆ...! ಚಿನ್ನದ ಸರ ಇದೆ. ಎರಡು ಉಂಗುರಗಳಿವೆ. ಅವಳು ಮಾಡಿದ್ದೇನು? ಚಿನ್ನದ ಆಭರಣಗಳನ್ನು, ಆ ಬೀದಿಯಲ್ಲಿರುವ ಚಿನ್ನ-ಬೆಳ್ಳಿ ಮಾರಾಟ ಮಾಡುವ ಜ್ಯುಯಲರಿ ಶಾಪ್‌ನಲ್ಲಿ ಕೊಟ್ಟು ಪರೀಕ್ಷೆ ಮಾಡಿಸಿದಳು. ಎಲ್ಲಾ ಪ್ಯೂರ್ ಗೋಲ್ಡ್. ಬೆಲೆ ಮೂರು ಲಕ್ಷ ಆಗುತ್ತದೆ.

ಅವಳು ರೋಮಾಂಚನಗೊಳ್ಳುತ್ತಿದ್ದಾಳೆ ಮತ್ತು ಭಾವಪರವಶಳಾಗುತ್ತಿದ್ದಾಳೆ. ಮನೆಗೆ ಬಂದ ಕೂಡಲೇ ಹಣವನ್ನು ಎಣಿಸಿದಳು. ಅಬ್ಬ... ಲಕ್ಷ ರೂಪಾಯಿ ಹಣ ಇದೆ...!

ಫೋನ್‌ಕಾಲ್ ಬಂದಿತು. ಅವಳು ಅಟೆಂಡ್ ಮಾಡಿದಳು. ಅಪರಿಚಿತ ಗಂಡಸಿನ ಧ್ವನಿ.

“ಹಲೋ ಶ್ರೀಮತಿ ನಿರ್ಮಲ.”

“ಯಾರು... ಯಾರು ನೀವು?”

“ಈಗ ತಾನೇ ನಿನಗೆ ಪಾರ್ಸಲ್ ಕಳಿಸಿರುವ ರಾಜೇಂದ್ರಬಾಬು.”

ಆ ಕ್ಷಣ ಕಂಪಿಸಿದಳು.

ಅದು ಭಾವಪರವಶತೆಯ ಕಂಪನ.

ಅವಳೀಗ ಸಂತೋಷ ಮತ್ತು ಉತ್ಸಾಹದಿಂದ “ನೀವು... ನೀವು ಯಾರು ಅಂತ ನನಗೆ ಗೊತ್ತಿಲ್ಲ, ನನಗ್ಯಾಕೆ ಹಣ ಮತ್ತು ಚಿನ್ನದ ಆಭರಣಗಳನ್ನು ಕಳಿಸಿದ್ದೀರ” ಎಂದು ಕೇಳಿದಳು.

“ನಿನ್ನಂತಹ ಚೆಲುವೆಗೆ ಬಡತನ ಶೋಭೆ ಉಂಟು ಮಾಡುವುದಿಲ್ಲ. ನೀನು ಶ್ರೀಮಂತಿಕೆಯ ವೈಭವದಲ್ಲಿ ಬದುಕಬೇಕು. ಆಗ ನಿನ್ನ ಈಗಿನ ಸಹಜ ಸೌಂದರ್ಯಕ್ಕೆ ಮೆರುಗು ಬರುತ್ತದೆ.”

ಅವಳು ಪುಳಕಗೊಳ್ಳುತ್ತಿದ್ದಾಳೆ.

“ನಿರ್ಮಲ... ಇನ್ನು ಮುಂದೆ ನೀನು ಲಕ್ಷ, ಲಕ್ಷಗಳನ್ನು ಇಟ್ಟುಕೊಂಡು ಸುಖ ಮತ್ತು ವೈಭವದ ಜೀವನ ನಡೆಸುವ ಮಹಾರಾಣಿ ಆಗಿರುತ್ತೀಯ.”

ಅವಳಿಗೆ ಗಾಬರಿಯಾಗಿದೆ.

ತೀವ್ರ ಗೊಂದಲ ಕಾಡುತ್ತಿದೆ.

“ನಿರ್ಮಲ ನಾನು ನಿನ್ನ ಸೌಂದರ್ಯದ ಆರಾಧಕ. ನನಗೊಂದು ಆಸೆ ಇದೆ.”

ಅವಳು ಕೆಂಪಾದಳು. ಅವರು ಹೇಳಿದ್ದೇನು?

“ನೀನು ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ಗೆಲ್ಲಬೇಕು. ನೀನು ಮಿಸ್ ಇಂಡಿಯಾ ಆಗಬೇಕು. ನಿನ್ನನ್ನು ಸೌಂದರ್ಯ ಸ್ಪರ್ಧೆಯಲ್ಲಿ ಗೆಲ್ಲಿಸುವುದೇ ನನ್ನ ಮುಂದಿನ ಗುರಿ.”

ಅವಳಿಗೆ ಪರಮಾಶ್ಚರ್ಯದೊಂದಿಗೆ ತುಂಬಾ ಸಂತೋಷ ಆಗುತ್ತಿದೆ. ಆದರೂ ಅನುಮಾನ ಕಾಡಿತು. ಪ್ರಶ್ನೆ ಮಾಡಿದಳು.

“ನನಗೆ ಮದುವೆ ಆಗಿದೆ. ನನ್ನಂತಹವಳು ಈ ಸೌಂದರ್ಯ ಸ್ಪರ್ಧೆಯಲ್ಲಿ ಭಾಗವಹಿಸಲು ಹೇಗೆ ಸಾಧ್ಯ?”

“ನನ್ನಿಂದ ಸಾಧ್ಯ. ನಾನು ನನ್ನ ರಾಜಕೀಯ ಪ್ರಭಾವದ ಜೊತೆಗೆ ಲಕ್ಷಗಳ ಲೆಕ್ಕದಲ್ಲಿ ಹಣ ಖರ್ಚು ಮಾಡ್ತೀನಿ. ಎಲ್ಲ ಆಗುತ್ತೆ.”

ಅವಳು ಕನಸು ಕಾಣುತ್ತಿದ್ದಾಳೆ. ನಾನು ಭಾರತದ ಸುಂದರಿ! ಈ ಕಲ್ಪನೆ ಪುಳಕಗೊಳಿಸುತ್ತಿದೆ.

ಅವಳು ಸಾವರಿಸಿಕೊಂಡ ನಂತರ “ನೀವು ನನ್ನಂತಹ ಅಪರಿಚಿತಳ ಬಗ್ಗೆ ಇಷ್ಟೊಂದು ಆಸಕ್ತಿ ಹೊಂದಲು ಕಾರಣ ಏನು?”

“ನಿನ್ನ ಸೌಂದರ್ಯ.”

ಅವಳು ಕೆಂಪಾದಳು. ಗಾಬರಿ ಸಹ ಉಂಟಾಯಿತು.

“ನಿನ್ನಂತ ಸೌಂದರ್ಯವತಿಗೆ ಮಧುಸೂದನ ತಕ್ಕ ಗಂಡ ಅಲ್ಲ. ನೀನು ಬಯಸಿದ ರೀತಿ ಶ್ರೀಮಂತಿಕೆಯ ವೈಭವದಲ್ಲಿ ತೇಲಾಡಿಸುತ್ತೀನಿ. ಸೈಟು, ಮನೆ, ಲಕ್ಷಗಳ ಬ್ಯಾಂಕ್ ಬ್ಯಾಲೆನ್ಸ್ ಎಲ್ಲಾ ಕೊಡ್ತೀನಿ.”

ಅವಳು ಚಡಪಡಿಸುತ್ತಾ “ಅಂದರೆ... ಅಂದರೆ ನೀವು... ನೀವು ನನ್ನನ್ನು...” ಎಂದು ತಡವರಿಸಿದಳು.

“ಅದರ ಬಗ್ಗೆ ಈಗಲೇ ತಲೆಕೆಡಿಸಿಕೊಳ್ಳಬೇಡ ಚೆಲುವೆ. ನಿನಗೆ ನನ್ನ ಬಗ್ಗೆ ಮತ್ತು ನಿನಗೆ ಆಗಾಗ ಕೊಡುವ ಹಣ ಮತ್ತು ಚಿನ್ನದ ಆಭರಣಗಳ ಮೇಲೆ ವಿಶ್ವಾಸ ಉಂಟಾಗಲಿ. ನನಗೆ ತಿಳಿದಿದೆ. ನಿನಗೆ ಗಂಡನಿಂದ ದಾಂಪತ್ಯ ಸುಖ ಸಿಕ್ಕಿಲ್ಲ. ಯಾಕೆ ಅಂದರೆ ಅವನ ಬಗ್ಗೆ ನಿನಗೆ ಆಸಕ್ತಿ ಇಲ್ಲ. ನಿನಗೆ ಶ್ರೀಮಂತಿಕೆಯ ಜೊತೆಗೆ, ನೀನು ಸಂತೋಷದಿಂದ ಒಪ್ಪಿಕೊಂಡು ಸಹಕರಿಸಿದರೆ ಬಲು ಅದ್ಭುತ ರೀತಿಯಲ್ಲಿ ಮತ್ತು ನೀನು ಈ ಹಿಂದೆ ಎಂದೂ ಅನುಭವಿಸಿರದ ರೀತಿಯಲ್ಲಿ ಕಾಮಸುಖ ಕೊಡುತ್ತೇನೆ. ಆ ಶಕ್ತಿ ನನಗೆ ಇದೆ.”

ಅವಳ ಮೈ ಬಿಸಿಯಾಗುತ್ತಿದೆ.

ರಾಜೇಂದ್ರಬಾಬು ಹೇಗಿದ್ದಾನೆ? ಪ್ರಾಯದ ಯುವಕನೆ? ಮನ್ಮಥ ರೂಪದವನ?

“ನಿರ್ಮಲ... ಮಿಲನದ ಸುಖಕ್ಕೆ ನಾನು ಆತುರ ಮಾಡೋಲ್ಲ. ನೀನು ಮಾನಸಿಕವಾಗಿ ಸಿದ್ಧಳಾದ ಮೇಲೆ ರತಿಪಲ್ಲಂಗದ ವ್ಯವಸ್ಥೆ ಮಾಡ್ತೀನಿ.”

ಫೋನ್ ಲಿಂಕ್ ಕಟ್ ಆಗಿದೆ. ಅವಳು ಸುಖದ ಕಲ್ಪನೆಯಲ್ಲಿ ಮೈಮರೆತಿದ್ದಾಳೆ. ಆ ರಾತ್ರಿ ನಿದ್ದೆ ಮಾಡಲಿಲ್ಲ. ಮರುದಿನ ಬೆಳಿಗ್ಗೆ ಮತ್ತೊಂದು ಪಾರ್ಸಲ್ ಬಂದಿತು.

ಫ್ರಂ ರಾಜೇಂದ್ರಬಾಬು!

ಬೆಲೆಬಾಳುವ ಬಲು ಸೊಗಸಾಗಿರುವ ರೇಷ್ಮೆ ಸೀರೆ... ಚಿನ್ನದ ಬಳೆಗಳು. ಎರಡು ಲಕ್ಷ ಹಣ...! ಅವಳು ರಾತ್ರಿ ಪೂರ್ತಿ ಆಲೋಚನೆ ಮಾಡಿ ಆ ತೀರ್ಮಾನಕ್ಕೆ ಬಂದಿದ್ದಳು.

ಆ ತೀರ್ಮಾನ ಏನು? ನನಗೋಸ್ಕರ... ಈ ನನ್ನ ಚೆಲುವಿನ ಕಾರಣದಿಂದ ಇಷ್ಟೆಲ್ಲಾ ಕೊಡುತ್ತಿರುವ ರಾಜೇಂದ್ರಬಾಬು ಅವರಿಗೆ ನಾನು ಸರೆಂಡರ್ ಆಗಲೇಬೇಕು.

ಅವರು ಹೇಳಿದ್ದೇನು?

ಈ ಹಿಂದೆ ಎಂದೂ ಅನುಭವಿಸದೆ ಇರುವ ಕಾಮಸುಖವನ್ನು ಅಮೃತ ರೀತಿಯಲ್ಲಿ ಕೊಡುತ್ತೇನೆ ಮತ್ತು ಸುಖ ಎಂಬ ಸ್ವರ್ಗದಲ್ಲಿ ತೇಲಾಡಿಸುತ್ತೇನೆ.

ಶ್ರೀಮಂತಿಕೆಯೊಂದಿಗೆ ಬಲು ವಿಶಿಷ್ಟ ರೀತಿಯಲ್ಲಿ ಸುಖ ಸಿಗುತ್ತದೆ. ನನಗೆ ಈ ಎರಡೂ ಬೇಕು. ಗಂಡ ನೆನಪಾದನು. ಇಷ್ಟೆಲ್ಲಾ ಹಣ, ಚಿನ್ನ ಹೇಗೆ ಬಂತು ಅಂತ ಕೇಳಿದರೆ ಏನು ಹೇಳಲಿ? ಅವಳು ಈಗ ತಾತ್ಸಾರ ಭಾವದಿಂದ ನಗಾಡಿದಳು. ಗಂಡನಿಗೆ ಬೆಲೆ ಕೊಡಲಾರೆ. ಅವನಿಗೆ ಹೆದರಲಾರೆ. ಒಂದು ವೇಳೆ ಗೊತ್ತಾದರೆ ಆಗಲಿ. ಬಟ್ ಐ ಡೋಂಟ್ ಕೇರ್...! ಫೋನ್ ಕಾಲ್ ಬಂದಿತು! ಅವಳು ಪುಳಕಗೊಂಡಳು.

ರಾಜೇಂದ್ರಬಾಬು ಮಾತಾಡುತ್ತಿದ್ದಾನೆ.

“ನಿರ್ಮಲ... ಎರಡು ಲಕ್ಷ ಹಣ ಮತ್ತು ಚಿನ್ನದ ಆಭರಣ ಬಂತು ತಾನೇ?”

ಅವಳು ಮಾದಕವಾಗಿ ನಗಾಡಿದಳು.

“ಹೂಂ ಎಲ್ಲಾ ಬಂತು.”

“ನಾಳೆ ದಿನದ ವಿಶೇಷ ಏನು ಗೊತ್ತಾ?

ಅವಳು ನಗುತ್ತಾ “ಗೊತ್ತಿಲ್ಲ.”

“ಫೆಬ್ರವರಿ ಹದಿನಾಲ್ಕು.”

“ನಾಳೆ ಫೆಬ್ರವರಿ ಹದಿನಾಲ್ಕು ಅಂತ ನಂಗೆ ಗೊತ್ತಿದೆ. ಆದರೆ...”

“ವಿಶೇಷತೆ ಏನು ಅಂತ ಗೊತ್ತಿಲ್ವ?”

“ಇಲ್ಲ... ವಿಶೇಷತೆ ಏನು?”

“ಪ್ರೇಮಿಗಳ ದಿನ... ಲವರ್ಸ್‌ಡೇ ಮೈ ಡಿಯರ್ ನಿರ್ಮಲ.”

ಅವಳು ಪುಳಕಗೊಂಡಳು.

ಮುಖ ಕೆಂಪಾಯಿತು.

“ಮೈಡಿಯರ್ ನಿಮ್ಮಿ... ನಿರ್ಮಲ... ನಾಳೆ ನಾವು ಲವರ್ಸ್‌ಡೇ ಸೆಲಬರೇಟ್ ಮಾಡ್ಬೇಕು. ಸೋ... ನಾಳೆ ಪೂರ್ತಿ ನೀನು ನನ್ನ ಜೊತೆ ಇರ್ಬೇಕು.”

ಅವಳು ಗಾಬರಿ, ನಾಚಿಕೆಯಿಂದ “ಅದು... ಅದು... ನನ್ನ ಗಂಡ...”

“ಗಂಡನಿಗೆ ಗೋಲಿ ಹೊಡಿ. ನಾಳೆ ನಮ್ಮಿಬ್ಬರ ಪ್ರೀತಿ-ಪ್ರಣಯ-ಶೃಂಗಾರ ಮಿಲನದ ನೆನಪಿಗಾಗಿ ಇಪ್ಪತ್ತು ಲಕ್ಷ ರೂಪಾಯಿ ಕ್ಯಾಶ್ ಕೊಡ್ತೀನಿ. ನಿನ್ನ ಜೇನು ತುಟಿಗಳಿಗೆ ಕಿಸ್ ಮಾಡುವ ಮೊದಲು, ನಿನ್ನ ಸುಂದರವಾದ, ಬಲು ಮಾಟವಾದ ಎದೆ ಸೌಂದರ್ಯ ನನ್ನ ಕೈ ತುಂಬುವ ಮೊದಲು ಇಪ್ಪತ್ತು ಲಕ್ಷ ನಿನ್ನ ಕೈ ಸೇರುತ್ತದೆ. ನೀನು ಹಣವನ್ನು ಲೆಕ್ಕ ಮಾಡಿಕೊಂಡ ಮೇಲೆ, ನಿನ್ನ ಸೀರೆ, ರವಿಕೆ, ಬ್ರಾ, ಎಲ್ಲಾ ಸಡಿಲಿಸುತ್ತೇನೆ.”

ಅವಳ ಮುಖ ಕಡು ಕೆಂಪಾಯಿತು. ಇಪ್ಪತ್ತು ಲಕ್ಷದ ನೆನಪಾಗಿ ಅವಳು ಆ ಕ್ಷಣಗಳಲ್ಲಿ ರೋಮಾಂಚನಗೊಂಡಳು.

ಅವಳು ಮಾನಸಿಕವಾಗಿ ಸಿದ್ಧಳಾದಳು. ಗಂಡನಿಗೆ ಏನಾದರೂ ಸುಳ್ಳು ಹೇಳಿ ನಾಳೆ ಪೂರ್ತಿ ಆ ರಸಿಕನಿಗೆ ರತಿಸುಖ ಕೊಡುತ್ತಾ, ನಾನೂ ಸಹ ಅವನಿಂದ ಸುಖ ಅಭವಿಸಲೇಬೇಕು ಎಂದುಕೊಂಡಳು.

“ನಿಮ್ಮಿ... ನಿರ್ಮಲ...”

ಅವಳು ಕಲ್ಪನಾಲೋಕದಿಂದ ಹೊರಗೆ ಬಂದು “ಹೂಂ... ಹೇಳಿ ರಾಜೇಂದ್ರಬಾಬು” ಎಂದಳು.

“ನನಗೆ ನಿನ್ನ ಸೌಂದರ್ಯದ ಬಗ್ಗೆ ತುಂಬಾ ಆಸೆ, ಕನಸುಗಳಿವೆ. ನನ್ನ ಆಸೆ, ಬಯಕೆಗಳನ್ನು ತೀರಿಸುತ್ತೀಯ ತಾನೆ?”

ಅವಳು ನಾಚಿಕೆಯಿಂದಲೇ “ಹೂಂ... ತೀರಿಸುತ್ತೇನೆ” ಎಂದಳು.

“ನಾನು ಹೇಳಿದಂತೆ ರತಿಯಾದರೆ, ನಿನ್ನ ಕೋಮಲವಾದ ಕೈಯಿಂದ ನನ್ನ ಬೆತ್ತಲೆ ಮೈ ಮಸಾಜ್ ಮಾಡಬೇಕು. ನಿನ್ನ ನಾಲಿಗೆ, ತುಟಿಗಳು ನನ್ನ ದೇಹದ ಎಲ್ಲಾ ಕಡೆ ಸ್ಪರ್ಶಿಸಬೇಕು. ನಿನ್ನ ನಾಲಿಗೆಯ ತೇವ... ಎಂಜಲು ನನ್ನ ಮೈ ತುಂಬಾ ಅಂಟಬೇಕು. ಹೇಳು... ಹೇಳು ನಿಮ್ಮಿ... ನಿನಗೆ ಐದು ಲಕ್ಷ ಜಾಸ್ತಿ ಕೊಡ್ತೀನಿ. ಈ ನನ್ನ ಚಪಲಗಳನ್ನು ತೀರಿಸುತ್ತೀಯ?”

☞14

13 ☜

ಅವಳಿಗೆ ಹೇಸಿಗೆ ಆಯಿತು. ಆದರೆ ವ್ಯಕ್ತಪಡಿಸಲಿಲ್ಲ. ಇಪ್ಪತ್ತು ಲಕ್ಷದ ಜತೆಗೆ ಪುನಹ ಐದು ಲಕ್ಷ...!

"ಏ... ಚಿನ್ನ... ಯಾಕೆ ಮಾತಾಡುತ್ತಿಲ್ಲ? ನಿನಗೆ ಇಷ್ಟ ಇಲ್ವ?"

ಅವಳು ನಗುತ್ತಾ "ನೀವು ತುಂಬಾ ಪೋಲಿ ಅಂತ ಕಾಣುತ್ತೆ. ಆಗಲಿ... ಆಗಲಿ ನಾನು... ನಾನು" ಎಂದು ಮಾದಕವಾಗಿ ನಗಾಡಿದಳು.

ನಾಳಿನ ಪ್ರೋಗ್ರಾಂ ಬಗ್ಗೆ ಹೇಳಿದನು. ಅವಳು ಒಪ್ಪಿಕೊಂಡಳು. ಯಾವ ಸೀರೆ ಉಡಬೇಕು ಮತ್ತು ಅವಳ ಮೇಕಪ್ ಹೇಗಿರಬೇಕು ಎಂದು ತಿಳಿಸಿದನು.

●●●

ಗಂಡನಿಗೆ ಸುಳ್ಳು ಹೇಳುವ ಸನ್ನಿವೇಶ ಬರಲಿಲ್ಲ. ಪ್ರೈಮರಿ ಶಾಲೆಯಿಂದ ಮಕ್ಕಳ ಜೊತೆ ಮೂರು ದಿನಗಳ ಕಾಲ ಟೂರ್ ಪ್ರೋಗ್ರಾಂಗೆ ಹೋಗಲೇಬೇಕಾಯಿತು.

ಅವಳು ಪುಳಕಗೊಂಡಳು.

ಗಂಡ ಮೂರು ದಿವಸ ಇರೋಲ್ಲ. ಈ ಅವಧಿಯಲ್ಲಿ ಶ್ರೀಮಂತ ರಸಿಕ ರಾಜೇಂದ್ರಬಾಬುಗೆ ರತಿಯಾಗಿ ಸುಖ ಕೊಡುತ್ತಾ, ಲಕ್ಷಗಳ ಲೆಕ್ಕದಲ್ಲಿ ಹಣವನ್ನು ಪೀಕಬೇಕು.

ಗಂಡ ಟೂರ್‌ಗೆ ಹೋದ ನಂತರ ಅವಳು ರೆಡಿಯಾದಳು. ಯಾವ ಸರ್ಕಲ್ ಹತ್ತಿರ ಬರಬೇಕು ಎಂದು ಮೊದಲೇ ತಿಳಿಸಿದ್ದರಿಂದ ಅವಳು ಹೊರಟಳು.

ಹೇಗಿದ್ದಾಳೆ ನಿರ್ಮಲ!

ಗ್ಲಾಮರಸ್ ಹೀರೋಯಿನ್ ರೀತಿ!

ಅವಳು ಆಟೋದಲ್ಲಿ ಶಿವಾನಂದ ಸರ್ಕಲ್ ಹತ್ತಿರ ಬಂದಳು.

'ಇಂಪೋಲಾ' ಕಾರು ಇವಳ ಸ್ವಾಗತಕ್ಕಾಗಿ ಕಾಯುತ್ತಿದೆ.

ಅವಳು ಕಾರಿನ ಹತ್ತಿರ ಬಂದಾಗ ಡ್ರೈವರ್ ಡೋರ್ ತೆಗೆದು "ಸಾಹೇಬರು... ಚೆನ್ನಾಪುರದಲ್ಲಿರುವ ಫಾರಂಹೌಸ್‌ನಲ್ಲಿ ಕಾಯುತ್ತಿದ್ದಾರೆ" ಎಂದನು.

"ತಲುಪಲು ಎಷ್ಟು ಹೊತ್ತಾಗುತ್ತೆ?"

"ಅರ್ಧಗಂಟೆ ಮೇಡಂ."

ಕಾರು ವೇಗವಾಗಿ ಹೋಗುತ್ತಿದೆ.

ಅವಳು ಚಡಪಡಿಸುತ್ತಿದ್ದಾಳೆ. ಆತಂಕ, ಗಾಬರಿಯ ಜತೆಗೆ ಒಂದು ರೀತಿಯಲ್ಲಿ ಸುಖದ ಕಲ್ಪನೆಯಿಂದ ಮೈ ಬಿಸಿ ಆಗುತ್ತಿದೆ. ಅವಳು ಈಗ ರಾಜೇಂದ್ರಬಾಬು ಹೇಗಿರಬಹುದು ಎಂಬುದರ ಬಗ್ಗೆ ಆಲೋಚನೆ ಮಾಡುತ್ತಿದ್ದಾಳೆ.

●●●

ಪ್ರಕೃತಿ ಸೌಂದರ್ಯದ ನಡುವೆ ಫಾರಂಹೌಸ್ ಭವ್ಯವಾಗಿ ಕಂಗೊಳಿಸುತ್ತಿದೆ. ಒಂದು ರೀತಿಯಲ್ಲಿ ಮಿನಿ ಅರಮನೆಯ ರೀತಿ ಇದೆ.

ರಮ್ಯ ರಮಣೀಯವಾಗಿದೆ. ಅವಳು ಬಂಗಲೆಯಲ್ಲಿರುವ ಗೆಸ್ಟ್‌ರೂಮಿನಲ್ಲಿ ಕುಳಿತಿದ್ದಾಳೆ. ಕೆಲಸಗಾರನೊಬ್ಬ ಬಂದು ತಿಂಡಿಯ ಜತೆ ಟೀ ತಂದಿಟ್ಟರು.

ಸ್ಪೆಷಲ್ ರವಾ ಇಡ್ಲಿ, ಮಸಾಲ ಉದ್ದಿನವಡೆ. ಅವಳು ತಿಂದು ಟೀ ಕುಡಿದಳು. ಆದರೆ ರಾಜೇಂದ್ರಬಾಬು ಇನ್ನೂ ಬಂದಿಲ್ಲ. ನನಗಾಗಿ ತೀವ್ರವಾಗಿ ಹಂಬಲಿಸುತ್ತಿರುವ ಅವನು ಯಾಕೆ ತಡ ಮಾಡುತ್ತಿದ್ದಾನೆ?

ಆಗ ಕೆಲಸಗಾರ ಬಂದು "ಮೇಡಂ... ಸಾಹೇಬರು ಸೆಕೆಂಡ್ ಫ್ಲೋರ್‌ನಲ್ಲಿರುವ ಬೆಡ್‌ರೂಮಲ್ಲಿ ನಿಮಗಾಗಿ ಕಾಯುತ್ತಿದ್ದಾರೆ" ಎಂದಾಗ ಅವಳು ಉತ್ಸಾಹದಿಂದ ಹೊರಟಳು.

ಲಿಫ್ಟ್ ಮೂಲಕ ಅವಳನ್ನು ಅಲ್ಲಿಗೆ ಕರೆದುಕೊಂಡು ಬಂದ ಕೆಲಸಗಾರ ಅವಳು ಒಳಗೆ ಹೋದ ನಂತರ ಡೋರ್ ಲಾಕ್ ಮಾಡಿಕೊಂಡನು.

ಅವಳು ಪರವಶಳಾಗಿದ್ದಾಳೆ.

ಸ್ಟಾರ್ ಹೋಟೆಲ್‌ನ ವೈಭವ, ಅನುಕೂಲ ಮತ್ತು ಅಲಂಕರಣಗಳಿಂದ ಬೆಡ್‌ರೂಮ್ ಕಂಗೊಳಿಸುತ್ತಿದೆ.

ಡೈನಿಂಗ್ ಟೇಬಲ್ ಮೇಲೆ ಬಾರ್ ಅಂಡ್ ರೆಸ್ಟೋರೆಂಟ್ ಕಂಡಿತು.

ಅವಳು ಗಾಬರಿಯಾದಳು. ಈ ಶ್ರೀಮಂತ ಕುಡಿದು ಅಮಲೇರಿಸಿಕೊಂಡು ನನ್ನ ಮೇಲೆ ಕಾಮದ ಆಕ್ರಮಣ ಮಾಡುತ್ತಾನಾ? ಇದು ನಿಜವೆ? ಅವಳು ಆ ಶ್ರೀಮಂತನಿಗಾಗಿ ಉದ್ವಿಗ್ನಳಾಗಿ ಕಾಯುತ್ತಿದ್ದಾಳೆ. ಬೆಡ್‌ರೂಮಲ್ಲಿ ಒಳಮುಖವಾಗಿ ಪ್ರವೇಶಿಸಲು ಅನುಕೂಲ ಆಗುವ ರೀತಿ ಮತ್ತೊಂದು ರೂಮಿದೆ. ಆ ರೂಮಿನ ಡೋರ್‌ಲಾಕ್ ಓಪನ್ ಆಯಿತು. ಅವಳು ಕುತೂಹಲ, ಆತುರದಿಂದ ನೋಡಿದಳು. ರಾಜೇಂದ್ರಬಾಬು ಬರುತ್ತಿದ್ದಾನೆ.

●●●

ಒಂದು ದಿವಸ ಪೂರ್ತಿ ಕಳೆದ ನಂತರ ನಿರ್ಮಲ ಮನೆಗೆ ಬಂದಿದ್ದಾಳೆ. ಅವಳನ್ನು ಕಾರಲ್ಲಿ ಮನೆಗೆ ಡ್ರಾಪ್ ಮಾಡಲಾಗಿದೆ. ಬಂದ ಕೂಡಲೇ ಸ್ನಾನ ಮಾಡಿ ಟೀ ಕುಡಿದಳು.

ಬೆಡ್‌ರೂಮಲ್ಲಿ ಮಲಗಿದ್ದಾಳೆ. ಅವಳಿಗೆ ನಿದ್ದೆ ಬಂದಿಲ್ಲ. ಬರಲು ಸಾಧ್ಯವೇ ಇಲ್ಲ. ಅವಳು ಸಣ್ಣಗೆ ನಡುಗುತ್ತಿದ್ದಾಳೆ. ಅವಳಿಗೆ ಆಘಾತವಾಗಿದೆ. ಇವಳು ಅಂದುಕೊಂಡಂತೆ ಏನೂ ನಡೆದಿರಲಿಲ್ಲ ಎಂದು ಹೇಳಬಹುದು. ಅಲ್ಲಿ ನಡೆದದ್ದೇ ಬೇರೆ!

●●●

ರಾಜೇಂದ್ರಬಾಬು ಇವಳ ಹತ್ತಿರ ಬಂದನು. ಅವಳ ಮುಖ ಬಿಳುಚಿಕೊಂಡಿತು. ರಾಜೇಂದ್ರಬಾಬು ವಿಲಕ್ಷಣವಾಗಿ ವಿಚಿತ್ರವಾಗಿ, ಅಸಹಜ ರೀತಿಯಲ್ಲಿ ಮತ್ತು ಮಾನಸಿಕ ವಿಲಕ್ಷಣತೆ ಇರುವ ವ್ಯಕ್ತಿಯಂತೆ ವರ್ತಿಸಿದ್ದನು.

ಗಹಿಗಹಿ ನಗಾಡಿದ್ದನು.

"ನಿಮ್ಮಿ... ನನ್ನ ನಿಮ್ಮಿ" ಎನ್ನುತ್ತಾ ಅವಳ ಮುಖ ಮುದ್ದಾಡಿ ಮೈ ಸವರಿದ್ದನು. ಅವಳ ಜೇನು ತುಟಿಗಳನ್ನು ತುಂಬಾ ಹೊತ್ತು ಚಪ್ಪರಿಸಿದ್ದನು.

ಅಷ್ಟೇ ಕಾಮದಾಟ!

ಅವನ ವರ್ತನೆ ಬದಲಾಗಿತ್ತು.

ಹುಚ್ಚನ ರೀತಿಯಲ್ಲಿ ನಗುತ್ತಾ ಡ್ಯಾನ್ಸ್ ಮಾಡಿದ್ದನು. ಅವಳ ಎದುರಿಗೆ ಬಂದು "ನಿನ್ನ ಸೌಂದರ್ಯ ಅನುಭವಿಸಲು ಈ ಆಟ ಆಡಲಿಲ್ಲ, ಯಾಕೆ ಗೊತ್ತಾ" ಎಂದು ಸರ್ರನೆ ತನ್ನ ಕೆಳ ಉಡುಪು ಸಡಿಲಿಸಿ ದರ್ಶನ ಮಾಡಿದನು.

ಅವಳು ಬೆಚ್ಚಿಬಿದ್ದಳು. ಮುಖ ಅಸಹ್ಯ, ಹೇಸಿಗೆಯಿಂದ ಬಿಳುಚಿಕೊಂಡಿತು. ಆ ದೃಶ್ಯ ನೋಡಲಾರದೆ ಕಣ್ಣುಗಳನ್ನು ಮುಚ್ಚಿಕೊಂಡಳು.

ದೃಶ್ಯ ಬದಲಾಯಿತು. ಅವಳನ್ನು ಎತ್ತಿಕೊಂಡು ತಿರುಗುತ್ತಾ ಡ್ಯಾನ್ಸ್ ಮಾಡಿದನು. ಅವಳನ್ನು ಬೆತ್ತಲೆಗೊಳಿಸಿದನು. ಬೆತ್ತಲೆ ಡ್ಯಾನ್ಸ್ ಮಾಡಿದನು.

ಪ್ರತ್ಯೇಕ ದೃಶ್ಯ ಏನು? ಅವಳನ್ನು ಬೆತ್ತಲಾಗಿ ನಿಲ್ಲಿಸಿ ಡ್ಯಾನ್ಸ್ ಮಾಡುವಂತೆ ಹೇದರಿಸಿದನು. ಅವಳು ಒಪ್ಪಲಿಲ್ಲ. ನಾಗರ ಬೆತ್ತ ಕೈಗೆ ಎತ್ತಿಕೊಂಡು ವಿಲಕ್ಷಣವಾಗಿ ಆಡುತ್ತಾ ಕುಣಿದಾಡಿದನು. ಬೆತ್ತ ಬೀಸುವ ರೀತಿ ಆಡಿದನು. ವಿಕೃತವಾಗಿ ನಗಾಡಿದನು.

ಅವಳು ಬೆತ್ತಲೆ ನರ್ತನ ಮಾಡಿದಳು. ಅವಳ ತಲೆಕೂದಲಿಗೆ ಕೈ ಹಾಕಿ ಎಳೆದುಕೊಂಡು ಬೇರೊಂದು ಕಡೆ ಬಂದು ಪರದೆ ತೆಗೆದನು. ಹತ್ತಾರು ಮಂದಿ ಗೃಹಿಣಿಯರು ಬೆತ್ತಲೆ ಡ್ಯಾನ್ಸ್ ಮಾಡುತ್ತಿರುವ ವೀಡಿಯೋ ದೃಶ್ಯ ಅಲ್ಲಿರುವ ಟಿ.ವಿ.ಯಲ್ಲಿ ಬರುತ್ತಿದೆ. ಅವನು ಪುರುಷತ್ವ ಕಳೆದುಕೊಂಡಿರುವ ವಿಲಕ್ಷಣ ಮನೋರೋಗಿ. ಬಡತನದಲ್ಲಿರುವ, ಗಂಡನಿಂದ ಅತೃಪ್ತರಾಗಿರುವ ಗೃಹಿಣಿಯರನ್ನು ಕರೆಸಿಕೊಳ್ಳುತ್ತಿದ್ದನು. ಅವರಿಗೆ ಕೊರಿಯರ್ ಮೂಲಕ ಹಣ, ಚಿನ್ನ ಕಳಿಸುತ್ತಿದ್ದನು. ಅವರು ಬೇರೆಗಾಗಿ ಬಂದಾಗ ವಿಲಕ್ಷಣ ಆಟ ಆಡುತ್ತಿದ್ದನು.

●●●

ಫೋನ್ ಕಾಲ್ ಬಂದಿತು. ರಾಜೇಂದ್ರಬಾಬು ಅವಳಿಗೆ ವೀಡಿಯೋ ದೃಶ್ಯ ವಾಟ್ಸಾಪ್ ಮಾಡಿದ್ದಾನೆ. ಅವಳೊಬ್ಬಳೇ ಬೆತ್ತಲಾಗಿ ಡ್ಯಾನ್ಸ್ ಮಾಡುತ್ತಿರುವ ದೃಶ್ಯವನ್ನು ಸೆರೆ ಹಿಡಿದಿದ್ದಾನೆ ಮತ್ತು ಬ್ಲ್ಯಾಕ್‌ಮೇಲ್ ಮಾಡಿದ್ದಾನೆ.

ಅವನು ಕೊಟ್ಟಿರುವ ಲಕ್ಷಗಳ ಹಣ, ಚಿನ್ನದ ಆಭರಣಗಳು ಮತ್ತು ಬೆಲೆಬಾಳುವ ರೇಷ್ಮೆ ಸೀರೆ ವಾಪಸ್ ಕೊಡಬೇಕು. ಇಲ್ಲದಿದ್ದರೆ ಈ ವೀಡಿಯೋ ದೃಶ್ಯ ಬಹಿರಂಗ ಆಗುತ್ತದೆ. ಅವಳಿಗೆ ಸತ್ಯ ತಿಳಿಯಿತು.

ಇಲ್ಲಿಯತನಕ ಸುಮಾರು ಇಪ್ಪತ್ತು ಮಂದಿ ಗೃಹಿಣಿಯರ ಬದುಕಲ್ಲಿ ಇಂತಹ ವಿಲಕ್ಷಣ-ಹುಚ್ಚಾಟ ಆಡಿದ್ದಾನೆ. ನಿರ್ಮಲ ಅವನು ಕೊಟ್ಟಿದ್ದನ್ನೆಲ್ಲಾ ವಾಪಸ್ ಕೊಟ್ಟಳು.

ಗಾಡ್ ಈಸ್ ಗ್ರೇಟ್! ಅವಳ ತಂಟೆಗೆ ಈ ವಿಲಕ್ಷಣ ಶ್ರೀಮಂತ ಬರಲಿಲ್ಲ. ನಿರ್ಮಲ್ ನಾಲ್ಕು ದಿನಗಳ ಕಾಲ ಮಾನಸಿಕ ಸಮತೋಲನ ಕಳೆದುಕೊಂಡಿದ್ದಳು. ಇವಳಂತೆ ಹತ್ತಾರು ಗೃಹಿಣಿಯರು ಇವನ ವಿಕೃತ ಆಟಕ್ಕೆ ಬಲಿಯಾಗಿದ್ದಾರೆ. ☯

## ಚಡಚಣ ಎಸ್‌ಬಿಐ ದರೋಡೆ ಕೇಸ್

# ಬ್ಯಾಂಕ್ ದರೋಡೆಕೋರರಿಗೆ ಗನ್ ಕೊಟ್ಟವರು ಅಂದರ್!


ಬಂಧಿತ ಆರೋಪಿಗಳು

ಕಳೆದ ಸೆಪ್ಟೆಂಬರ್ 16ರಂದು ಸಂಜೆ 6 ಗಂಟೆ ಸುಮಾರಿಗೆ ವಿಜಯಪುರ ಜಿಲ್ಲೆಯ ಭೀಮಾತೀರದ ಚಡಚಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ನಡೆದಿದ್ದ ದರೋಡೆ ಕೇಸ್ ಸಂಬಂಧ ಬಿಹಾರ ಮೂಲದ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತರಿಂದ 9 ಕೆಜಿ. ಚಿನ್ನ, 86 ಲಕ್ಷರೂ. ನಗದನ್ನು ಪೊಲೀಸರು ರಿಕವರಿ ಮಾಡಿದ್ದಾರೆ.




ಚಡಚಣ ಪಟ್ಟಣದಲ್ಲಿ ನಡೆದಿದ್ದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ರಾಬರಿ ಕೇಸ್ ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದು ಪ್ರಕರಣ ಸಂಬಂಧ ಬಿಹಾರ ಮೂಲದ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ. ಬಿಹಾರ ಮೂಲದ ರಾಕೇಶ್ ಕುಮಾರ್ ಸಹಾನಿ (22), ರಾಜಕುಮಾರ್ ಪಾಸ್ವಾನ್ (21) ಮತ್ತು ರಕ್ಷಕ್‌ಕುಮಾರ್ ಮಾತೋ (21) ಬಂಧಿತ ಆರೋಪಿಗಳಾಗಿದ್ದು, ಬಂಧಿತರು ಬ್ಯಾಂಕ್ ದರೋಡೆ ಮಾಡಿದ್ದ ಆರೋಪಿಗಳಿಗೆ ಗನ್ ಪೂರೈಕೆ ಮಾಡಿದ್ದರು ಎಂಬುದು ಗೊತ್ತಾಗಿದೆ.

ಕಳೆದ ಸೆಪ್ಟೆಂಬರ್ 16ರಂದು ಸಂಜೆ 6 ಗಂಟೆ ಸುಮಾರಿಗೆ ವಿಜಯಪುರ ಜಿಲ್ಲೆಯ ಭೀಮಾತೀರದ ಚಡಚಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ದರೋಡೆ ನಡೆದಿತ್ತು. ಗನ್ ಸಮೇತ ಬ್ಯಾಂಕಿಗೆ ನುಗ್ಗಿದ್ದ ಮೂವರು ದರೋಡೆಕೋರರು ಬ್ಯಾಂಕ್ ಮ್ಯಾನೇಜರ್, ಸಿಬ್ಬಂದಿ, ಗ್ರಾಹಕರನ್ನ ಕಟ್ಟಿಹಾಕಿ 20 ಕೆಜಿ ಚಿನ್ನಾಭರಣ, 1.50 ಕೋಟಿ ನಗದು ದೋಚಿ ಪರಾರಿಯಾಗಿದ್ದರು. ಮಹಾರಾಷ್ಟ್ರದ ಮಂಗಳವೇಡ ತಾಲೂಕಿನ ಹುಲಜಂತಿ ಮೂಲಕ ಪರಾರಿಯಾಗುತ್ತಿದ್ದಾಗ ದರೋಡೆಕೋರರ ಕಾರು ಬೈಕ್‌ಗೆ ಡಿಕ್ಕಿಯಾಗಿ ಗಲಾಟೆ ನಡೆದಿತ್ತು. ಬಳಿಕ ಖದೀಮರು ಅಲ್ಲಿಯೇ ಕಾರು ಬಿಟ್ಟು ಸ್ಥಳೀಯರನ್ನ ಹೆದರಿಸಿ ಪರಾರಿಯಾಗಿದ್ದರು. ಪ್ರಕರಣದ ಆರೋಪಿಗಳಿಗಾಗಿ ಹುಡುಕಾಟ ನಡೆಸಿದ್ದ ಪೊಲೀಸರು, ಈಗ ಮೂರು ಆರೋಪಿಗಳನ್ನ ಬಂಧಿಸಿದ್ದಾರೆ. ದರೋಡೆಯಾಗಿದ್ದ 20 ಕೆಜಿ ಚಿನ್ನಾಭರಣ ಪೈಕಿ 9 ಕೆಜಿ ಚಿನ್ನ ಹಾಗೂ 1.50 ಕೋಟಿ ನಗದು ಪೈಕಿ 86 ಲಕ್ಷ ನಗದನ್ನ ವಶಕ್ಕೆ ಪಡೆಯಲಾಗಿದೆ.

ಇದಲ್ಲದೆ ಕಳೆದ ಮೇ 25ರಂದು ಬಸವನಬಾಗೇವಾಡಿ ತಾಲೂಕಿನ ಮನಗೂಳಿ ಪಟ್ಟಣದಲ ಕೆನರಾ ಬ್ಯಾಂಕ್‌ನಲ್ಲಿ 58 ಕೆಜಿ. ಚಿನ್ನಾಭರಣ, 5 ಲಕ್ಷ ರೂಪಾಯಿ ನಗದು ಕಳ್ಳತನ ನಡೆದಿತ್ತು. ಖತರ್ನಾಕ್ ಕಳ್ಳರು ಚಿನ್ನಾಭರಣಗಳನ್ನ ಕರಗಿಸಿ ಗಟ್ಟಿ ಮಾಡಿದ್ದರು. ಆ ಪೈಕಿ ಕೆಲವನ್ನು ಮಾರಿದ್ದರು. ಪ್ರಕರಣ ಬೆನ್ನಟ್ಟಿದ್ದ ಪೊಲೀಸರು ಕಳೆದ ತಿಂಗಳು 39 ಕೆಜಿ ಬಂಗಾರದ ಗಟ್ಟಿ ಹಾಗೂ 1.16 ಕೋಟಿ ನಗದನ್ನ ವಶಕ್ಕೆ ಪಡೆದಿದ್ದರು. ಈಗ ಮತ್ತೆ 4.8 ಕೆ.ಜಿ. ಚಿನ್ನದ ಗಟ್ಟಿ ಹಾಗೂ 22 ಲಕ್ಷ ನಗದನ್ನ ಜಪ್ತಿ ಮಾಡಿದ್ದಾರೆ. ಹೀಗಾಗಿ ಬ್ಯಾಂಕ್‌ನಿಂದ ಕಳುವಾಗಿದ್ದ 58 ಕೆಜಿ ಚಿನ್ನದ ಪೈಕಿ ಸುಮಾರು 43 ಕೆಜಿಯಷ್ಟು ಚಿನ್ನದ ಗಟ್ಟಿಗಳು ರಿಕವರಿಯಾಗಿವೆ. 1.38 ಕೋಟಿ ನಗದು ವಶ ಪಡಿಸಿಕೊಂಡಂತಾಗಿದೆ. ಪ್ರಕರಣ ಸಂಬಂಧ ಒಟ್ಟು 15 ಜನ ಆರೋಪಿಗಳನ್ನ ಬಂಧಿಸಲಾಗಿದೆ. ಕಳೆದ ಕೆಲ ದಿನಗಳ ಹಿಂದೆ ಮುದ್ದೇಬಿಹಾಳ ತಾಲೂಕು ನ್ಯಾಯಾಲಯದ ಜಡ್ಜ್ ನಿವಾಸದಲ್ಲಿ ನಡೆದಿದ್ದ ಕಳ್ಳತನ ಪ್ರಕರಣವನ್ನೂ ಪೊಲೀಸರು ಭೇದಿಸಿದ್ದಾರೆ. ☯

# ಕಾಂತಾರ ಕನಕಾವತಿ ರುಕ್ಮಿಣಿ ವಸಂತ್ ತಂದೆ ವೀರ ಯೋಧ ಗೊತ್ತೇ...

ರುಕ್ಮಿಣಿ ವಂಸತ್! ಕಾಂತಾರದ ಕನಕವತಿಯೂ ಹೌದು.. ಆ ಸಿನಿಮಾ ಮೂಲಕ ಪ್ರೇಕ್ಷಕರ ಕಣ್ಮನ ಸೆಳೆದ ಸೌಂದರ್ಯವತಿಯೂ ಹೌದು.. ಇಡೀ ಸಿನಿಮಾದಲ್ಲಿ ರುಕ್ಮಿಣಿಯ ಕ್ಯಾರೆಕ್ಟರ್ ಬಗ್ಗೆ ಸಾಕಷ್ಟು ಮೆಚ್ಚುಗೆ ಕೇಳಿ ಬರ್ತಿದೆ. ಕಾಂತಾರ ಸಿನಿಮಾ ನಾಯಕಿ ರುಕ್ಮಿಣಿ ವಂಸತ್‌ಗೆ ಕೆರಿಯರ್‌ನ ಬೆಸ್ಟ್ ಕ್ಯಾರೆಕ್ಟರ್ ಸಿಕ್ಕಿದೆ ಅಂದ್ರೆ ತಪ್ಪಾಗೋದಿಲ್ಲ...



2019ರಲ್ಲಿ ಬೀರಬಲ್ ಸಿನಿಮಾ ಮೂಲಕ ಸಿನಿರಂಗಕ್ಕೆ ಎಂಟ್ರಿ ಕೊಟ್ಟ ರುಕ್ಮಿಣಿ ಕನ್ನಡದ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ. ಈ ನಡುವೆ ವಿಜಯ್ ಸೇತುಪತಿ, ಶಿವಕಾರ್ತಿಕೇಯನ್ ಜೊತೆ ತಮಿಳಿನಲ್ಲೂ ಗುರುತಿಸಿಕೊಂಡಿದ್ದರು. ಅವರ ಅಭಿನಯಕ್ಕೆ ಅತಿಹೆಚ್ಚು ಒತ್ತು ನೀಡುವಂತೆ ಪಾತ್ರ ಸಿಕ್ಕಿರೋದು ಅಂದ್ರೆ, ಅದು ಕಾಂತಾರದಲ್ಲಿ, ಇಡೀ ಸಿನಿಮಾಗೆ ಬಿಗ್ ಟ್ವಿಸ್ಟ್ ಕೊಡುವ ಕನಕವತಿಯಾಗಿ ಸಖತ್ ಮಿಂಚಿದ್ದಾರೆ. ಪ್ರೀತಿಯ ಬಾಣ ಹಿಡಿದೂ ಸೈ ಎನಿಸಿಕೊಳ್ಳೋದರ ಜೊತೆ ಕತ್ತಿ ಹಿಡಿದು ಯುದ್ಧಭೂಮಿಯಲ್ಲಿ ಅಭಿಮಾನಿಗಳಿಂದ ಜೈಕಾರ ಹಾಕಿಸಿಕೊಂಡಿದ್ದಾರೆ. ಇದೆಲ್ಲದರ ಜೊತೆಗೆ ರುಕ್ಮಿಣಿ ವಸಂತ್ ಈ ಸಿನಿಮಾದ ಮೂಲಕ ನ್ಯಾಷನಲ್ ಕ್ರಶ್ ಆಗಿಯೂ ಸ್ಥಾನಗಿಟ್ಟಿಸಿಕೊಂಡಿದ್ದಾರೆ.

**ದೇಶದ ಹೆಮ್ಮೆಯ ಯೋಧ!**

ಕಾಂತಾರ ಸಿನಿಮಾದಲ್ಲಿ ರುಕ್ಮಿಣಿ ವಸಂತ್ ತಂದೆ ಜಯರಾಮ್ ಅವರದ್ದು ವಿಲನ್ ಕ್ಯಾರೆಕ್ಟರ್... ಆದರೆ ರಿಯಲ್ ಲೈಫ್‌ನಲ್ಲಿ ರುಕ್ಮಿಣಿ ವಸಂತ್ ತಂದೆ ವಸಂತ್ ವೇಣುಗೋಪಾಲ್ ರಿಯಲ್ ಹೀರೋ... ಮಗಳು ರುಕ್ಮಿಣಿ ವಸಂತ್‌ಗೆ ಮಾತ್ರವಲ್ಲ, ಇಡೀ ದೇಶಕ್ಕೆ ಅವರು ಹೀರೋ.



ರುಕ್ಮಿಣಿ ವಸಂತ್ ತಂದೆ ಹೆಸರು ಕರ್ನಲ್ ವಸಂತ್ ವೇಣುಗೋಪಾಲ್. ಭಾರತೀಯ ಸೇನೆಯಲ್ಲಿ ತಮ್ಮ ಜೀವನಪೂರ್ತಿ ಸೇವೆ ಸಲ್ಲಿಸಿ, ಈ ದೇಶಕ್ಕೋಸ್ಕರ ತಮ್ಮ ಪ್ರಾಣವನ್ನೇ ಅರ್ಪಿಸಿದವರು. ಜಮ್ಮು-ಕಾಶ್ಮೀರದ ವಿವಿಧ ಭಾಗದಲ್ಲಿ ಕಾರ್ಯ ನಿರ್ವಹಿಸಿರೋ ಕರ್ನಲ್ ವಸಂತ್ ವೇಣುಗೋಪಾಲ್, ಈ ದೇಶದ ಹೆಮ್ಮೆಯ ಯೋಧ.

**ಅಶೋಕ ಚಕ್ರ ಪಡೆದ ಮೊದಲ ಕನ್ನಡಿಗ...**

ಅದು 2007ರ ಕಾಲಘಟ್ಟ. ಎಂಟು ಮಂದಿ ಭಯೋತ್ಪಾದಕರು ಶಸ್ತ್ರಾಸ್ತ್ರಗಳೊಂದಿಗೆ ಗಡಿ ನುಸುಳಿ ಒಳಬಂದಿದ್ದರು. ಜಮ್ಮು ಮತ್ತು ಕಾಶ್ಮೀರದ ಉರಿ ಪ್ರದೇಶದಲ್ಲಿ ತಮ್ಮ ದುಷ್ಕೃತ್ಯ ಪ್ರದರ್ಶಿಸಿದ್ರು. ಈ ಪಾಪಿಗಳ ಜನ್ಮಜಾಲಾಡಲು ಅಖಾಡಕ್ಕಿಳಿದ ಭಾರತೀಯ ಸೇನೆಯ ವೀರರ ತಂಡದಲ್ಲಿದ್ದಿದ್ದು ಇದೇ ರುಕ್ಮಿಣಿ ವಸಂತ್ ತಂದೆ, ಕರ್ನಲ್ ವಸಂತ್ ವೇಣುಗೋಪಾಲ್. ಈ ವೇಳೆ ಸೇನೆ ಹಾಗೂ ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿತ್ತು. ಆ ಉಗ್ರ ಕಾಳಗದಲ್ಲಿ ಭಾರತದ ಮಣ್ಣಿಗೆ ಉಗ್ರರ ಬುಲೆಟ್ ತಗುಲದಂತೆ ತಡೆದ ಕರ್ನಲ್ ವಸಂತ್ ವೇಣುಗೋಪಾಲ್, ಅವೆಲ್ಲ ಗುಂಡುಗಳನ್ನು ತಮ್ಮ ದೇಹಕ್ಕೆ ಹೊಕ್ಕಿಸಿಕೊಂಡ್ರು. ಪರಿಣಾಮ ಯುದ್ಧಭೂಮಿಯಲ್ಲಿ ಅವರು ವೀರಮರಣ ಹೊಂದಬೇಕಾಯ್ತು. ಈ ಘಟನೆ ನಡೆಯುವಾಗ ರುಕ್ಮಿಣಿ ಇನ್ನೂ ಬಾಲಕಿ.

ಕರ್ನಲ್ ವಸಂತ್ ವೇಣುಗೋಪಾಲ್ ಧೈರ್ಯವನ್ನು ಮೆಚ್ಚಿದ ಭಾರತ ಸರ್ಕಾರ ಕರ್ನಲ್ ವಸಂತ್ ವೇಣುಗೋಪಾಲ್ರಿಗೆ ಅಶೋಕ ಚಕ್ರ ಪದಕವನ್ನು ನೀಡಿ ಗೌರವ ಸಲ್ಲಿಸಿದೆ. ಗಮನಾರ್ಹ ವಿಚಾರ ಏನಪ್ಪಾ ಅಂದ್ರೆ, ಕರ್ನಾಟಕದಲ್ಲಿ ಈ ಪದಕ ಪಡೆದ ಮೊದಲಿಗರು ರುಕ್ಮಿಣಿ ವಸಂತ್ ತಂದೆ!

**ರುಕ್ಮಿಣಿ ತಾಯಿಯೂ ದೇಶಪ್ರೇಮಿ...**

ರುಕ್ಮಿಣಿ ತಾಯಿ ಸುಭಾಷಿಣಿ ವಸಂತ್ ಕೂಡ ತಮ್ಮ ಗಂಡನಂತೆ ಅಪ್ರತಿಮ ದೇಶಪ್ರೇಮಿ. ತಮ್ಮ ಪತಿಯ ಅಗಲಿಕೆಯ ನಂತರ ರಾಷ್ಟ್ರ ಸೇವೆಯಲ್ಲಿ ತಮ್ಮನ್ನ ತಾವು ತೊಡಗಿಸಿಕೊಂಡಿದ್ದಾರೆ. ತಮ್ಮಂತೆಯೇ ಸೇನೆಯಲ್ಲಿ ತಮ್ಮ ಪತಿಯಂದಿರನ್ನ ಕಳೆದುಕೊಂಡ ಮಹಿಳೆಯರಿಗೆ ಶಕ್ತಿಯಾಗಿ ನಿಲ್ಲುವ ಧ್ಯೇಯೋದ್ದೇಶದಿಂದ 'ವೀರರತ್ನ' ಪ್ರತಿಷ್ಠಾನವನ್ನ ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಮೂಲಕ ಹುತಾತ್ಮ ಯೋಧರ ಪತ್ನಿಯರು ಮತ್ತು ಕುಟುಂಬಗಳಿಗೆ ಸಕಲ ಬೆಂಬಲ



ನೀಡಲಾಗುತ್ತಿದೆ. ಇದುವರೆಗೂ 100ಕ್ಕೂ ಹೆಚ್ಚು ಕುಟುಂಬಗಳ ಮಕ್ಕಳು ಶಿಕ್ಷಣ ಪಡೆಯಲು ನೆರವು ನೀಡಲಾಗಿದೆ.

ಹೀಗೆ ರುಕ್ಮಿಣಿ ಅಪ್ಪ ಹಾಗೂ ಅಮ್ಮ ಇಬ್ಬರು ದೇಶಕ್ಕೋಸ್ಕರ ತಮ್ಮ ಜೀವನವನ್ನೇ ಮುಡಿಪಾಗಿಟ್ಟವರು. ತಮ್ಮ ತಂದೆಯ ನೆನಪು ಸದಾ ತಮ್ಮೊಂದಿಗೆ ಇರಬೇಕು ಅನ್ನೋ ಕಾರಣಕ್ಕೆ ರುಕ್ಮಿಣಿ ತಮ್ಮ ಹೆಸರಿನ ಮುಂದೆ ತಮ್ಮ ತಂದೆಯ ಹೆಸರನ್ನ ಸೇರಿಸಿಕೊಂಡು ರುಕ್ಮಿಣಿ ವಸಂತ್ ಅಂತಲೇ ಖ್ಯಾತಿವೆತ್ತಿದ್ದಾರೆ. ಎನಿವೇ ಗುಡ್ ಲಕ್ ಕನಕಾವತಿ... ☯



## ಸಪ್ತಸಾಗರದಾಚೆ ಎಲ್ಲೋ..... ಪ್ರಿಯಾಳನ್ನು ಮರೆಯಲಾದಿತೇ?



ನಿಮಗೆಲ್ಲ ಗೊತ್ತಿರಬೇಕು. ರುಕ್ಮಿಣಿ ವಸಂತ್ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಟ್ಟಿದ್ದೆ ರಕ್ಷಿತ್ ಶೆಟ್ಟಿ ಅಭಿನಯದ ಸಪ್ತ ಸಾಗರದಾಚೆ ಎಲ್ಲೋ... ಚಿತ್ರದ ಮೂಲಕ. ಹೇಮಂತ್ ರಾವ್ ನಿರ್ದೇಶನದ ಅದು ಅದ್ಭುತ ಸತ್ಯ ದರ್ಶನ. ನಿಜ ಪ್ರೇಮ ಕಾವ್ಯ. ಅದರಲ್ಲಿ ರುಕ್ಮಿಣಿ 'ಪ್ರಿಯಾ' ಎಂಬ ಮಧ್ಯಮ ವರ್ಗದ ಹೆಣ್ಣು ಮಗಳ ಪಾತ್ರ. ಆ ಕಣ್ಣೀರು... ತ್ಯಾಗ....ನೆನೆದರೆ ಈಗಲೂ ದುಃಖ ಉಮ್ಮಳಿಸಿ ಬರುತ್ತದೆ. ನಂತರ 'ಸೈಡ್ ಬಿ' ಬಂತಲ್ಲ, ಅದರಲ್ಲಿ ಅವಳು ಪರಿಸ್ಥಿತಿಯ ಕೈಗೊಂಬೆ. ಹೊಸ ಬದುಕು. ಗಂಡ ಮನೆ ಮಕ್ಕಳು. ತಮ್ಮೆಲ್ಲರ ಸಂತೋಷದ ಹಿಂದೆ ಹಳೇ 'ಅಮರ ಪ್ರೇಮಿ' ಮನು (ರಕ್ಷಿತ್ ಶೆಟ್ಟಿ) ಇದ್ದಾನೆ ಅನ್ನೋದೇ ಆಕೆಗೆ ಗೊತ್ತಿರುವುದಿಲ್ಲ!

ಇನ್ನು, 'ಬಘೀರ' ಚಿತ್ರದ ವೈದ್ಯೆ, ಭೈರತಿ ರಣಗಲ್ ಚಿತ್ರದ ಗೃಹಿಣಿ ಪಾತ್ರಗಳು ಪರವಾಗಿಲ್ಲ ಅನ್ನುವಂತಿದ್ದವು. ಆದರೆ, ಇದೀಗ ಬೆಳ್ಳಿತೆರೆಯಲ್ಲಿ ಬೆಂಕಿ ಉಗುಳುತ್ತ ಸಾಗುತ್ತಿದೆಯಲ್ಲ 'ಕಾಂತಾರ - ಅಧ್ಯಾಯ 1' ಇದರಲ್ಲಿನ ಕನಕಾವತಿ ಪಾತ್ರ ಮಾತ್ರ ರುಕ್ಮಿಣಿ ಲೈಫಲ್ಲೇ ಅದ್ಭುತ ಅವಕಾಶ.... ಕೊನೆಯಲ್ಲಿ ತನ್ನ ಪಾತ್ರವು ತಾನು ಪ್ರೇಮಿಸಿದ ನಾಯಕನಿಂದಲೇ ಕೊಲ್ಲಲ್ಪಡುತ್ತದೆ ಅಂತ ಗೊತ್ತಿದ್ದೂ ಸಹ ಇಂತಹ ಪಾತ್ರ ನಿರ್ವಹಿಸಿದ್ದು.... ರುಕ್ಮಿಣಿ ಅಲ್ಲಲ್ಲ ಕನಕಾವತಿ ತಾಖತ್ತು ಕಣ್ರೀ!! ☯

# ಜಾರಿ ಬಿದ್ದು ಆಸ್ಪತ್ರೆ ಸೇರಿದ ಜಾಣನಿಗೆ ಲಿವರ್ ಕ್ಯಾನ್ಸರ್ ಇರೋದು ಗೊತ್ತಾಯಿತಲ್ಲ...

ಕನ್ನಡ ಚಿತ್ರರಂಗದ ಹಿರಿಯ ಹಾಸ್ಯನಟ ಎಂ.ಎಸ್. ಉಮೇಶ್ (80)ಅವರು ಇತ್ತೀಚೆಗೆ ತಮ್ಮ ಮನೆಯ ಬಾತ್‌ರೂಮ್‌ನಲ್ಲಿ ಕಾಲು ಜಾರಿ ಬಿದ್ದು ಗಾಯಗೊಂಡಿದ್ದರು. ಆಸ್ಪತ್ರೆಗೆ ದಾಖಲಾದ ನಂತರ ನಡೆದ ವೈದ್ಯಕೀಯ ಪರೀಕ್ಷೆಯಲ್ಲಿ ಅವರಿಗೆ ಲಿವರ್ ಕ್ಯಾನ್ಸರ್ ಇರುವುದು ದೃಢಪಟ್ಟಿದೆ! ಈ ಕಾಯಿಲೆ ಲಿವರ್‌ನಿಂದ ಇತರೆ ಅಂಗಗಳಿಗೆ ಹಬ್ಬಿದ್ದು, ಅವರು ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆಗೆ ಪಡೆಯುತ್ತಿದ್ದಾರೆ. ಹಿರಿಯ ನಟನ ಆರೋಗ್ಯ ವಿಚಾರಿಸಲು ಗಿರಿಜಾ ಲೋಕೇಶ್, ಶ್ರುತಿ ಅವರ ತಂದೆ ಕೃಷ್ಣ, ಡಿಂಗ್ರಿ ನಾಗರಾಜ್, ವಿನೋದ್‌ರಾಜ್ ಸೇರಿದಂತೆ ಹಲವಾರು ಕಲಾವಿದರು ಆಸ್ಪತ್ರೆಗೆ ಭೇಟಿ ನೀಡಿ ಯೋಗಕ್ಷೇಮ ವಿಚಾರಿಸಿದ್ದಾರೆ. ಶ್ರುತಿ ತಂದೆ ಕೃಷ್ಣ, ಉಮೇಶ್ ಅವರ ಆಪ್ತ ಸ್ನೇಹಿತರಾಗಿದ್ದು, ಇಬ್ಬರ ತುಂಟಾಟಗಳು,ನಾಟಕ ಅಭಿನಯ ಹಾಗೂ ತಮ್ಮಿಬ್ಬರ ಸಿನಿಮಾ ಜರ್ನಿ ಕುರಿತು ಒಂದಷ್ಟು ನೆನಪುಗಳನ್ನ ಹಂಚಿಕೊಂಡಿದ್ದಾರೆ. ಈ ವೇಳೆ ಗೆಳೆಯನ ಪರಿಸ್ಥಿತಿ ನೋಡಿ ಕೃಷ್ಣ ಅವರು ಕಣ್ಣೀರು ಹಾಕಿದ್ದಾರೆ. ಅಂದಹಾಗೆ, ಉಮೇಶ್ ಅವರಿಗೆ ಗಂಡು ಮಕ್ಕಳಿಲ್ಲ. ಒಬ್ಬ ಮಗಳಿದ್ದು ಆಕೆ ಇನ್ಫೋಸಿಸ್ ಉದ್ಯೋಗಿ.



ಉಮೇಶ್ ಅವರು ಕಳೆದ 65 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಕ್ರಿಯರಾಗಿರುವ ಹಿರಿಯ ನಟ. ಬಾಲನಟನಾಗಿ ಚಿತ್ರರಂಗ ಪ್ರವೇಶಿಸಿ ಸುಮಾರು 350ಕ್ಕೂ ಹೆಚ್ಚು ಸಿನಿಮಾಗಳಲ್ಲಿ ನಟಿಸಿ ಪ್ರೇಕ್ಷಕರ ಮನಗೆದ್ದಿದ್ದಾರೆ. ಡಾ. ರಾಜ್‌ಕುಮಾರ್, ವಿಷ್ಣುವರ್ಧನ್, ಅಂಬರೀಷ್, ಅನಂತ್‌ನಾಗ್..... ಎಲ್ಲರ ಜೊತೆಗೂ ನಟಿಸಿದ್ದಾರೆ.

ಅವರು ಕೋತಿಯನ್ನು ಅನುಕರಣೆ ಮಾಡೋದೇ ಒಂದು ಚಂದ.ಗೋಲ್ ಮಾಲ್ ರಾಧಾಕೃಷ್ಣ ಚಿತ್ರದಲ್ಲಿ ಅವರು ಸಿಹಿಕಹಿ ಚಂದ್ರು ಹೆಂಡ್ತಿಯನ್ನು ತಬ್ಬಿಕೊಂಡು ಪಶ್ಚಾತ್ತಾಪ ಪಡುವ ದೃಶ್ಯ ನೆನಪಾದರೆ ಇಂದಿಗೂ ಹೊಟ್ಟೆ ಹುಣ್ಣಾಗುವಷ್ಟು ನಗೆ ಉಕ್ಕುತ್ತದೆ. ಒಟ್ಟಾರೆ, ತಮ್ಮ ಹಾಸ್ಯ ಪಾತ್ರಗಳ ಮೂಲಕ ಪ್ರೇಕ್ಷಕರನ್ನು ನಗುವಿನ ಅಲೆಯಲ್ಲಿ ತೇಲಿಸಿರುವ ಎಂ.ಎಸ್. ಉಮೇಶ್ ಅವರು ಆದಷ್ಟು ಬೇಗ ಚೇತರಿಸಿಕೊಂಡು ಗುಣಮುಖರಾಗಿ ತಮ್ಮ ಕಲಾ ಕುಟುಂಬಕ್ಕೆ ಹಿಂತಿರುಗಲಿ ಎಂಬುದೇ ನಮ್ಮಾಸೆ... ☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 12.10.2025

# ನಟ್ಟು ಬೋಲ್ಟ್ ಟೈಟ್ ಆಯ್ತಾ?!

ನಿಯಂತ್ರಣ ಮಂಡಳಿ (ಯಾವುದು ಅಂತ ದಯವಿಟ್ಟು ಕೇಳ್ಬೇಡಿ) ನಿಯಮ ಉಲ್ಲಂಘನೆ ಆರೋಪದಡಿಯಲ್ಲಿ ಸೀಜ್ ಮಾಡಲಾಗಿದ್ದ ಬಿಗ್ ಬಾಸ್ ಅ ಮನೆಯನ್ನು ಕೊನೆಗೂ ತೆರೆಯಲಾಗಿದ್ದು, ರಾತ್ರೋ ರಾತ್ರಿ ಸ್ಪರ್ಧಿಗಳೂ ಕೂಡ ವಾಪಸ್ ಆಗಿದ್ದಾರೆ! ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಮಧ್ಯ ಪ್ರವೇಶದ ಬೆನ್ನಲ್ಲೇ ಸೀಜ್ ಮಾಡಲಾಗಿದ್ದ ಬಿಗ್ ಬಾಸ್ ಮನೆಯನ್ನು ತೆರೆಯಲಾಗಿದೆ.

ನಸುಕಿನ ಜಾವ 2:45ಕ್ಕೆ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಎಸ್ಪಿಶ್ರೀನಿವಾಸ್ ಗೌಡ, ತಹಶಿಲ್ದಾರ್ ತೇಜಸ್ವಿನಿ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಆಗಮಿಸಿ ಜಾಲಿವುಡ್ ಸ್ಟುಡಿಯೋದ ಗೇಟ್ ಸೀಲ್ ಓಪನ್ ಮಾಡಿದ್ದಾರೆ ಎಂದು ತಿಳಿದು ಬಂದಿದೆ! ಗವರ್ನಮೆಂಟ್ ಅಧಿಕಾರಿಗಳು ಹಗಲೊತ್ತು ಡ್ಯೂಟಿ ಮಾಡುವುದೇ ಹೆಚ್ಚು, ರಜಾ ದಿನವೇ ಡ್ಯೂಟಿ ಮಾಡಿ ಬೀಗ ಜಡಿದು ಸ್ವಾಮಿನಿಷ್ಠೆ ಬೇರೆ ಮೆರೆದಿದ್ದರು. ಈವಾಗ ಇನ್ನೂ ಒಂದೆಜ್ಜೆ ಮುಂದೆ ಹೋಗಿ ಬೆಳಗಿನ ಜಾವ ಡ್ಯೂಟಿ ಮಾಡಿದ್ದಾರೆ! ಬೆಂಗಳೂರು ದಕ್ಷಿಣದ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ನಿರ್ದೇಶನದಂತೆ ಬಾಗಿಲು ತೆರೆದಿದ್ದೇವೆ, ಜಾಲಿವುಡ್ ಸಂಪೂರ್ಣ ಕಾರ್ಯಾಚರಣೆ ನಡೆಸಲು ಅವಕಾಶ ನೀಡಿಲ್ಲ,



ಕೇವಲ ಬಿಗ್ ಬಾಸ್ ಶೋ ಸ್ಪರ್ಧಿಗಳು, ಸಿಬ್ಬಂದಿ ಓಡಾಟ ಹಾಗೂ ಅಗತ್ಯ ವಸ್ತುಗಳ ಬಳಕೆಗೆ ಮಾತ್ರ ಅವಕಾಶ ನೀಡಲಾಗಿದೆ... ಎಂದು ಹೇಳಿದ್ದಾರೆ. ಸದ್ಯಕ್ಕೆ ಬಿಗ್ ಬಾಸ್ ಶೋ ನಡೆಯುವ ಜಾಗ ಮಾತ್ರ ತೆರೆಯಲಾಗಿದೆ. ಸರ್ಕಾರದಿಂದ ಅನುಮತಿ ಸಿಕ್ಕಿದ ಹಿನ್ನೆಲೆಯಲ್ಲಿ ರಾತ್ರೋ ರಾತ್ರಿ ಬಿಗ್ ಬಾಸ್ ಸಿಬ್ಬಂದಿ ಕ್ಯಾಬ್ ಮೂಲಕ ಆಗಮಿಸಿದ್ದಾರೆ. ಬಿಡದಿಯ ಈಗಲ್ಟನ್ ರೆಸಾರ್ಟ್‌ನಲ್ಲಿದ್ದ ಸ್ಪರ್ಧಿಗಳು ವಾಪಸ್ ಬಿಗ್ ಬಾಸ್ ಮನೆಗೆ ಮರಳಿದ್ದಾರೆ.

**ನಟ್ಟು ಬೋಲ್ಟ್ ಟೈಟ್?!**

ಬಿಗ್ ಬಾಸ್... ಪ್ರಾಬ್ಲಮ್ ಸಾಲ್ವ್ ಆಗಿ ಮತ್ತೆ ಶೋ ಮುಂದುವರೆಯುವಲ್ಲಿ ಕಿಚ್ಚ ಸುದೀಪ್ ಅವರ ಶ್ರಮ ಸಾಕಷ್ಟಿದೆ! ಅವರು ಮಾಡಿದ ಒಂದೆರಡು ಫೋನ್ ಕರೆಗಳಿಂದಲೇ ಶೋ ಪುನಃ ಪ್ರಾರಂಭಕ್ಕೆ ಅವಕಾಶ ದೊರೆತಿದೆ. ಜಾಲಿವುಡ್‌ಗೆ ಬೀಗ ಹಾಕುವುದಕ್ಕೂ ಬಿಗ್ ಬಾಸ್ ಶೋಗೂ ಸಂಬಂಧವಿಲ್ಲ, ಮುಖ್ಯವಾಗಿ, ಡಿ.ಕೆ. ಸಾಹೇಬ್ರಿಗೂ ಈಗಿನ ಘಟನೆಗೂ ಸಂಬಂಧವಿಲ್ಲ.... ಇದೆಲ್ಲ ಸಾಧುಕೋಕಿಲ ಕಿತಾಪತಿ...ಎಂದ ಬಳಿಕ ಸುದೀಪ್ ಕೆಲ ರಾಜಕಾರಣಿಗಳಿಗೆ ಕರೆ ಮಾಡಿ, ಏನೂ ತಪ್ಪಿಲ್ಲದ ಬಿಗ್ ಬಾಸ್ ಶೋ ಅನ್ನು ಮತ್ತೆ ನಡೆಸಿಕೊಡಲು ಅನುಮತಿ ನೀಡುವಂತೆ ಮನವಿ ಮಾಡಿದ್ದರು.ಮುಖ್ಯವಾಗಿ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಕರೆ ಮಾಡಿ ಮನವಿ ಮಾಡಿದ್ದರು! ಸುದೀಪ್ ಅವರಿಗೆ ಹ್ಯಾರಿಸ್ ಮಗ ನಲಪಾಡ್ ಸಹಾಯ ಮಾಡಿದ್ದಾಗಿ ಅವರೇ ಹೇಳಿಕೊಂಡಿದ್ದಾರೆ!! ಮುಂದಿನದೆಲ್ಲ ಹ್ಯಾಪಿ ಹ್ಯಾಪಿ...

**ಡಿಕೆಶಿ ಟ್ವೀಟ್...**

ಬಿಗ್ ಬಾಸ್ ಕನ್ನಡ ಚಿತ್ರೀಕರಣ ನಡೆಯುತ್ತಿರುವ ಬಿಡದಿಯಲ್ಲಿರುವ ಜಾಲಿವುಡ್ ಆವರಣದ ಸೀಲ್ ಅನ್ನು ತೆಗೆದು ಹಾಕಲು ಬೆಂಗಳೂರು ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿಗೆ ನಾನು ನಿರ್ದೇಶನ ನೀಡಿದ್ದೇನೆ ಎಂದು ಡಿಸಿಎಂ ಡಿಕೆಶಿ ಹೇಳಿರುವುದಾಗಿ ತಮ್ಮ ಟ್ವೀಟರ್ ಖಾತೆಯಲ್ಲಿ ಪ್ರಕಟಿಸಿದ್ದಾರೆ.



ಪರಿಸರ ನಿರ್ವಹಣೆ ಪ್ರಮುಖ ಆದ್ಯತೆಯಾಗಿ ಉಳಿದಿದ್ದರೂ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಗದಿಪಡಿಸಿದ ಮಾನದಂಡಗಳಿಗೆ ಅನುಗುಣವಾಗಿ ಉಲ್ಲಂಘನೆಗಳನ್ನು ಪರಿಹರಿಸಲು ಸ್ಟುಡಿಯೋಗೆ ಸಮಯ ನೀಡಲಾಗುವುದು. ಪರಿಸರ ಸಂರಕ್ಷಣೆಯ ಕಡೆಗೆ ನಮ್ಮ ಜವಾಬ್ದಾರಿಯನ್ನು ಎತ್ತಿಹಿಡಿಯುವುದರ ಜೊತೆಗೆ ಕನ್ನಡ ಮನರಂಜನಾ ಉದ್ಯಮವನ್ನು ಬೆಂಬಲಿಸಲು ನಾನು ಬದ್ಧನಾಗಿರುತ್ತೇನೆ ಎಂದು ತಿಳಿಸಿದ್ದಾರೆ.

**ಸುದೀಪ್ ಧನ್ಯವಾದ**

ಡಿಸಿಎಂ ಅವರ ಈ ಟ್ವೀಟ್‌ಗೆ ಕಿಚ್ಚ ಸುದೀಪ್, ಅಗತ್ಯ ಸಮಯದಲ್ಲಿ ಅಗತ್ಯ ನೆರವು ನೀಡಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಧನ್ಯವಾದಗಳು, ಹಾಗೆಯೇ ಜಾಲಿವುಡ್ ಸ್ಟುಡಿಯೋನಲ್ಲಿ ಆಗಿರುವ ಸಮಸ್ಯೆಗೂ ಬಿಗ್ ಬಾಸ್ ಕನ್ನಡಕ್ಕೂ ಸಂಬಂಧವಿಲ್ಲ, ಬಿಗ್ ಬಾಸ್ ಕನ್ನಡ ಶೋನಿಂದ ಯಾವುದೇ ತಪ್ಪು ಆಗಿಲ್ಲವೆಂದು ಗುರುತಿಸಿದ ಅಧಿಕಾರಿಗಳಿಗೂ ಧನ್ಯವಾದಗಳು. ನನ್ನ ಕರೆಗೆ ಶೀಘ್ರವೇ ಸ್ಪಂದಿಸಿದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಹಾಗೂ ಸಹಾಯ ಮಾಡಿದ ನಲಪಾಡ್ ಅವರಿಗೆ ಧನ್ಯವಾದಗಳು. ಬಿಗ್ ಬಾಸ್ ಕನ್ನಡ ಸದಾ ಇರಲಿದೆ ಎಂದಿದ್ದಾರೆ. ಇದೆಂಥ ಹೈ ಡ್ರಾಮಾ...?! ಹೌಲ ಹೌಲ.....!! ☯

# 'ಬಿಸಿಲು ಕುದುರೆ'ಗೆ 3ನೇ ಅತ್ಯುತ್ತಮ ಚಲನಚಿತ್ರ ಪ್ರಶಸ್ತಿ ಗರಿ....

ಹುಡುಗಾಟ, ಗಾಳಿಪಟ, ಪಲ್ಲಕ್ಕಿ, ಪಯಣ, ಸತ್ಯ ಇನ್ ಲವ್, ಮಿಲನ... ಸೇರಿದಂತೆ ಮುನ್ನೂರಕ್ಕೂ ಹೆಚ್ಚು ಗೀತೆಗಳನ್ನು ರಚಿಸಿರೋ ಕನ್ನಡ ಚಿತ್ರರಂಗದ ಖ್ಯಾತ ಚಲನಚಿತ್ರ ಗೀತಾ ರಚನಕಾರ ಹೃದಯ ಶಿವ ಕವಿಯೂ ಹೌದು, ಕಥಾ ಲೇಖಕರು ಹೌದು. ಒಟ್ಟಾರೆ ಹೇಳಬೇಕು ಅಂದರೆ, ಅವರು ಒಳ್ಳೆಯ ಬರಹಗಾರರು. ಅವರು ಹಾಡುಗಳನ್ನು ಎಷ್ಟು ಚೆನ್ನಾಗಿ ಬರೆಯುತ್ತಾರೋ, ಅದಕ್ಕಿಂತಲೂ ಹೆಚ್ಚಾಗಿ ವಾಸ್ತವ ಘಟನೆಗಳು ಸಾಮಾಜಿಕ ಪಿಡುಗುಗಳ ಬಗ್ಗೆ ಬರೆಯುತ್ತಾರೆ. ಜಾತಿ ಕುರಿತು ಅವರು ಬರೆದಿರೋ 'ಪಂಜು', ದೊಡ್ಡಹಟ್ಟಿ ಸಣ್ಣೇಗೌಡ ಕಥಾ ಸಂಕಲನ... ಬಹಳ ಚನ್ನಾಗಿವೆ.

ಅಂಥ ಬರಹಗಾರರಿಗೆ ಇಲ್ಲಿ ಸಿಗಬೇಕಾದ ಮಾನ್ಯತೆ, ಗೌರವ ಇನ್ನೂ ಸಿಕ್ಕಿಲ್ಲ ಎಂಬುದು ನಮ್ಮ ನೋವಿನ ನುಡಿ. ಬಹುಶಃ ಅವರು ಕುರುಬರಾಗಿರದೆ ಬ್ರಾಹ್ಮಣರೋ ಜೈನರೋ ಆಗಿದ್ದರೆ, ಇಷ್ಟೊತ್ತಿಗೆ ಅವೇನೇನು ಪ್ರಶಸ್ತಿ ಪುನಸ್ಕಾರಗಳಿವೆಯೋ ಅವೆಲ್ಲ ಧಾರಣೆ ಆಗಿರುತ್ತಿತ್ತೇನೋ! ಇರಲಿ, ಗೀತಾರಚನಕಾರರಾಗಿದ್ದ ಹೃದಯ ಶಿವ ಕೆಲ ವರ್ಷಗಳ ಹಿಂದೆ ನಿರ್ದೇಶಕರಾಗಲು ಯತ್ನಿಸಿದಾಗ ಪ್ರೇಮ್ ನಟನೆಯಲ್ಲಿ 'ಮೊದಲ ಮಳೆ' ಅನ್ನೋ ಸಿನಿಮಾ ಶುರು ಮಾಡಿದ್ದು ಅಂದಿಗೆ ದೊಡ್ಡ ಸುದ್ದಿ ಆಗಿತ್ತು. ಆದರೆ ಅದು ಸದ್ದಿಲ್ಲದೇ ನಿಂತು ಹೋಯ್ತು. ಮುಂದೆ ಇನ್ನಾರೋ ತಮಿಳು ತೆಲುಗು ಮಲೆಯಾಳಿ ಭಾಷೆಗಳ ಸಿನಿಮಾಗಳು ಕನ್ನಡಕ್ಕೆ ಡಬ್ ಆಗುತ್ತವಲ್ಲ, ಅವಕ್ಕೆ ಖಾಯಂ ಆಗಿ ಹಾಡು ಬರೆಯೋದು ನಮ್ಮ ಹೃದಯ ಶಿವನೇ. ಹೀಗಾಗಿ ನೆರೆಹೊರೆ ಸಂಪರ್ಕ ಚನ್ನಾಗಿದೆ.



2023 ರಲ್ಲಿ ತಮಿಳಿನಲ್ಲಿ ಒಂದು ಕೈ ನೋಡುವ ಅಂತ ಚೆನ್ನೈಗೆ ತೆರಳಿದ್ದ ಹೃದಯ ಶಿವ 'ಮಾತಂಗಿ' ಅಂತೊಂದು ಪ್ರಾಜೆಕ್ಟ್ ಮಾಡಿದ್ರು. ರಮ್ಯಕೃಷ್ಣ ಅದರ ನಾಯಕಿ. ಅಂತಿಮವಾಗಿ ಅದರ ನಿರ್ದೇಶಕ ಇನ್ನಾರೋ ಆದದ್ದು ಟೈಟಲ್ ಕಾರ್ಡ್ ನೋಡಿದ ಮೇಲೆ ತಿಳಿಯಿತು! ಈ ನಡುವೆ ತಾವೇ ನಿರ್ಮಾಪಕ, ನಿರ್ದೇಶಕರಾಗಿ 'ಬಿಸಿಲು ಕುದುರೆ' ಅನ್ನೋ ಸಿನಿಮಾ ಚಿತ್ರಿಸಿದರು. ಬಗರ್ ಹುಕುಂ... ಹೋರಾಟದ ಕಥಾ ಹಂದರ ಹೊಂದಿದ್ದ ಈ ಚಿತ್ರದಲ್ಲಿ ಉತ್ತಮ ಕಲಾವಿದರಿದ್ದರೆ ಹೊರತು, ಸೂಪರ್ ಸ್ಟಾರ್ಸ್ ಇರಲಿಲ್ಲ, ಹೀಗಾಗಿ ಬಾಕ್ಸ್ ಆಫೀಸ್‌ನಲ್ಲಿ ಅಂಥ ಸದ್ದು ಮಾಡಲಿಲ್ಲ, ಆದರೆ, ಇದೊಂದು ಉತ್ತಮ ಸಿನಿಮಾ ಎಂಬ ಹೆಗ್ಗಳಿಕೆ ಪ್ರಾಪ್ತವಾಗಿತ್ತು. ಇದೀಗ ಈ ಸಿನಿಮಾಗೆ ರಾಜ್ಯ ಸರ್ಕಾರದಿಂದ ಮೂರನೇ ಅತ್ಯುತ್ತಮ ಚಿತ್ರ ಪ್ರಶಸ್ತಿ ಘೋಷಣೆಯಾಗಿದೆ.




ಅಂತೂ ಮೊದಲ ಚಿತ್ರದಲ್ಲೇ ನಮ್ಮ ಹೃದಯಶಿವ ಪ್ರಶಸ್ತಿ ಗಿಟ್ಟಿಸಿದ್ದಾರೆ. ಗೀತ ರಚನಾ ಕಾರರಾಗಿ ಮುನ್ನೂರಕ್ಕೂ ಹೆಚ್ಚಿನ ಹಾಡುಗಳನ್ನು ಬರೆದಿರುವ ಹೃದಯ ಶಿವ ಇನ್ಮುಂದೆ ನಿರ್ದೇಶಕರಾಗಿ ಕನ್ನಡ ಚಿತ್ರರಂಗಕ್ಕೆ ಒಳ್ಳೊಳ್ಳೆ ಸಿನಿಮಾಗಳನ್ನು ಕೊಡಲಿ ಎಂಬುದೇ ನಮ್ಮೆಲ್ಲ ಸ್ನೇಹಿತರ ಹಾರೈಕೆ... ☯

# ಸೂಪರ್ ಸ್ಟಾರ್ ಸರಳ ಬದುಕು...

ಕರೂರು ಕಾಲ್ತುಳಿತ ಪ್ರಕರಣದ ಬಳಿಕ ತಮಿಳುನಾಡು ರಾಜಕೀಯ ರಂಗ ಹತ್ತಿಕೊಂಡು ಉರಿಯುತ್ತಿದೆ.... ಡೈರೆಕ್ಟ್ ಮುಖ್ಯಮಂತ್ರಿ ಆಗಲು ಸಿದ್ಧತೆ ನಡೆಸಿರೋ ದಳಪತಿ ವಿಜಯ್‌ಗೆ ನಾನಾ ಕಂಟಕ ಶುರುವಾಗಿದೆ. ಇಂಥ ಸಂದರ್ಭದಲ್ಲೇ ಸೂಪರ್ ಸ್ಟಾರ್ ರಜನೀಕಾಂತ್ ಅವರು ಚೆನ್ನೈ ತೊರೆದು ಹಿಮಾಲಯ ಸೇರಿಕೊಂಡಿದ್ದಾರೆ. ರಜನಿ ಬಹಳ ಬುದ್ಧಿವಂತರು ಅನ್ನುವುದಕ್ಕಿಂತ, ಅವರು ಪ್ರತಿ ವರ್ಷ ಉತ್ತರ ಖಂಡ ಯಾತ್ರೆ ಕೈಗೊಳ್ಳುವುದೇ ಈ ಸಂದರ್ಭದಲ್ಲಿದಲ್ಲಿ ಅನ್ನೋದು ಉತ್ತಮ. ನಿಮಗೇ ಗೊತ್ತಿರೋ ಹಾಗೆ, ರಜನಿ ಬಾಬಾಜಿ ಭಕ್ತರು. ಹರಿದ್ವಾರ, ಹೃಶಿಕೇಶ ಮಾತ್ರವಲ್ಲದೆ, ಚಾರ್‌ದಾಮ್ ಎಂದೇ ಖ್ಯಾತಿವೆತ್ತ ಕೇದಾರ್ ನಾಥ, ಬದರಿನಾಥ, ಗಂಗೋತ್ರಿ, ಯಮುನೋತ್ರಿ... ದರ್ಶನ ಮಾಡುತ್ತಾರೆ. ಅಲ್ಲದೆ ವಿಶೇಷವಾಗಿ ಹಿಮಾಲಯದಲ್ಲಿರೋ ಬಾಬಾಜಿ ಗುಹೆ ಹೊಕ್ಕಿ ಗಂಟೆ ಗಟ್ಟಲೆ ಕುಳಿತು ಧ್ಯಾನ ಮಾಡುತ್ತಾರೆ ರಜನಿ!



ನೀವು ಗಮನಿಸಿರಬಹುದು.ಅವರು ಯಾತ್ರೆ ಹೊರಟಾಗ ತಮ್ಮ ಜೊತೆಗೆ ಒಬ್ಬರು ಅಥವಾ ಇಬ್ಬರು ಸ್ನೇಹಿತರನ್ನು ಕರೆದೊಯ್ಯುತ್ತಾರೆ. ಥೇಟ್ ರೈತನ ಹಾಗೆ ಪಂಚೆ ಧರಿಸಿಕೊಂಡು, ಹೆಗಲ ಮೇಲೆ ಟವಲ್ ಹಾಕಿಕೊಂಡು ರಸ್ತೆ ಬದಿಯಲ್ಲಿ ಇಡ್ಲಿ ಉಪ್ಪಿಟ್ಟು ಸವಿಯುತ್ತಾರೆ. ಟೀ ಕುಡಿಯುತ್ತಾರೆ. ಸಹಸ್ರಾರು ಕೋಟಿ ಒಡೆಯನಿಗೆ ಇಂಥ ಸರಳ ಜೀವನ ಹೇಗೆ ಒಲಿಯಿತೋ?! ನಮ್ಮಲ್ಲೂ ಕೆಲವರಿದ್ದಾರೆ. ನಾನು ಹುಟ್ತಾನೇ ಚಿನ್ನದ ಸ್ಪೂನ್ ಬಾಯಲ್ಲಿತ್ತು ಅಂತಾರೆ! ಇನ್ನೊಬ್ಬ ಯಡಬಿಡಂಗಿ, ಪುನೀತ್ ರಾಜ್‌ಕುಮಾರ್ ಹತ್ರ ಇರೋ ಕಾರ್ ನನ್ ಹತ್ರಾನೂ ಇದೆ...ಅಂತಾನೆ!! ತುಂಬಿದ ಕೊಡ ತುಳುಕುವುದಿಲ್ಲ, ಇಂಥ ದದ್ದು ಮಡಕೆಗಳು ಭಾರಿ ಸದ್ದು ಮಾಡ್ತವೆ ನೋಡ್ರಿ!!! ☯

Vol. 41 No. 19 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com